BROWN BOOK

TIGHT BINDING

UNIVERSAL LIBRARY
OU_198564
UNIVERSAL LIBRARY

ಕರ್ನಾಟಕ ಸತ್ಪುರುಷ ಮಂಡಲ ಭಾಗ ೪.

ಶ್ರೀ

# ಅಕ್ಕಲಕೋಟೀ ಮಹಾರಾಜರ

## ಚರಿತ್ರೆಯು.


ಲೇಖಕ—

ಮಾರ್ತಂಡ ಬಾಳಾಜಿ ಕುಲಕರ್ಣಿ,

ಸ್ಕೂಲ ಮಾಸ್ತರ ನಾವಳ್ಳಿ.



ಪ್ರಕಾಶಕ—

ಯಲ್ಲೋ ಗುಡ್ಡೋ ಕುಲಕರ್ಣಿ,

ಎಡಿಟರ ಸ. ಚ. ಆನಂದವನ.

1922.

ಬೆಲೆ ೮ ಆಣೆ.


“ಆನಂದವನ-ಆಗಡಿಯ ಶ್ರೀ
ಶೇಷಾಚಲ ಪ್ರಿಂಟಿಂಗ ಪ್ರೆಸ್ಸಿ”
ನಲ್ಲಿ ಭಿ. ಪ. ಕಾಳೆ, ಇವರಿಂದ
ಮುದ್ರಿಸಲ್ಪಟ್ಟಿತು.

# ಪ್ರಸ್ತಾವನೆ.

ಸಮಸ್ತ ಸಮಾಜಕ್ಕೂ ಉಪಯೋಗ ಬೀಳುವಂಥ ಹಾಗು ನಿಜವಾಗಿ ರಾಷ್ಟ್ರ ಕಲ್ಯಾಣ ಮಾಡಿದಂಥ ಮಹಾತ್ಮರ ಚರಿತ್ರ ಬರೆಯಬೇಕೆಂದು ನನ್ನ ಮನಸ್ಸಿನಲ್ಲಿದ್ದದರಿಂದ ಮತ್ತು ಬೇರೆಬೇರೆ ಕಾಲದ ಸತ್ಪುರುಷರ ಚರಿತ್ರಗಳನ್ನು ಒಟ್ಟುಗೂಡಿಸಿದರೆ ಅದೊಂದು ರಾಷ್ಟ್ರದ ನೈತಿಕ-ಸಾಮಾಜಿಕ ಇತಿಹಾಸವು ಸಿದ್ಧವಾಗುವದರಿಂದ ಪ್ರಸ್ತುತದ ಚರಿತ್ರವನ್ನು ಬಹು ಪರಿಶ್ರಮಪಟ್ಟು ಬರೆದು ನಮ್ಮ ಕನ್ನಡ ವಾಚಕರಿಗೆ ಸಮರ್ಪಿಸಿರುವೆನು. ಮಹಾತ್ಮರ ಪ್ರಭಾವವನ್ನರಿತು ಈ ಚರಿತ್ರವಾಚನದಿಂದಾಗುವ ಲಾಭವನ್ನು ಪಡೆಯುವದು ವಾಚಕರನ್ನೇ ಕೂಡಿಕೊಂಡಿರುವದು.

ಈ ಚರಿತ್ರೆಯಲ್ಲಿ ಸರ್ವರೂ ಮನನ ಮಾಡುವಂಥ ಪ್ರಸಂಗಗಳು ಹಲವು ಬಂದಿರುತ್ತವೆ. ಇದರಲ್ಲಿ ಸಜ್ಜನರ ಧರ್ಮಗಳು, ಗುರುಭಕ್ತಿ ವಿಚಾರ, ಕಾವ್ಯ ಭಕ್ತಿಯ ಮೀಮಾಂಸೆ ಮೊದಲಾದ ಬೋಧಪರ ವಿಷಯಗಳು ಬಹು ಸಮೀಚೀನವಾಗಿ ವರ್ಣಿಸಲ್ಪಟ್ಟಿವೆ; ದುರ್ಜನರು ಹ್ಯಾಗೆ ತಿರಸ್ಕರಣೀಯರಾಗುವರೆಂಬದನ್ನೂ ಸದಾಚಾರ ಸಂಪನ್ನರು ಕ ಗೆ ಸನ್ಮಾನ ಹೊಂದುವರೆಂಬದನ್ನೂ ಈ ಚರಿತ್ರವು ಬೋಧಿಸುತ್ತದೆ. ಒಟ್ಟಿ ್ರರುಷರು ಎಲ್ಲ ಧರ್ಮದವರಿಗೂ ಸಮಾನ ಪ್ರಿಯರಿದ್ದು, ಅವರಿಂದ ಎಷ್ಟರಮ. ಲೋಕ ಕಲ್ಯಾಣವು ಸಾಧಿಸುತ್ತದೆಂಬದನ್ನು ಈ ಚಿಕ್ಕ ಪುಸ್ತಕದಲ್ಲಿ ದಿಗ್ದರ್ಶನ ಮಾಡಿರುತ್ತದೆ. ಸತ್ಪುರುಷರು ಯಾವ ಪಂಥದವರಿದ್ದರೂ ಲೋಕ ಪ್ರಿಯರಾಗುವರು. ಆದ್ದರಿಂದ ಈ ಚರಿತ್ರವನ್ನು ನಮ್ಮ ಕನ್ನಡ ಬಂಧುಗಳು ಮನಃಪೂರ್ವಕವಾಗಿ ಓದಿ ಅಂಶತಃ ಆದರೂ ಸಜ್ಜನರ ಅನುಕರಣಮಾಡುವರೆಂದು ಬಯಸುತ್ತೇನೆ. ಸಮಾಜದಲ್ಲಿ ಈ ಪ್ರಕಾರ ಸಜ್ಜನಧರ್ಮಾನುಕರಣವು ಹೆಚ್ಚುವಂತೆ ಅನುಗ್ರಹಿಸಲೆಂದು ದಯಾಘನನಾದ ಶ್ರೀ ಶೇಷಾಚಲೇಶ್ವರನನ್ನು ಪ್ರಾರ್ಥಿಸಿ ಈ ಚಿಕ್ಕ ಪ್ರಸ್ತಾವನೆಯನ್ನು ಮುಗಿಸಿ ವಿಶ್ರಮಿಸುವೆನು.

| | |
|---|---|
| ಆನಂದವನ | ಸಜ್ಜನ ವಿಧೇಯ, |
| ತಾ॥ ೧೪-೧೧-೨೨ | ಮಾರ್ತಂಡ ಬಾಳಾಜಿ ಕುಲಕರ್ಣಿ, |

# ವಿಷಯಾನುಕ್ರಮಣಿಕೆ.


| ಪ್ರಕರಣ | ವಿಷಯ | ಪುಟ |
|---|---|---|
| ೧ ನೆಯಪ್ರಕರಣ | ಅವತರಣಿಕೆ | ೧ |
| ” | ಮಂಗಳವೇಢೆಯಭಾಗ್ಯ | ೯ |
| ೨ನೆ ಯಪ್ರಕರಣ | ಕಾಲಕ್ರಮಣ. | ೧೪ |
| ೩ ನೆಯ ” | ಅಕ್ಕಲಕೋಟೆಯಲ್ಲಿ ಭಕ್ತರ ಸಮಾಗಮ. | ೧೯ |
| ೪ನೆ ಯ ” | ಸಾಧುತ್ವ. | ೨೫ |
| ೫ ನೆಯ ” | ಉನ್ಮತ್ತಶಾಸ್ತ್ರಿಯಲ್ಲಿ ವೈರಾಗ್ಯೋತ್ಪತ್ತಿ. | ೩೩ |
| ೬ ನೆಯ ” | ಒಬ್ಬಸ್ತ್ರೀಯ ದುಷ್ಕರ್ಮಕಥನ. | ೩೭ |
| ೭ ನೆಯ ” | ಕೆಲವು ಅಮಾನುಷ ಸಂಗತಿಗಳು. | ೪೧ |
| ೮ ನೆಯ ” | ಕಾಮ್ಯ ಭಕ್ತಿಯ ಮೀಮಾಂಸೆ | ೫೦ |
| ೯ ನೆಯ ” | ಕಾಮುಕ ಭಕ್ತರ ಸುಳಿದಾಟ. | ೫೭ |
| ೧೦ ನೆಯ ” | ಗುರುವೇ ಪರ ಶಿವನು. | ೬೩ |
| ೧೧ ನೆಯ ” | ದೇವ ದೃಷ್ಟಾಂತ | ೬೭ |
| ೧೨ ನೆಯ ” | ಸೇವಾಧರ್ಮ | ೭೨ |
| ೧೩ ನೆಯ ” | ಬ್ರಹ್ಮೈಕ್ಯ | ೭೫ |
| ೧೪ ನೆಯ ” | ಉಪಸಂಹಾರ. | ೭೯ |

# ಶ್ರೀ ಅಕ್ಕಲಕೋಟೀ ಸ್ವಾಮಿಗಳ ಚರಿತ್ರೆ.

## ೧ನೆಯ ಪ್ರಕರಣ.

### ಅವತರಣಿಕೆ.

ಯಾವ ಭಾಷೆಯಲ್ಲಾದರೂ ಸತ್ಪುರುಷರ ಚರಿತ್ರ ಬರೆಯಬೇಕಾದರೆ ಬರೆಯುವವರಲ್ಲಿ ಇಬ್ಬಗೆಯಾದ ದೃಷ್ಟಿಯು ಇರಬೇಕಾಗುತ್ತದೆಂದು ಸಾಮಾನ್ಯವಾಗಿ ಹೇಳಲಾಗುವದು. ಯಾಕಂದರೆ ಸತ್ಪುರುಷರಂಥ ಲೋಕೋತ್ತರ ವ್ಯಕ್ತಿಗಳಲ್ಲಿ ಸರ್ವಾಂಗ ಸಂದರವಾದ ಲೋಕ ಕಲ್ಯಾಣಗುಣವು ಮೂರ್ತೀಭವಿಸಿರುತ್ತದೆ. ನಿವೃತ್ತಿಗೆ ಪ್ರವೃತ್ತಿಯನ್ನು ಸಾಧನವನ್ನಾಗಿ ಮಾಡಿತೋರಿಸುವ ದೊಡ್ಡ ಶಕ್ತಿಯು ಅವರಲ್ಲಿರುತ್ತದೆ. ಆದ್ದರಿಂದ ಇಂಥ ಮಹಾಪುರುಷರ ಜೀವನಚರಿತ್ರೆಗಳನ್ನು ಲೇಖರೂಪದಿಂದ ಕಥನಮಾಡಬೇಕಾದರೆ ಮೇಲೆ ಹೇಳಿದಂತೆ ಗ್ರಂಥಕಾರನಲ್ಲಿ ಪ್ರವೃತ್ತಿ-ನಿವೃತ್ತಿ ರೂಪವಾದ ಇಬ್ಬಗೆಯ ದೃಷ್ಟಿಯು ಇರಲೇ ಬೇಕೆಂಬದು ನಿರ್ವಿವಾದವು!

ಪ್ರವೃತ್ತಿದೃಷ್ಟಿಯಿಂದ ಸಜ್ಜನರ ಜೀವನರಹಸ್ಯಗಳನ್ನು ಬರೆಯುವದೆಂದರೆ ಒಂದು ಬಗೆಯಿಂದ ಆ ಕಾಲದ ಸಾಮಾಜಿಕ ಪರಿಸ್ಥಿತಿಯ ಇತಿಹಾಸವನ್ನು ಬೈಲಿಗೆಳೆಯುವದೆಂದೇ ಹೇಳಬೇಕಾಗುವದು. ಯಾವ ಕಾಲದಲ್ಲಿ ಸಜ್ಜನರು ಉದಯರಾದರೋ ಆಕಾಲದಲ್ಲಿಯ ಪರಿಸ್ಥಿತಿಯು ಹೇಗಿತ್ತು? ಜನರಲ್ಲಿ ಯಾವ ಬಗೆಯ ವಿಚಾರಗಳು ಮನೆಮಾಡಿದ್ದವು? ಅವರ ಐಹಿಕಸುಖದ ಹಂಬಲವು ಎಷ್ಟಿತ್ತು? ನೈತಿಕಬಲವು ಯಾವ ಪ್ರಮಾಣದಲ್ಲಿತ್ತು? ಇವೇ ಮೊದಲಾದ ಸಂಗತಿಗಳ ಸ್ಪಷ್ಟೀಕರಣದಿಂದ ಸಾಮಾಜಿಕ ಐತಿಹಾಸದ ದಿಗ್ದರ್ಶನವು ಸಹಜವಾಗಿ ಆಗುತ್ತದೆ. ಈ ಬಗೆ-

ಯ ಇತಿಹಾಸದ ದಿಗ್ದರ್ಶನಕ್ಕೆ ಆಯಾ ಸತ್ಪುರುಷರ ಸಮ ಕಾಲೀನ ಚರಿತ್ರಕಾರರಿಗೆ ತುಂಬಾ ಅನುಕೂಲವಿರುತ್ತದೆ. ಆದರೆ ನಮ್ಮ ಕನ್ನಡಿಗರ ದುರ್ದೈವದಿಂದ ಇಂಥ ಚರಿತ್ರಕಾರರ ಸಂಖ್ಯೆಯು ತೀರ ವಿರಳವಿರುತ್ತದೆ. ಒಂದು ವೇಳೆ ಇಲ್ಲೊಂದರೂ ಸಲ್ಲುವದು. ವಸ್ತುಸ್ಥಿತಿಯು ಹೀಗಿರುವದರಿಂದ ಸಜ್ಜನರು ಗತಿಸಿಹೋಗಿ ಎಷ್ಟೋದಿವಸಗಳಾದಮೇಲೆ ಅವರ ಚರಿತ್ರಬರೆಯುವ ಚರಿತ್ರಕಾರನಿಗೆ ಉದ್ದಿಷ್ಟ ಉದ್ದೇಶವು ಸಾಧಿಸುವಂತೆ ಚರಿತ್ರ ಬರೆಯಬೇಕಾದರೆ ಎಷ್ಟು ಕಷ್ಟವಾಗುತ್ತದೆಂಬದನ್ನು ಅನುಭವಜ್ಞರೇ ಬಲ್ಲರು.

ಈ ಪ್ರಸಂಗದಲ್ಲಿ ಚರಿತ್ರಕಾರರು ಅನ್ಯಭಾಷೆಯಲ್ಲಿ ಯಾರಾದರೂ ತಮ್ಮ ಚರಿತ್ರನಾಯಕರ ಚರಿತ್ರವನ್ನು ಬರೆದಿರುವರೋ ಎಂಬದನ್ನು ಶೋಧಿಸಬೇಕಾಗುತ್ತದೆ. ಒಂದು ವೇಳೆ ಅನ್ಯಭಾಷೆಯಲ್ಲಿ ಚರಿತ್ರವು ಸಿಕ್ಕರೂ ಅದು ಸಮಕಾಲೀನರು ಬರೆದದ್ದು ಇರುವದಿಲ್ಲ. ಮೇಲಾಗಿ ಹಲ-ಕೆಲವು ಲೇಖಕರಂತೂ ಸತ್ಪುರುಷರ ಹೃದಯವನ್ನರಿಯದೆ ತಮ್ಮ ಸ್ವಪೌರುಷದ ಸಂಗತಿಗಳಿಂದಲೇ ಚರಿತ್ರವನ್ನು ಮುಗಿಸಿಬಿಟ್ಟಿರುತ್ತಾರೆ. ಇದರಿಂದ ಸಿಕ್ಕಚರಿತ್ರವಾದರೂ ಒಮ್ಮೊಮ್ಮೆ ನಿರುಪಯೋಗವಾಗುತ್ತದೆ. ಹೀಗಾಗಿ ಯಾವನೊಬ್ಬ ಮಹಾಪುರುಷನ ಚರಿತ್ರವನ್ನು ಬರೆಯಬೇಕೆಂದರೆ ಇಂಥ ವಿಘ್ನಗಳು ಮುಂದೆ ಬಂದುನಿಂತು ಲೇಖಕನ ಮನಸ್ಸನ್ನು ಕುಗ್ಗಿಸಿ ಬಿಡುತ್ತವೆ.

ನಮ್ಮ ಕನ್ನಡ ವಾಙ್ಮಯದಲ್ಲಿ ಕನ್ನಡಿಗರಾದ ಸಜ್ಜನರ ಚರಿತ್ರಗಳನ್ನು ಬರೆಯುವದಂತೂ ತೀರಕಠಿಣವಿರುತ್ತದೆ. ಸನ್ಯಾಸಿಯ ಮದುವೆಯಾದರೆ ಜುಟ್ಟ ಜನಿವಾರಗಳೆರಡನ್ನೂ ಕೊಳ್ಳಬೇಕಾಗುತ್ತದೆಂದು ಗ್ರಾಮ್ಯರು ಅನ್ನುವಂತೆ ನಮ್ಮ ಕರ್ನಾಟಕ ಸತ್ಪುರುಷರ ಚರಿತ್ರಗಳನ್ನು ಬರೆಯುವವರ ಸ್ಥಿತಿಯಿರುತ್ತದೆ. ಯಾಕೆಂದರೆ, ಕೇವಲ ಕನ್ನಡಿಗರಾದ ಸಜ್ಜನರ ಚರಿತ್ರಗಳನ್ನು ಅನ್ಯಭಾಷೆಯವರು ಬರೆದಿಟ್ಟಿರುವದಿಲ್ಲ. ಬರೆದಿಡಲು ಸಂಭವವೂ ಇಲ್ಲ. ಕನ್ನಡಿಗರಂತೂ ಅಂಥ ಹವ್ಯಾಸಕ್ಕೇ ಹೋಗಿರುವದಿಲ್ಲ. ಒಟ್ಟಿನ ಮೇಲೆ ಈಗ ನಮ್ಮ ಕನ್ನಡ ಸಜ್ಜನರ ಚರಿತ್ರ ಬರೆಯಬೇಕಾದರೆ ದಂತಕಥೆಗಳು ಚರಿತ್ರನಾಯಕರು ಮಾಡಿದ ಪದ-ಪದ್ಯಗಳು ಅವರ ಕಾಲದಲ್ಲಿ ಅವರ ವಿಷಯವಾಗಿ ನಡೆದ ಕಾಗದಪತ್ರಗಳು ಇವುಗಳ ಮೇಲೆ ಕೈಯೂರಬೇಕಾಗುತ್ತದೆ. ಆದರೆ ಮರಾಠೀ ಪ್ರಾಂತದಲ್ಲಿ ಸಂಚರಿಸಿದ ಅಥವಾ ಬೇರೆ ಭಾಷೆಯ ಪ್ರಾಂತಗಳಲ್ಲಿ ಸಂಚರಿಸಿದ ಸತ್ಪುರುಷರ ಚರಿತ್ರಗಳು ಅನ್ಯಭಾಷೆಯಲ್ಲಿ ಸಿಗುವದರಿಂದ ಅವು ಕೇವಲ ಕನ್ನಡಿಗರಾದ ಸಜ್ಜನರ ಚರಿತ್ರಲೇಖನದಷ್ಟು

ಜಡಹೋಗುವದಿಲ್ಲ. ಪ್ರಸ್ತುತದ ನಮ್ಮ ಚರಿತ್ರನಾಯಕರು ಮರಾಠೀ ಭಾಷೆಯು ನಡೆಯುವ ನಾಡಿನಲ್ಲಿ ಕಾಲಕ್ರಮಣ ಮಾಡಿದ್ದರಿಂದ ಅವರ ಜೀವನ ಚರಿತ್ರೆಯು ಒಂದೆರಡು ಕಡೆಗಳಲ್ಲಿ ಪ್ರಸಿದ್ಧವಾಗಿದೆ. ಆದರೂ ಆ ಚರಿತ್ರಗಳು ಸಾಕಷ್ಟು ಸಂಗತಿಗಳಿಂದ ಪರಿಪೂರ್ಣವಾಗಿಲ್ಲವಾದ್ದರಿಂದ ಬೇರೆ ಸಾಧನಗಳನ್ನೊದಗಿಸಿಕೊಂಡೇ ನಾವು ಈ ಚರಿತ್ರನಾಯಕರ ಚರಿತ್ರ ರಹಸ್ಯವನ್ನು ನಮ್ಮ ವಾಚಕರ ಮುಂದಿಡ ಬೇಕಾಗಿರುತ್ತದೆ. ಇರಲಿ.

ಸಜ್ಜನರ ಜೀವನ ಯಾತ್ರೆಯಲ್ಲಿ ಪ್ರತಿಯೊಬ್ಬರಲ್ಲಿ ಒಂದೊಂದು ಪ್ರಾಮುಖ್ಯ ವಾದಉದ್ದೇಶವು ಕಂಡುಬರುತ್ತದೆ ಕೆಲವರಿಗೆ ಭಕ್ತಿಮಾರ್ಗದ ಅಭಿಲಾಷೆಹೆಚ್ಚಿರುತ್ತದೆ. ಕೆಲವರಿಗೆ ರಾಜಕೀಯ ವಿಷಯದಮೇಲೆ ಪ್ರೀತಿಯಿರುತ್ತದೆ. ಕೆಲವರಿಗೆ ವರ್ಣಾಶ್ರಮಗಳನ್ನು ಸ್ಥಿರಗೊಳಿಸುವದರಲ್ಲಿ ಪ್ರೇಮವಿರುತ್ತದೆ. ಹೀಗೆ ಹಲವರಿಗೆ ಹಲವು ಬಗೆಯ ಲೋಕಕಲ್ಯಾಣದ ಕಾರ್ಯಗಳು ಕರ್ತವ್ಯವಾಗಿ ಕುಳಿತಿರುತ್ತವೆ. ಶ್ರೀ ಮಚ್ಛಂಕರಾಚಾರ್ಯ ಜಗದ್ಗುರುಗಳವರಿಗೆ ಅದ್ವೈತವನ್ನು ಪ್ರಸಾರಗೊಳಿಸುವದು ಕರ್ತವ್ಯವಾಗಿದ್ದರೆ, ಶ್ರೀ ಕುಮಾರಿಲ ಭಟ್ಟರಿಗೆ ಬೌದ್ಧಮತವನ್ನು ಖಂಡಿಸುವದಾಗಿತ್ತು. ಶ್ರೀಮನ್ ಮಧ್ವಾಚಾರ್ಯರವರಿಗೆ ದ್ವೈತಸಿದ್ಧಾಂತವನ್ನು ಬಳಕೆಯಲ್ಲಿ ತರುವದಿದ್ದರೆ, ಶ್ರೀ ರಾಮಾನುಜಾಚಾರ್ಯರಿಗೆ ವಿಶಿಷ್ಟಾದ್ವೈತವನ್ನು ಸ್ಥಾಪಿಸುವ ಕಾರ್ಯವಿತ್ತು. ಇದರಂತೆ ಶ್ರೀ ರಾಮದಾಸಾದಿ ಸಜ್ಜನರನ್ನು ನೋಡಿದರೂ ಅವರವರ ಕರ್ತವ್ಯಗಳು ಭಿನ್ನ ಭಿನ್ನವಾಗಿ ತೋರಿಬರುತ್ತವೆ. ಶ್ರೀ ಸಮರ್ಥರು ರಾಜಕೀಯ ವಿಷಯಗಳಲ್ಲಿ ಮನಸ್ಸು ಹಾಕಿದ್ದರೆ, ತುಕಾರಾಮ ಸಾಧುಗಳು ಕೇವಲ ಭಕ್ತಿಮಾರ್ಗ ನಿರೂಪಣದಲ್ಲಿ ತಲ್ಲೀನರಾಗಿದ್ದರು!

ಮಹಾರಾಷ್ಟ್ರ ಪ್ರಾಂತದ ಈ ಸಜ್ಜನರಂತೆ ನಮ್ಮ ಕನ್ನಡಸಜ್ಜನರಲ್ಲಿಯೂ ಭಿನ್ನ ಭಿನ್ನ ಕಾರ್ಯದೃಷ್ಟಿಗಳು ಕಂಡುಬರುತ್ತವೆ. ಶ್ರೀ ಪುರಂದರದಾಸರು ನಮ್ಮ ಕನ್ನಡ ಸತ್ಪುರುಷರಲ್ಲಿ ವಿಶೇಷ ಪ್ರಸಿದ್ಧರಾದವರು; ಇವರ ಹೆಸರನ್ನು ಬಹುತರ ಎಲ್ಲ ಕನ್ನಡ ನಾಡಿನವರು ಕೇಳಿರಬಹುದು. ಯಾಕಂದರೆ, ಇವರ ಲಕ್ಷಾಂತರ ಪದಗಳಲ್ಲಿ ಒಂದಾದರೂ ಪದವು ಪ್ರತಿಯೊಬ್ಬ ಕನ್ನಡಿಗನ ಕಿವಿಯಮೇಲೆ, ಅವನ ಆಯುಷ್ಯದಲ್ಲಿ ಒಮ್ಮೆಯಾದರೂ ಹಾಯ್ದುಹೋಗದೆ ಇರಲಾರದು! ಆ ಪದಗಳ ಮುಖಾಂತರವಾಗಿ ಅವರು ಬಹುತರ ಎಲ್ಲ ಕರ್ನಾಟಕಸ್ಥರಿಗೆ ಪರಿಚಯದವರಾಗಿರುವರೆಂದು ಭಾವಿಸಲು ಯಾವ ಅಭ್ಯಂತರವೂ ಇರುವದಿಲ್ಲ. ಅವರ ಮುಖ್ಯ ಧ್ಯೇಯವು ಜನರಲ್ಲಿ ವೈರಾಗ್ಯವನ್ನು ಹುಟ್ಟಿಸಿ ಈಶ ಭಜನೆಯಲ್ಲಿ ಜನರನ್ನು ತೊಡ

ಗಿಸುವದೇ ಆಗಿತ್ತೆಂದು ಅವರು ರಚಿಸಿದ ಪದಗಳ ಮೇಲಿಂದ ಕಂಡುಬರುತ್ತದೆ. ಅವರ ತರುವಾಯ ಪ್ರಸಿದ್ಧಿಗೆ ಬಂದವರು, ಕನಕದಾಸರು. ಇವರಾದರೂ ಶ್ರೇಷ್ಠ ತರಗತಿಯ ಪದಗಳನ್ನು ಮಾಡಿ ನಮ್ಮ ಕನ್ನಡಿಗರ ಪರಿಚಯಕ್ಕೆ ಕಾರಣರಾಗಿರುತ್ತಾರೆ. ಇವರ ಧ್ಯೇಯವೆಂದರೆ ನಿಶ್ಚಲ ಮನಸ್ಸಿನವರಿಗೆ ಪರಮಾತ್ಮನು ವಶನಾಗುತ್ತಾನೆಂಬದನ್ನು ತೋರಿಸುವದು; ಒಟ್ಟಿನಮೇಲೆ ನಮ್ಮ ಕನ್ನಡ ಸತ್ಪುರುಷರೆಲ್ಲರೂ ಧರ್ಮ-ಭಕ್ತಿಮಾರ್ಗ ಮೊದಲಾದವುಗಳ ಪ್ರಸಾರಕ್ಕೆ ಪ್ರಯತ್ನಪಟ್ಟಿರುವರೆಂದು ಹೇಳಲಾಗುವದು.

ಹೀಗೆ ಬೇರೆ ಬೇರೆ ಸತ್ಪುರುಷರ ಜೀವನ ಚರಿತ್ರಗಳನ್ನು ಪರೀಕ್ಷಿಸುತ್ತ ಹೋದರೆ ಆಯಾ ಕಾಲದ ಪರಿಸ್ಥಿತಿಯು ನಮಗೆ ಸಹಜವಾಗಿ ಗೋಚರಿಸುವದು. ಭಕ್ತಿಮಾರ್ಗ ಲೋಪವಾದಾಗ ಅದನ್ನು ಬೆಳಿಸುವದಕ್ಕಾಗಿಯೇ ಆಗಿನ ಸತ್ಪುರುಷರು ಪ್ರಯತ್ನಪಡಬೇಕಾಗುತ್ತದೆ. ವರ್ಣಾಶ್ರಮಧರ್ಮದಲ್ಲಿ ಶ್ರದ್ಧೆತಪ್ಪಿದಾಗ ಹುಟ್ಟುವ ಸತ್ಪುರುಷರು ವರ್ಣಾಶ್ರಮ ಧರ್ಮಸ್ಥಾಪನೆಯನ್ನೇ ಪ್ರಾಮುಖ್ಯವಾಗಿ ಇಟ್ಟುಕೊಳ್ಳುವದು ಸ್ವಾಭಾವಿಕವು. ಆದ್ದರಿಂದ ಆಯಾ ಸತ್ಪುರುಷರ ಚರಿತ್ರಗಳಲ್ಲಿ ಆಗಿನ ಪರಿಸ್ಥಿತಿಯು ಚನ್ನಾಗಿ ವ್ಯಕ್ತವಾಗುವ ಸಂಭವವಿರುತ್ತದೆ. ಪ್ರವೃತ್ತಿದೃಷ್ಟಿಯಿಂದ ಚರಿತ್ರ ಬರೆಯತಕ್ಕವರು ಮೊದಲು ಚರಿತ್ರನಾಯಕರ ಆಚರಣೆಯ ಕಡೆಗೆ ಸೂಕ್ಷ್ಮವಾಗಿ ನೋಡಿ ಅವರು ಯಾವ ಮಾರ್ಗದಿಂದ ಲೋಕಕಲ್ಯಾಣ ಸಾಧಿಸಿದರೆಂಬದನ್ನು ಮೊದಲು ಗೊತ್ತುಮಾಡಿಕೊಂಡು ಮುಂದೆ ಅವರ ಚರಿತ್ರ ಲೇಖನಕ್ಕೆ ಪ್ರಾರಂಭಿಸಬೇಕಾಗುತ್ತದೆ. ಸತ್ಪುರುಷರ ಈ ಪ್ರವೃತ್ತಿಮಾರ್ಗದ ಆಚರಣೆಯೇ ಮುಂದೆ ಹ್ಯಾಗೆ ಜಗತ್ತಿಗೆ ನಿವೃತ್ತಿಪರವಾಗಿ ಪರಿಣಮಿಸಿತೆಂಬದು ಒಡೆದು ಕಾಣುವಂತೆ ನಿವೃತ್ತಿ ದೃಷ್ಟಿಯಿಂದ ತೋರಿಸಿಕೊಡಬೇಕಾಗುತ್ತದೆ. ಇದೇ ಸತ್ಪುರುಷರ ಚರಿತ್ರೆಯ ರಹಸ್ಯವು.

ಎಷ್ಟೋಜನ ಸತ್ಪುರುಷರು ಚಿಕ್ಕವರಿದ್ದಾಗ ಶುದ್ಧ ಹುಂಬರಾಗಿರುತ್ತಾರೆ. ಆಗ ಮಾಡಬಾರದ ಕೆಲಸಗಳನ್ನು ಮಾಡುತ್ತಾರೆ; ಆದರೆ ಅವರೇ ಮುಂದೆ ಮಹಾತ್ಮರಾಗಿ ಲೋಕಕ್ಕೆ ಉಪದೇಶಕರಾಗುತ್ತಾರೆ. ಆದರೆ ಇದು ಯಾತರಫಲವೆಂದು ಚರಿತ್ರಕಾರರು ತೂಗಿ ನೋಡಿ ಸರಿದೋರಿದ್ದನ್ನು ಊಹಿಸಿ ಉಲ್ಲೇಖಿಸಬೇಕಾಗುವದು. ಬಹಿರಂಗದಲ್ಲಿ ರಜತಮಾದಿ ಗುಣಗಳನ್ನು ಆವಿಷ್ಕರಣಮಾಡಿಕೊಂಡಂತೆ ಕಾಣುವ ಕೆಲಜನ ಸತ್ಪುರುಷರು ಅಂತರಂಗದಲ್ಲಿ ಶುದ್ಧ ಸತ್ವದ ಮೂರ್ತಿಗಳಾಗಿರುತ್ತಾರೆ. ಕೆಲವರು ನಮಸ್ಕಾರ ಮಾಡಹೋದವರನ್ನು ಹೊಡೆಯುವರು. ಬೈಯುವರು.

ಅನೇಕ ಅನನ್ವಿತ ಕೃತ್ಯಗಳನ್ನು ಕೂಡಾ ಮಾಡುವರು. ಆದರೆ ಅವರ ಈ ಬಹಿರಂಗ ಪರೀಕ್ಷಣದಿಂದ ಅವರು ಸಜ್ಜನರೇ ಅಲ್ಲವೆಂದು ಅನ್ನಲಿಕ್ಕೆ ಬರಬಹುದೆ? ಹಾಗೆಂದಿಗೂ ಬರಲಾರದು. ಅಂತರಂಗ ಪರೀಕ್ಷೆಯ ಗುರುತು ಯಾರಿಗೆ ಇರುವದೋ ಅವರು ಮಾತ್ರ ಆ ಸಜ್ಜನರ ಸತ್ವವನ್ನು ಕಂಡು ಹಿಡಿಯುವರು. ಇರಲಿ.

ಈ ಮೇರೆಗೆ ಸತ್ಪುರುಷರ ಚರಿತ್ರವನ್ನು ಆ ಆ ಕಾಲದ ಸಾಮಾಜಿಕ ಧಾರ್ಮಿಕ ಸಗಂತಿಗಳು ಒಡೆದು ಕಾಣುವಂತೆ ಬರೆಯುವದರಿಂದ ಅದು ನಿಜವಾದ ಇತಿಹಾಸದಲ್ಲಿ ಸಮಾವೇಶವಾಗುತ್ತದೆಂದು ಪ್ರತ್ಯೇಕವಾಗಿ ಹೇಳುವ ಕಾರಣವಿಲ್ಲ. ಸತ್ಪುರುಷರಾದರೂ ಹಲವುಬಗೆಯ ಅಮಾನುಷ ಕೃತ್ಯಗಳನ್ನು ತೋರಿಸುವದಕ್ಕೆ ತಮ್ಮ ಸಮಕಾಲೀನ ಜನರ ಹೃದಯಗಳು ಹೇಗಿದ್ದವೆಂಬದನ್ನು ಪರಿಚಯ ಮಾಡಿ ಕೊಡುವದೊಂದು ಉದ್ದೇಶವಿರುತ್ತದೆ. ಅಮಾನುಷ ಕಾರ್ಯಗಳಿಂದ ಜನರಲ್ಲಿ ದೈವನಿಷ್ಠೆಯು ಬೆಳೆಯುವದೆಂಬದು ನಿಜವಾದರೂ, ಪೂರ್ವದಲ್ಲಿ ಅವರ ಸ್ಥಿತಿ ಹೇಗಿತ್ತೆಂಬದು ವ್ಯಕ್ತವಾಗುತ್ತದೆ. ಉದಾಹರಣಾರ್ಥವಾಗಿ ಶ್ರೀ ಮಾಣಿಕ ಪ್ರಭುಗಳ ಚರಿತ್ರವನ್ನು ನೋಡೋಣ; ಅದರಲ್ಲಿ ಅವರು ಒಂದು ಪ್ರಸಂಗದಲ್ಲಿ ಸತ್ತ ಸ್ತ್ರೀಯನ್ನು ಬದುಕಿಸಿದ ಪ್ರಸಕ್ತಿಯುಂಟು; ಆ ಮಹಾತ್ಮರು ತಮ್ಮ ದೊಡ್ಡಸ್ತನಕ್ಕಾಗಿ ಆ ಮೃತ ಸ್ತ್ರೀಯನ್ನು ಬದುಕಿಸಿರಲಿಲ್ಲ; ಜನರಲ್ಲಿ ವಚನ ಭ್ರಷ್ಟತ್ವಾದಿದೋಷಗಳು ತುಂಬಿಕೊಂಡಿದ್ದವೆಂದು ಸ್ಪಷ್ಟವಾಗುತ್ತದೆ. ಇದರಂತೆ ಅವರ ಎಷ್ಟೋ ಅದ್ಭುತ ಲೀಲೆಗಳಿಂದ ಸಮಾಜದಲ್ಲಿ ಅಡಗಿಕೊಂಡಿರುವ ದುರ್ಗುಣಗಳು ಒಡಬಡ ಬೈಲಿಗೆ ಬಿದ್ದು ಹೋಗಿರುತ್ತವೆ. ಹೀಗೆ ನಮ್ಮ ಸತ್ಪುರುಷರ ಚರಿತ್ರಗಳನ್ನು ಅವಲೋಕಿಸುತ್ತ ಹೋದರೆ ಸಾಮಾಜಿಕ ಸ್ಥಿತಿಯಲ್ಲಿ ಹ್ಯಾಗೆ ಹೆಚ್ಚು ಕಡಿಮೆಯಾಗುತ್ತ ಒಂದಿರುತ್ತದೆಂಬದು ಮನವರಿಕೆಯಾಗುತ್ತ ಹೋಗುತ್ತದೆ. ಮತ್ತು ಬರಬರುತ್ತ ಇತ್ತೀಚೆಗೆ ಜನರಲ್ಲಿ ಸದ್ಗುಣಗಳು ಹೆಚ್ಚುತ್ತ ನಡೆದಿರುವವೋ ದುರ್ಗುಣಗಳು ಹೆಚ್ಚುತ್ತ ನಡೆದಿರುವವೋ ಎಂಬದು ಕಂಡು ಬರುತ್ತದೆ.

ಧರ್ಮಗ್ಲಾನಿಯೆಂದರೆ ಜನರಲ್ಲಿ ವಿಷಯ ಲೋಲುಪತೆಯು ಹೆಚ್ಚುವದೆಂದು ಈ ಶ್ರೀ ಮಚ್ಛಂಕರ ಪ್ರಭೃತಿಗಳು ತಮ್ಮ ಗೀತಾಭಾಷ್ಯದಲ್ಲಿ ಒಡನುಡಿದಿರುವರು. ಅವರ ಈ ಮಾತನ್ನು ಸತ್ಪುರುಷರ ಚರಿತ್ರಗಳು ಚನ್ನಾಗಿ ನಿದರ್ಶನಕ್ಕೆ ತಂದು ಕೊಡುತ್ತವೆ. ಯಾವ ಸತ್ಪುರುಷರ ಚರಿತ್ರಗಳನ್ನು ನೋಡಿದರೂ ಅವುಗಳಲ್ಲಿ ಇಂಥ ಮನುಷ್ಯನು ಇಂಥಹ ರತಿಯನ್ನು ಹೊತ್ತು ಸಂತತಿಯನ್ನು ಪಡೆದನು, ಇಂಥವನು ಐಶ್ವರ್ಯ ಹೊಂದಿದನು, ಇಂಥವನು ರೋಗಮುಕ್ತನಾದನು. ಇವೇ ಮೊದ

ಲಾದ ಐಹಿಕಕ್ಕೆ ಸಂಬಂಧಿಸಿದ ಸಂಗತಿಗಳನ್ನು ಪಡೆದವರ ಸಂಖ್ಯೆಯ ವರ್ಣನೆಯೇ ಇರುತ್ತದಲ್ಲದೆ, ಇಂಥವನು ಬ್ರಹ್ಮ ನಿಷ್ಠನಾದನು, ಇಂಥವನು ಅದ್ವೈತ ಸುಖಾನಂದದಲ್ಲಿ ನಿಮಗ್ನನಾದನು, ಇಂಥವನಲ್ಲಿ ಐಹಿಕ ಸುಖದ ವಿಷಯವಾಗಿ ನಿರೀಚ್ಛೆಯು ತ್ಪನ್ನವಾಯಿತು. ಎಂಬ ಸಂಗತಿಗಳ ಉಲ್ಲೇಖವಿರುವದಿಲ್ಲ; ಒಂದು ವೇಳೆ ಒಂದೆರಡು ಚರಿತ್ರಗಳಲ್ಲಿ ಕ್ವಚಿತ್ತಾಗಿದ್ದರೂ ನಮ್ಮ ಲಕ್ಷವು ಆ ಕಡೆಗೆ ಹೋಗುವದಿಲ್ಲ; ಇದರಿಂದ ನಾವು ವಿಷಯವಾಸನೆಯಲ್ಲಿ ಎಷ್ಟು ಮಗ್ನರಾಗಿರುವೆವೆಂಬದು ವ್ಯಕ್ತವಾಗುತ್ತದೆ. ದೇವರು ಭೂಮಿಯಲ್ಲಿ ಒಂದು ಕಲ್ಪತರುವನ್ನು ಹುಟ್ಟಿಸಿಬಿಟ್ಟಿದ್ದರೆ ನಮ್ಮ ಬಯಕೆಗಳನ್ನು ಪೂರೈಸುವದರಲ್ಲಿ ಆ ಕಲ್ಪತರುವು ತತ್ತರಿಸಿ ಹೋಗಬಹುದಾಗಿತ್ತು, ಅದೇಕೆ? ಒಬ್ಬೊಬ್ಬರಿಗೆ ಒಂದೊಂದು ಕಲ್ಪತರುವಾದರೂ ಸಾಲದೆಂಬ ಅನುಭವವು ಅದಕ್ಕೆ ಬಂದು ಹೋಗುತ್ತಿತ್ತು. ಬಹಳ ಹೇಳುವದೇನು? ನಮ್ಮಲ್ಲಿ ವಿಷಯಸುಖದ ಹಂಬಲವು ಬಹಳ ಬೆಳೆದು ಹೋಗಿದೆ; ಅಂತೇ ನಾವು ಭವರೋಗಕ್ಕೆ ಔಷಧಸ್ವರೂಪವಾದ ಸಜ್ಜನರ ಪುಣ್ಯವನ್ನು ಭವರೋಗ ಕಳಕೊಳ್ಳುವದಕ್ಕೆ ಉಪಯೋಗಿಸಿಕೊಳ್ಳದೆ ಭವರೋಗವು ಹೆಚ್ಚುವದಕ್ಕೆ ಉಪಯೋಗಿಸಿ ಕೊಳ್ಳುತ್ತೇವೆ. ರೋಗವಿನಾಶಕವಾದ ಸರ್ವೋತ್ಕೃಷ್ಟ ಮಾತ್ರೆಯನ್ನು ಸೇವಿಸಿ ಅಪಥ್ಯಕರ ಪದಾರ್ಥಗಳನ್ನು ಭಕ್ಷಿಸಿದರೆ ನಮ್ಮ ಜಡಶರೀರದ ರೋಗವು ಹ್ಯಾಗೆ ಹೆಚ್ಚುವದೋ ಹಾಗೆ ನಾವು ಸತ್ಪುರುಷರಲ್ಲಿ ಇದ್ದರೂ ವಿಷಯಸುಖವನ್ನು ಯಾಚಿಸಿ ಭವರೋಗವನ್ನು ಹೆಚ್ಚಿಸಿಕೊಳ್ಳುತ್ತೇವೆ.

ಸತ್ಪುರುಷಚರಿತ್ರ ಲೇಖನದ ನಿವೃತ್ತಿ ಪರದೃಷ್ಟಿಯಲ್ಲಿ ಈ ಭವರೋಗ ರಸಾಯನವು ಸಿದ್ಧವಾಗುವದು. ಮೊದಲನೆಯ ದೃಷ್ಟಿಯಲ್ಲಿ ಅಂದರೆ ಪ್ರವೃತ್ತಿ ಪರ ದೃಷ್ಟಿಯಲ್ಲಿ ಜಗತ್ತಿನ ಸಾಮಾಜಿಕ ಸ್ಥಿತಿಯು ತಿಳಿದು ಲೌಕಿಕ ಸುಧಾರಣೆಗೆ ಆಸ್ಪದವಾಗುವದು. ಈ ಎರಡನೆಯ ದೃಷ್ಟಿಯಲ್ಲಿ ಮನುಷ್ಯನಿಗೆ ಅಖಂಡ ಕಲ್ಯಾಣವಾಗುವ ಯೋಗವಿರುವದು. ಇದೇ ಮನುಷ್ಯನ ಕೊನೆಯ ಧ್ಯೇಯವು. ಆದರಿಂದ ಇದಕ್ಕೆ ಅಖಂಡ ಕಲ್ಯಾಣವೆಂಬ ಸಂಜ್ಞೆಯು ಅನುಭವಿಕರಿಂದ ಬಂದಿರುತ್ತದೆ. ಇರಲಿ.

ಈ ಮೇಲೆ ಉಲ್ಲೇಖಿಸಿದ ರೀತಿಯಲ್ಲಿ ಪ್ರಸ್ತುತದ ಚರಿತ್ರನಾಯಕರ ಚರಿತ್ರವನ್ನು ಬರೆಯುವ ಇಚ್ಛೆಯಿರುತ್ತದೆ. ಈಗ ದೊರೆತ ಆಧಾರಗಳಿಂದ ಮತ್ತು ಇನ್ನು ಮುಂದೆ ದೊರೆಯಬೇಕಾಗಿರುವ ಆಧಾರಗಳಿಂದ ಅದು ಎಷ್ಟರ ಮಟ್ಟಿಗೆ ಸಾಧಿಸುತ್ತದೆಂಬದನ್ನು ಅನುಭವಜ್ಞರು ನೋಡಬೇಕು. ಆದರೆ ಈ ಚರಿತ್ರನಾಯಕರ

ಯೋಗ್ಯತೆಯು ಬಹುದೊಡ್ಡದಿರುತ್ತದೆ. ಅವಧೂತಮಾರ್ಗದ ಈ ಮಹಾತ್ಮರನ್ನು ಕಣ್ಣುಟ್ಟನೋಡಿದ ಪುಣ್ಯವಂತರು ಬಹುಜನರಿರಬಹುದು. ಇಂಥ ಮಹನೀಯರ ಮಾನುಷ ವೇಷದಯಾತ್ರೆಯ ರಹಸ್ಯವನ್ನು ನಮ್ಮಂಥ ಪಾಮರರು ತಿಳಿಯುವದೆಂದರೆ ಅಶಕ್ಯವೇ ಸರಿ! ಇಂಥ ಪವಿತ್ರಪುಸ್ತಕವನ್ನು ನಾನು ಬರೆಯುತ್ತೇನೆನ್ನುವದಕ್ಕಿಂತ ಆ ಸಜ್ಜನರ ಲೋಕಹಿತದಕ್ಷವಾದ ಪುಣ್ಯಪ್ರಭಾವವು ಬರೆಯಿಸುತ್ತದೆನ್ನುವದು ಸಯುಕ್ತಿಕವಾಗಿದೆ

ಈ ನಮ್ಮ ಚರಿತ್ರನಾಯಕರು ಬೆಳಗಾವ ಜಿಲ್ಲೆಯವರು, ಅವರು ಬಹು ದಿವಸಗಳವರೆಗೆ ವಾಸವಾಗಿದ್ದದ್ದು ಅಕ್ಕಲಕೋಟೆಯು; ಆದ್ದರಿಂದ ಅವರಿಗೆ ಅಕ್ಕಲಕೋಟೆ ಸ್ವಾಮಿಗಳೆಂಬ ಉಪನಾಮವೇ ಪ್ರಾಪ್ತವಾಯಿತು. ಮಹಾತ್ಮರಿಗೇನು? ಶಟ್ಟೀ ಇಳಿದದ್ದೇ. ಪಟ್ಟಣವಾಗುವದೆಂಬಂತೆ, ಅವರು ಇದ್ದದ್ದೇ ಪವಿತ್ರಕ್ಷೇತ್ರವಾಗುವದು. ಅನರ್ಘ್ಯವಾದ ರತ್ನವು ಎಲ್ಲಿದ್ದರೇನು? ಅದು ತನ್ನ ಕಾಂತಿವಿಶೇಷವನ್ನು ಕೆಡವತಕ್ಕದ್ದಲ್ಲವಷ್ಟೇ; ಅದರಂತೆ ಸತ್ಪುರುಷರಾದರೂ ಎಲ್ಲಿದ್ದರೂ ಅವರ ಮಹತ್ವವು ಜನರಿಗೆ ತಿಳಿಯದೆ ಹೋಗುವದಿಲ್ಲ. ಸಜ್ಜನರು ಮುಳ್ಳುಗಳ್ಳಿಯಲ್ಲಿ ಕುಳಿತರೂ ಜನರು ಅವರನ್ನು ಗೊತ್ತು ಹಚ್ಚದೆ ಬಿಡುವದಿಲ್ಲ. ಯಾಕೆಂದರೆ ಸಜ್ಜನರ ಸತ್ವವೇ ಅಷ್ಟು ಮಹತ್ತರವಾಗಿರುತ್ತದೆ; ಅವರಲ್ಲಿ ಅಷ್ಟು ಅಧಿಕ ಪ್ರಮಾಣದಿಂದ ಕಿಂಬಹುನಾ ಪೂರ್ಣಪ್ರಮಾಣದಿಂದ ಸತ್ವವು ಇರುವದರಿಂದ ಕಿಂಚಿತ್ ಸತ್ವಾಂಶವಿದ್ದ ಪ್ರಾಣಿಮಾತ್ರರೆಲ್ಲ ಅವರನ್ನು ಪ್ರೀತಿಸುವದು ಸ್ವಾಭಾವಿಕವಾಗಿದೆ. ಯಾವನಲ್ಲಿ ಸಂತ್ವಾಂಶವಿಲ್ಲವೋ, ಯಾವನು ಕೇವಲ ರಜಾಂಶ ಕೂಡಾ ಇಲ್ಲದೆ ಶುದ್ಧ ತಾಮಸಿಯಾಗಿರುವನೋ ಅವನೊಬ್ಬನು ಮಾತ್ರ ಸತ್ಪುರುಷರನ್ನು ಪ್ರೀತಿಸಲಾರನು. ಸತ್ವಾಂಶವು ಪೂರ್ಣ ಸತ್ವದ ಬಳಿಗೆ ತೆರಳುವದೇ ಹೊರತು ತಮಾಂಶವು ಸತ್ವದ ಬಳಿಗೆ ತೆರಳದು. ಪೂರ್ವಕಾಲದಲ್ಲಿ ರಾಕ್ಷಸರು ಋಷಿಶ್ರೇಷ್ಠರನ್ನು ದ್ವೇಷಿಸಲಿಕ್ಕೂ ಈಗಿನಕಾಲದಲ್ಲಿ ಕೆಲವು ವಿಕ್ಷಿಪ್ತ ಜನರು ಸತ್ಪುರುಷರನ್ನು ದೂಷಿಸಲಿಕ್ಕೂ ಇದೇ ಕಾರಣವೆಂದು ಹೇಳಬಹುದು.

ಪೂರ್ಣ ಸಚ್ಚಿದಾನಂದ ರೂಪಿಗಳಾದ ಈ ಮಹಾತ್ಮರ ಚರಿತ್ರೆಯಲ್ಲಿ ನಾವು ಈ ಅವತರಣಿಕೆಯ ಪ್ರಾರಂಭದಲ್ಲಿ ಬರೆದಂತೆ ಪ್ರವೃತ್ತಿ ನಿವೃತ್ತಿ ಪರದೃಷ್ಟಿಗಳಿಂದ ಮುಖ್ಯವಾಗಿ ನಾಲ್ಕು ಭಾಗಗಳನ್ನು ಮಾಡುವೆವು. ಈ ನಾಲ್ಕು ಭಾಗಗಳಲ್ಲಿಯೂ ಪ್ರವೃತ್ತಿ ನಿವೃತ್ತಿಪರ ವಿಚಾರಗಳು ಪ್ರಸಂಗವಶಾತ್ ಬರುವವು. ಒಂದನೆಯ ಭಾಗದಲ್ಲಿಸ್ವಾಮಿಗಳವರು ಮಂಗಳಗವೇಢೆಯಲ್ಲಿದ್ದ ಸಮಿಾಚೀನವಾದ ವರ್ಣನೆಯಿರು

ವದು. ಆಕಾಲದಲ್ಲಿಅವರ ನಿತ್ಯಕ್ರಮವು ಹ್ಯಾಗಿತ್ತು? ಅವರುಎಷ್ಟರಮಟ್ಟಿಗೆ ಜನರಲ್ಲಿ ಬೆರೆತುಕೊಳ್ಳುತ್ತಿದ್ದರು. ಆ ರೀತಿಯ ಅವರ ಆಚರಣೆಯಿಂದ ಬೋಧವಾಗತಕ್ಕದ್ದೇನು ಎಂಬ ವಿಷಯಗಳು ಒಳ್ಳೇ ನೂರ್ವಿರ್ಕವಾಗಿ ಬರುವವು. ಎರಡನೆಯ ಭಾಗದಲ್ಲಿ ಸ್ವಾಮಿಗಳವರು ಅಕ್ಕಲಕೋಟೆಗೆ ಬಂದ ವಿಷಯವಿರುವದು. ಈ ಭಾಗದಲ್ಲಿಯ ಉಪವಿಷಯಗಳು ಬಹು ರಹಸ್ಯಮಯವಾಗಿವೆ. ಈ ಕಾಲದಲ್ಲಿಯ ಶ್ರೀ ಗಳವರ ವೇಷ-ಮನೋಭಾವ-ಭೂತದಯೆ-ಸತ್ವ ಪರೀಕ್ಷಾಚಾತುರ್ಯ ಮೊದಲಾದವುಗಳು ವಾಚಕರಿಗೆ ಅಮೃತ ಸದೃಶವಾಗಿ ಸುಖವನ್ನೀಯುವವು. ಮೂರನೆಯ ಭಾಗದಲ್ಲಿ ಪ್ರವೃತ್ತಿಮಾರ್ಗದ ಭಕ್ತ ಮಂಡಲಿಯ ಸುಳಿದಾಟವು ಹೆಚ್ಚುವದು. ಕಾಮುಕ ಭಕ್ತರ ಮನೋಭೀಷ್ಟ ಪೂರ್ತತೆಯಿಂದ ಸಜ್ಜನರ ವಿಷಯವಾಗಿ ಜನರಲ್ಲಿ ತೋರಿಬರುವ ಆದರವು ಒಡೆದು ಕಾಣುವದು. ಈ ಮೂರನೆಯ ಭಾಗದ ವಿಷಯವು ಸಾಂಸಾರಿಕರಿಗೆ ಅತ್ಯಂತ ಬೋಧಪ್ರದವಾಗಿರುವದು. ಸಜ್ಜನರ ಬಳಿಯಲ್ಲಿ ಕಾಮ್ಯಭಕ್ತಿಯಿಂದ ಹೋಗುವ ನಾವು ಕಾಮನಾ ಸಿದ್ಧಿಯನ್ನು ಹೊಂದಿದ ಬಳಿಕ ಹ್ಯಾಗೆ ಆಗುವೆವೆಂಬ ವ್ಯಾವಹಾರಿಕವಿಷಯವು ವರ್ಣಿಸಲ್ಪಡುವದು. ನಾಲ್ಕನೆಯ ಭಾಗದಲ್ಲಿ ಸ್ವಾಮಿಗಳವರ ಜೀವನರಹಸ್ಯ, ನಿರ್ಯಾಣದ ಬಹು ಮಹತ್ವದ ಮತ್ತು ಅರ್ಥ ಪೂರ್ಣವಾದ ವಿಷಯಗಳು ಸಮಾವೇಶವಾಗುವವು. ಒಟ್ಟಿಗೆ ಚರಿತ್ರವು, ಇಬ್ಬಗೆಯ ದೃಷ್ಟಿಗಳ ವಿಚಾರಕ್ಕೆ ಒಳಪಟ್ಟು, ಸರಳವೂ ಸುಬೋಧವೂ ಆಗಿ ಭಾವಿಕರನ್ನು ಆನಂದಗೊಳಿಸುವದು. ನಮ್ಮ ಶೇಪಾಚಲ ಸದ್ಗುರುವು ಇಂಥ ಆನಂದವನ್ನು ಅನುಭವಿಸುವ ಪಾತ್ರತೆಯನ್ನೂ-ಸಮಯವನ್ನೂ ನಮ್ಮ ಪ್ರಿಯವಾಚಕರಿಗೆ ಒದಗಿಸಿಕೊಡಲಿ!!

# ೧ ನೇ ಭಾಗ.

## ೧ ನೇ ಪ್ರಕರಣ.

### ಮಂಗಳವೇಢೆಯ ಭಾಗ್ಯ.

ಸಜ್ಜನರು ಹುಟ್ಟಿ ಬೆಳೆದ ದೇಶವು ಭಾಗ್ಯಶಾಲಿಯೆಂದು ಹೇಳಲಾಗುವದು. ಅದರಂತೆ ಯಾವ ಊರಲ್ಲಿ ಸಜ್ಜನರು ಸ್ಥಿರವಾಗಿ ನೆಲೆಗೊಳ್ಳುವರೋ ಆ ಗ್ರಾಮದ ಮಹತಿಯನ್ನು ಬಣ್ಣಿಸುವದೇನು? "ನಾಹಂವಸಾಮಿ ವೈಕುಂಠೇ| ಯೋಗಿನಾಂ ಹೃದಯೇರವೌ||ಮದ್ಭಕ್ತಾ ಯತ್ರ ಗಾಯಂತೀ ತತ್ರ ತಿಷ್ಠಾಮೀ ನಾರದ||" ಎಂದು ಶ್ರೀ ಭಗವಂತನು ಹೇಳಿದ್ದರಿಂದ ಸಜ್ಜನರ ವಸತಿಯು ಎಲ್ಲಿರುವದೋ ಅಲ್ಲಿ ಶ್ರೀ ಮಂಗಳಕರನಾದ ಪರಮಾತ್ಮನ ಅಧಿಷ್ಠಾನವಿರುತ್ತದೆಂಬದು ವ್ಯಕ್ತವಾಗುತ್ತದೆ. ಅಂದಬಳಿಕ ಸಜ್ಜನರಿಗೆ ಅರ್ಥಾತ್ ಪರಮಾತ್ಮನಿಗೆ ಆ ವಾಸಸ್ಥಾನವಾಗಿರುವ ಪ್ರದೇಶದ ಪುಣ್ಯಾಂಶವನ್ನು ಬಣ್ಣಿಸಿ ಕೊನೆಗಾಣಿಸುವವರಾರು?

ಹೀಗೆ ಒಬ್ಬ ಸಜ್ಜನರ ವಾಸಕ್ಕೆ ಪಾತ್ರವಾದ ಗ್ರಾಮವು ಅಧಿಕ ಪುಣ್ಯಾಂಶದಿಂದ ಮೆರೆಯುತ್ತಿರಲು ಪೆಟ್ಟಿನವೇಲೆ ಪೆಟ್ಟು ಏಳುಜನ ಸತ್ಪುರುಷರು ಆಗಿ ಹೋಗಿ ಎಂಟನೆಯವರಾದ ಪ್ರಸ್ತುತದ ನಮ್ಮ ಚರಿತ್ರನಾಯಕರು ಬಂದು ನೆಲಸಿದ ಮಂಗಳವೇಢೆಯ ಪುಣ್ಯಾಂಶವನ್ನು ಎಷ್ಟೆಂದು ವರ್ಣಿಸೋಣ; ಈ ಭಾಗ್ಯಶಾಲೀ ಗ್ರಾಮದಲ್ಲಿ ಆಗಿ ಹೋದ ಏಳುಜನ ಸತ್ಪುರುಷರು ಶ್ರೇಷ್ಠತರ ಕೋಟಿಯಲ್ಲಿ ಪರಿಗಣಿಸಲಿಕ್ಕೆ ಯೋಗ್ಯರಾದ್ದರಿಂದ ಅವರ ಸಂಕ್ಷಿಪ್ತ ಸಂಗತಿಗಳನ್ನು ಇಲ್ಲಿ ಉದಹರಿಸುವದು ಅಪ್ರಾಸಂಗಿಕವಾಗಲಾರದು. ಯಾಕಂದರೆ ಪುಣ್ಯಶಾಲಿಗಳಾದ ಈ ಏಳು ಜನ ಸತ್ಪುರುಷರ ಚರಣ ಸ್ಪರ್ಶದಿಂದ ಮಂಗಳವೇಢೆಯು ಪ್ರಸ್ತುತದ ನಮ್ಮ ಚರಿತ್ರನಾಯಕರ ವಾಸಕ್ಕೆ ಪವಿತ್ರತಮವಾದಂತೆ ಈ ಏಳುಜನ ಸಜ್ಜನರ ಚರಿತ್ರಾಂಶದ ಶ್ರವಣದಿಂದ ನಮ್ಮ ವಾಚಕರ ಮನೋಭೂಮಿಕೆಯು ಶ್ರೀ ಅಕ್ಕಲಕೋಟೀ ಅವಧೂತ ಸ್ವಾಮಿಗಳವರ ಚರಿತ್ರ ಶ್ರವಣಕ್ಕೆ ಪಾತ್ರವಾಗಬಹುದಾಗಿದೆ. ಇರಲಿ.

(೧) ಮಂಗಳವೇಢೆಯಲ್ಲಿ ಉದಯಕ್ಕೆ ಬಂದ ಸಜ್ಜನರಲ್ಲಿ ದಾಮಾಜಿ ಪಂತರೆಂಬವರು ಮೊದಲನೆಯವರು. ಇವರು ಬೀದರ ಬಾದಶಹನ ಸುಭೇದಾರರಿದ್ದು ಪರೋಪಕಾರದಲ್ಲಿ ಸರಕಾರೀ ಖಜಾನೆಯನ್ನು ಕೂಡಾ ಬರಿದು ಮಾಡಿದ ಕಥೆಯು ಇತಿಹಾಸ ಪ್ರಸಿದ್ಧವಿರುವದು. ಇವರ ಭೂತದಯಾಪರತೆಗೆ ಪ್ರತ್ಯಕ್ಷ ಪಾಂಡುರಂಗನು ಪ್ರಸನ್ನನಾಗಿದ್ದನು. ಇವರ ಕಥೆಯನ್ನು ಸಾಧಾರಣವಾಗಿ ಎಲ್ಲ ಹರಿದಾಸರೂ ನಿರೂಪಣ ಮಾಡುವರೆಂದು ಹೇಳಬಹುದು.

(೨) ದಾಮಾಜಿಪಂತರ ತರುವಾಯ ಪ್ರಸಿದ್ಧಿಗೆ ಬಂದವರೆಂದರೆ "ಕಾನು ಪಾತ್ರ" ಎಂಬ ಹೆಸರಿನ ನಾರೀ ಶಿರೋಮಣಿಯು; ಈಕೆಯ ಚರಿತ್ರವು ಬಹು ಬೋಧಪ್ರದವಾಗಿರುವದು. ಇವಳು ಜಾತಿಯಿಂದ ಮುಸಲ್ಮಾನಳು; ಇಷ್ಟೇ ಅಲ್ಲ; ವಾರಾಂಗನೆಯ ಪುತ್ರಿಯು; ಹೀಗಿದ್ದರೂ ಇವಳ ಭಗವದ್ಭಕ್ತಿಯು ದೊಡ್ಡ ದೊಡ್ಡ ಭಕ್ತಶ್ರೇಷ್ಠರನ್ನು ನಾಚಿಸುವಂಥದಿರುವದು.

ಕಾನುಪಾತ್ರೆಯು ವೇಶ್ಯಾಪುತ್ರಿಯಾದ್ದರಿಂದ ಮೂಲತಃ ಸರ್ವಾಂಗ ಸುಂದರಿಯಾಗಿದ್ದಳು. ಪ್ರಾಯದಲ್ಲಂತೂ ಇವಳು ಪ್ರತಿ ಅಪ್ಸರೆಯಂತೆಯೇ ಕಂಗೊಳಿಸುತ್ತಿದ್ದಳು. ಇವಳ ಈ ಸೌಂದರ್ಯವನ್ನು ಸೂರೆಗೊಳ್ಳಲಿಕ್ಕೆ ಎಷ್ಟೋ ಜನ ಕಾಮುಕ ತರುಣರು ಹಾತೊರೆಯುತ್ತಿದ್ದರು. ಆದರೆ ಪಾಂಡುರಂಗನ ಚರಣಗಳಲ್ಲಿ ಮನಸ್ಸನ್ನರ್ಪಿಸಿದ ಕಾನುಪಾತ್ರೆಯು ಯಾರನ್ನೂ ಕಣ್ಣೆತ್ತಿ ನೋಡುತ್ತಿರಲಿಲ್ಲ. ಅವಳು ಪ್ರತಿ ಏಕಾದಶಿಗೊಮ್ಮೆ ಪಂಢರಪುರಕ್ಕೆ ಹೋಗಿ ಪಾಂಡುರಂಗನ ದರ್ಶನ ತಕ್ಕೊಂಡು ತನ್ನ ಮಧುರ ಗಾನಾಲಾಪದಿಂದ ದೇವರ ಸೇವೆಯನ್ನು ಮಾಡಿ ಬರುತ್ತಿದ್ದಳು. ಹೀಗಿರಲು ಒಂದು ಏಕಾದಶಿಗೆ ಆ ಪ್ರಾಂತದ ಅಧಿಕಾರಿಯು ಪಂಢರಪುರಿಗೆ ಬಂದನು. ಅಧಿಕಾರ-ಯೌವನ-ಸಂಪತ್ತುಗಳಿದ್ದವರ ವಿಷಯ ಲೋಲುಪತೆಯನ್ನು ಬಣ್ಣಿಸುವದೇನು? ಆತನು ಕಾನುಪಾತ್ರೆಯ ಅಂಗಸುಖಕ್ಕಾಗಿ ಹೊಂಚು ಹಾಕಿದನು. ಆದರೆ ಪರಮ ವೈರಾಗ್ಯಶಾಲಿನಿಯಾದ ಕಾನುಪಾತ್ರೆಯು ಆ ಅಧಿಕಾರಿಯನ್ನು ಕಃಪದಾರ್ಥವೆಂದು ಭಾವಿಸಿ ಸ್ವಾಮಿಯ ಸೇವೆ ತೀರಿಸಿಕೊಂಡು ತನ್ನ ಊರಿಗೆ ಹೊರಟು ಹೋದಳು. ಈ ಸಂಗತಿಯ ಶ್ರವಣದಿಂದ ಅಧಿಕಾರಿಯು ಸಂತಪ್ತನಾಗಿ ತನ್ನ ಸೈನಿಕರನ್ನು ಕಳಿಸಿ ಆಕೆಯನ್ನು ಹಿಡತರಿಸಿದನು. ಆದರೆ ಆ ಆ ಸೈನಿಕರು ಆಕೆಯ ಪ್ರಾರ್ಥನೆಯಂತೆ ಅವಳನ್ನು ಮೊದಲು ಪಾಂಡುರಂಗನ ದರುಶನಕ್ಕೆ ಕರೆದುಕೊಂಡು ಹೋದರು. ಆಕೆಯು ದೇವದರುಶನ ಹೊಂದಿ ದುರ್ಜನರ ಬಾಧೆಯು ತಟ್ಟಬಾರದೆಂದು ಪ್ರಾರ್ಥಿಸಲು ಭಗವನ್ಮಾಯೆಯಿಂದ ಅವಳು

ಯಾರಿಗೂ ಕಾಣದಂತಾದಳು. ಸೈನಿಕರು ಹಣ ಮುಟ್ಟಿಕೊಂಡು ಬರಿಗೈಯಿಂದ ತಮ್ಮ ಯಜಮಾನನ ಬಳಿಗೆ ಹೋದರು.

(೩) ಮೂರನೆಯ ಪುಣ್ಯಶಾಲಿಯು ಅಂತ್ಯಜನು; ಇವನಿಗೆ ಚೋಖಾಮೇಳನೆಂದು ಕರೆಯುತ್ತಿದ್ದರು. ಪಾಂಡುರಂಗನ ನಾಮಗರ್ಜನದಲ್ಲಿ ಇವನ ಅಭಿರುಚಿ ಬಹಳ; ರಾಮಾವತಾರ ಕಾಲದಲ್ಲಿ ಶ್ರೀ ಮಾರುತಿಯು ರಾಮನಾಮದಲ್ಲಿ ಪ್ರೇಮ ತಾಳಿ, ಶ್ರೀ ರಾಮನಾಮ ಇಲ್ಲದ್ದನ್ನು ಸ್ವೀಕರಿಸಲಾರೆನೆಂಬದನ್ನು ಸಿದ್ಧಮಾಡಿ ತೋರಿಸುವಾಗ ತನ್ನ ಹೊಟ್ಟೆಯನ್ನು ಬಗೆದು ಅದರಲ್ಲಿ ಶ್ರೀ ರಾಮಮೂರ್ತಿಯನ್ನು ತೋರಿಸಿದ ಅದ್ಭುತ ಲೀಲೆಯಂತೆ ಇವನ ವಿಷಯವಾಗಿಯೂ ಅದ್ಭುತ ಆಖ್ಯಾಯಿಕೆ ಯಿರುವದು. ಇವನ ನಾಮಭಕ್ತಿಯ ವಿಷಯವಾಗಿ ಇರುವ ಆಖ್ಯಾಯಿಕೆ ಯೇನಂದರೆ ಇವನು ಒಮ್ಮೆ ನಾಲ್ಕಾರು ಜನರೊಂದಿಗೆ ಮಂಗಳವೇಢೆಯಲ್ಲಿ ಒಂದು ಕೋಟೆಯ ಗೋಡೆಯ ಕೆಳಗೆ ನಿಂತುಕೊಂಡು ಪಾಂಡುರಂಗನ ಭಜನೆ ಮಾಡುತ್ತಿರಲು, ಕರ್ಮ ಧರ್ಮ ಸಂಯೋಗದಿಂದ ಆ ಗೋಡೆಯು ಬಿದ್ದು ಅದರ ಕೆಳಗಿದ್ದವರೆಲ್ಲರೂ ಮೃತರಾದರು. ಮಹಾ ಭಗವದ್ಭಕ್ತನಾದ ಚೋಖಾಮೇಳನು ಸತ್ತನೆಂಬದನ್ನು ಬೇರೆ ಹೇಳುವ ಕಾರಣವಿಲ್ಲ; ಈ ಮಾತಿಗೆ ಎಷ್ಟೋ ದಿವಸಗಳು ಕಳೆದುಹೋಗಲು ಪಾಂಡುರಂಗನು ಚೋಖಾಮೇಳನ ಯೋಗ್ಯತೆಯನ್ನು ಜನರಿಗೆ ತೋರಿಸಬೇಕೆಂದು ಕೆಲವು ಜನ ಸದ್ಗೃಹಸ್ಥರ ಸ್ವಪ್ನದಲ್ಲಿ ಹೋಗಿ ಮಂಗಳವೇಢೆಯಲ್ಲಿ ಕೋಟೆಯ ಗೋಡೆಯ ಬುಡದಲ್ಲಿ ಸಿಕ್ಕಿ ಸತ್ತವರಲ್ಲಿ ನಮ್ಮ ಭಕ್ತನಾದ ಚೋಖಾಮೇಳನೆಂಬವನೊಬ್ಬನು ಇರುವನು. ಅವನ ಅಸ್ಥಿಯನ್ನು ಹುಡುಕಿ ತಂದು ನನ್ನ ಗುಡಿಯ ಮುಂದೆ ಹುಗಿಯಬೇಕು. ಯಾವ ಅಸ್ಥಿಯಿಂದ ವಿಠ್ಠಲ ವಿಠ್ಠಲವೆಂಬ ನಾಮಘೋಷವು ಕೇಳಬರುವದೋ ಅದೇ ಅಸ್ಥಿಯೇ ಚೋಖಾಮೇಳನದೆಂದು ತಿಳಿಯಬೇಕು. ಎಂದು ಅಪ್ಪಣೆ ಮಾಡಿದನು. ಆ ಜನರು ಅದರಂತೆ ಪರೀಕ್ಷಿಸಿ ಅಸ್ಥಿಗಳನ್ನು ತಂದು, ಭಗವದಾಜ್ಞೆಯಂತೆ ಹುಗಿದರು; ಭಗವದ್ಭಕ್ತರ ಜಡಶರೀರವೂ ಅವರ ಶರೀರದ ಅವಶೇಷಗಳೂ ಯಾಕೆ ಪವಿತ್ರವೆಂಬದು ಈ ಆಖ್ಯಾಯಿಕೆಯಿಂದ ಸ್ಪಷ್ಟವಾಗಿ ತಿಳಿಯಬಹುದಾಗಿದೆ.

(೪) ನಾಲ್ಕನೆಯವರು ಗೋವಿಂದಬುವಾ ಎಂಬವರು. ಇವರು ಬ್ರಾಹ್ಮಣ ವರ್ಣಕ್ಕೆ ಸೇರಿದವರು. ಇವರು ಪರಮ ವಿರಕ್ತರು. ಸದ್ಬೋಧಾಮೃತದಿಂದ ಹಲವುಜನರ ಕಲ್ಯಾಣವನ್ನು ಮಾಡಿದರು. ಇವರನ್ನು ಹಲವುಜನರು ಉಪಾಸಿಸುತ್ತಿರುವರು.

(೫) ಮುನಿಬುವಾ ಎಂಬವರು ಮಂಗಳವೇಢೆಯ ಸತ್ಪುರುಷ ಮಾಲಿಕೆಯಲ್ಲಿ ಐದನೆಯವರು. ಇವರು ತಮ್ಮ ಆಯುಷ್ಯದಲ್ಲಿ ಈಶ್ವರಭಜನೆಯ ಹೊರತು ಅನ್ಯ ಉಸಾಬರಿಯನ್ನು ಮಾಡಲಿಲ್ಲ. ಇವರು ಸಮಾಧಿಯ ಕಾಲಕ್ಕೆ ಮುಪ್ಪಿನವರಾಗಿದ್ದರು. ಒಬ್ಬ ಶ್ರೀಮಂತ ಭಕ್ತನು ಇವರ ಸಮಾಧಿಯನ್ನು ಬಹು ಸುಂದರವಾಗಿ ಕಟ್ಟಿಸಿರುವನು.

(೬) ಮುನಿಬುವಾನವರ ತರುವಾಯ ಸಾಧುತ್ವದಿಂದ ಮಂಗಳವೇಢೆಯನ್ನು ಅಲಂಕರಿಸಿದವರೆಂದರೆ ಬಾಳಕೃಷ್ಣ ಬುವಾ ಎಂಬವರು. ಇವರ ಪೂರ್ವಜರು ಕುಲಕರ್ಣಿಯ ವೃತ್ತಿಯವರಿದ್ದರು; ಇವರ ವೈರಾಗ್ಯಪರ ವೃತ್ತಿಯ ವಿಷಯವಾಗಿ ಹಲವು ಉಪಾಖ್ಯಾನಗಳು ಉಪಲಬ್ಧವಿರುವವು.

(೭) ಇನ್ನು ಏಳನೆಯ ಸಾಧು ಶಿಖಾಮಣಿಗಳೆಂದರೆ ದಿಗಂಬರ ಬುವಾನವರು; ಇವರು ಕೇವಲ ಲೀಲಾಮೂರ್ತಿಗಳು; ಜಗತ್ತಿನಲ್ಲಿ ಏನಾದರೂ ಸ್ವಾತಂತ್ರ್ಯವಿದ್ದರೆ ಅದು ಇವರಲ್ಲಿಯೇ ಇತ್ತೆಂದು ನಿಶ್ಶಂಕೆಯಿಂದ ಹೇಳಬಹುದಾಗಿತ್ತು. ಇವರು ಮಂಗಳವೇಢೆಯ ಜನರಿಗೆ ಹಲವು ಬಗೆಯ ಲೀಲೆಗಳನ್ನು ತೋರಿಸಿ ಅವರಲ್ಲಿ ಧರ್ಮ ಜಾಗ್ರತೆಯನ್ನುಂಟುಮಾಡಿದರು.

ಈ ಮೇರೆಗೆ ಏಳು ಜನ ಸಾಧುಪುರುಷರು ವಾಸಮಾಡಿದ್ದರಿಂದ ಮಂಗಳವೇಢೆಯು ಅತ್ಯಂತ ಪವಿತ್ರವಾಯಿತು. ಪವಿತ್ರವಸ್ತುವು ಪವಿತ್ರಜನರಿಗೇ ಪ್ರಿಯಕರವಾಗುವದೆಂಬದು ಸುಳ್ಳಲ್ಲ. ಯಾವನು ಸರ್ವದಾ ಪವಿತ್ರ ವಸ್ತುವನ್ನು ಅಪೇಕ್ಷಿಸುವನೋ ಅವನು ಪವಿತ್ರನಾಗಿರುವನೆಂತಲೇ ತಿಳಿಯಬೇಕು. ಇದಕ್ಕೆ ವಿರುದ್ಧವಾಗಿ ಅಪವಿತ್ರ ಮನುಷ್ಯನ ಮನಸ್ಸು ಅಪವಿತ್ರಪದಾರ್ಥಗಳನ್ನೇ ಇಚ್ಛಿಸುತ್ತದೆ. ಈ ಇಚ್ಛೆಯ ಮೇಲಿಂದ ಮನುಷ್ಯನ ಪವಿತ್ರಾಪವಿತ್ರತೆಯನ್ನು ನಿರ್ಣಯಿಸಲಿಕ್ಕೆ ಬರುತ್ತದೆ. ಇರಲಿ:

ನಮ್ಮ ಚರಿತ್ರನಾಯಕರು ಮಂಗಳವೇಢೆಗೆ ಎಂಟನೆಯ ರತ್ನಸ್ವರೂಪರಾಗಿ ಬಂದರು. ಇವರು ಎಲ್ಲಿ ಹುಟ್ಟಿದರು, ಎಲ್ಲಿ ಬೆಳೆದರು? ಇವರ ತಂದೆತಾಯಿಗಳಾರು?_ಎಂಬ ಸಂಗತಿಗಳು ನಿಶ್ಚಿತವಾಗಿ ಉಪಲಬ್ಧವಾಗಿಲ್ಲ. ಆದ್ದರಿಂದ ಇವರು ಪ್ರೌಢದೆಶೆಯಲ್ಲಿ ಯಾವಾಗ ಮಂಗಳವೇಢೆಗೆ ಬಂದರೋ ಆವಾಗಿನಿಂದಲೇ ಇವರ ಚರಿತ್ರಕ್ಕೆ ಆರಂಭವಾಯಿತೆಂದು ಸಮಾಧಾನಹಚ್ಚಿಕೊಳ್ಳಬೇಕಾಗಿದೆ. ಶ್ರೀಸ್ವಾಮಿಗಳವರು ಮನುಷ್ಯದೇಹಧಾರಿಗಳಾದ್ದರಿಂದ ಇವರಿಗೆ ಜನನೀ-ಜನಕರು ಇರಲೇಬೇಕೆಂಬದು ಮಾನವೀ ಕಲ್ಪನೆಗೆ ಶಕ್ಯವಿದ್ದರೂ ಈಶ್ವರೀ ಲೀಲೆಯು ತಿಳಿ

ಯದ್ದರಿಂದ ಆ ವಿಷಯದಲ್ಲಿ ಸಂಭವಾಸಂಭವದ ಕಲ್ಪನೆಯನ್ನು ಮಾಡುತ್ತ ಕೂಡ್ರುವದು ಯುಕ್ತವಲ್ಲ. ಬಹು ದಿವಸಗಳಿಂದ ಸತ್ಪುರುಷರ ಸೇವೆಯನ್ನು ಮಾಡಿ ಸಜ್ಜನರ ಕೃಪಾದೃಷ್ಟಿಗೆ ಒಳಗಾದ ಮಂಗಳವೇಢೆಯ ಜನರು ನಮ್ಮ ಅವಧೂತ ಶ್ರೀಗಳವರನ್ನು ಕಂಡು ತುಂಬಾ ಸಂತೋಷಪಟ್ಟು ಅವರ ಶುಶ್ರೂಷೆಯಲ್ಲಿ ನಿರತರಾದರು.

ಮಂಗಳವೇಢೆಯ ಗ್ರಾಮವು ಪಂಢರಪುರದ ದಕ್ಷಿಣ ಭಾಗದಲ್ಲಿ ೪|೫ ಹರದಾರಿಗಳ ಅಂತರದಲ್ಲಿರುತ್ತದೆ, ಇದು ಸಾಂಗಲಿಪಟವರ್ಧನಂಗೆ ಸೇರಿರುತ್ತದೆ. ಇಲ್ಲಿಯ ನಿವಾಸಿಗಳು ಬಹುತರ ಕೃಷಿಯಿಂದ ಉಪಜೀವಿಸುವರು. ಕಾಲಮಾನಕ್ಕನುಸರಿಸಿ ಇಲ್ಲಿಯ ಜನರು ರಾಗದ್ವೇಷಾದಿಗಳ ಎಳತಕ್ಕೆ ಸಿಕ್ಕಿದ್ದರೂ ಬಹುದಿವಸಗಳಿಂದ ಇಲ್ಲಿ ಸಜ್ಜನರ ಚರಣ ರಜಸ್ಸು ಬೀಳುತ್ತ ಬಂದದ್ದರಿಂದ ಆ ರಜಸ್ಸಿನ ಸ್ಪರ್ಶದಿಂದ ಅವರು ಪುಣ್ಯಶಾಲಿಗಳೆಂದೇ ಹೇಳಬೇಕಾಗುವದು. ಯಾವ ಕಾಲದಲ್ಲಿ ನಮ್ಮ ಚರಿತ್ರನಾಯಕರು ಮಂಗಳವೇಢೆಯಲ್ಲಿ ಕಾಲಿಟ್ಟರೋ ಆ ಕಾಲದಲ್ಲಿ ಆ ಗ್ರಾಮವು ಕೇವಲ ಸಾತ್ವಿಕಾಂಶದಿಂದ ಬೆಳಗುತ್ತಲಿತ್ತೆಂದು ತಿಳಿದು ಬರುವದು. ಹಾಗಿಲ್ಲದಿದ್ದರೆ ಸಜ್ಜನರ ದೃಷ್ಟಿಯು ಆ ಊರ ಮೇಲೆ ಬೀಳುವ ಸಂಭವವೇ ಇದ್ದಿಲ್ಲ. ಇರಲಿ;

ನಾವುಮೇಲೊಂದು ಕಡೆಯಲ್ಲಿ ಹೇಳಿದಂತೆ ನಮ್ಮ ಚರಿತ್ರನಾಯಕರ ಜನ್ಮಾಖ್ಯಾನವು ಸಿಗದ್ದರಿಂದ ಅವರ ಮೂಲ ಹೆಸರು ಯಾರಿಗೂ ತಿಳಿಯದಾಗಿದೆ. ಅದರಂತೆ ಅವರು ಯಾವ ಪ್ರದೇಶದಲ್ಲಿ ಜನ್ಮವ ಧರಿಸಿದರು? ಮಂಗಳವೇಢೆಗೆ ಯಾವ ಕಡೆಯಿಂದ ಬಂದರು? ಎಂಬ ಸಂಗತಿಗಳು ನಿಷ್ಕರ್ಷವಾಗಿ ಗೊತ್ತಾಗುವಂತಿಲ್ಲ. ಈ ವಿಷಯವಾಗಿ ಭಿನ್ನಾಭಿಪ್ರಾಯಗಳು ಬಹಳವಾಗಿ ಕಂಡು ಬರುತ್ತವೆ. ಕೆಲವರು ಅನ್ನುವದೇನಂದರೆ,—''ಶ್ರೀಗಳವರು ದಕ್ಷಿಣಹೈದರಾಬಾದಪ್ರಾಂತದಲ್ಲಿ ಕನ್ನಡ ಪ್ರದೇಶದ ನಿವಾಸಿಗಳು; ಇವರು ಜಾಹಗೀರದಾರರ ಮನೆತನದವರಿದ್ದು, ವೈಭವವನ್ನು ತ್ಯಾಗಮಾಡಿ ವಿರಕ್ತರಾದರು. ಅಲ್ಲಿಂದಲೇ ಇವರು ಮಂಗಳವೇಢೆಗೆ ಬಂದರು.'' ಇನ್ನು ಬೇರೆ ಕೆಲವರು ಅನ್ನುವದೇನಂದರೆ,—''ಶ್ರೀಗಳವರು ಬೆಳಗಾವಪ್ರಾಂತದ ನಿವಾಸಿಗಳು; ಬ್ರಾಹ್ಮಣ ಕುಲೋತ್ಪನ್ನರು; ಇವರಿಗೆ ವಿವಾಹಾದಿ ಸಂಸ್ಕಾರಗಳಿಲ್ಲ; ಬ್ರಹ್ಮಚರ್ಯಾಶ್ರಮದಿಂದಲೇ ಇವರು ಪರಮಹಂಸಪದಕ್ಕೆ ಬಂದರು.'' ಮತ್ತೆ ಬೇರೆ ಹಲವರು—''ಶ್ರೀಗಳವರು ಯಾವ ಪ್ರಾಂತದವರೆಂಬದು ಗೊತ್ತಿಲ್ಲ. ಇವರನ್ನು ನಾವು ನೋಡಿದ ಕಾಲದಲ್ಲಿ ಇವರ ಹತ್ತಿರ ಒಂದು

ನಾಯಿಯಿತ್ತು. ಆದರ ಹಾಲನ್ನೇ ಪಾನ ಮಾಡುತ್ತಿದ್ದರು. ಇವರಿಗೆ ಚಂಚಲ ಭಾರತೀ ಎಂಬ ನಾಮ ಧ್ಯೇಯವು ಇತ್ತು."

ಈ ರೀತಿ ಶ್ರೀಗಳವರ ವಿಷಯಕವಾಗಿ ಅನೇಕ ಆಖ್ಯಾನಗಳು ಉಪಲಬ್ಧವಿರುವವು. ಆದರೆ ಅವುಗಳನ್ನು ನಂಬಲಿಕ್ಕೆ ಸಾಕಷ್ಟು ಪ್ರಮಾಣಗಳಿಲ್ಲ. ಹಲವು ಜನರ ದಂತೋಕ್ತಿಗಳ ಮೇಲಿಂದ ಇವರು ಬೆಳಗಾವಪ್ರಾಂತಸ್ಥರೆಂದು ಮಾತ್ರ ಅನುಮಾನ ಮಾಡಬೇಕಾಗುತ್ತದೆ. ಇದು ಏನೇ ಇರಲಿ, ಇವರು ಮಂಗಳವೇಢೆಗೆ ಬಂದಂದಿನಿಂದಲೇ ಇವರ ಪರಿಚಯವು ಜನರಿಗೆ ಆಗಹತ್ತಿತು. ಜನರ ಕೂಡ ಸಂಭಾಷಣ ಮಾಡುವದು. ಜನರಿಂದ ಸೇವೆ ತಕ್ಕೊಳ್ಳುವದು, ಇತ್ಯಾದಿ ಕೆಲಸಗಳನ್ನು ಇವರು ಮಂಗಳವೇಢೆಯಿಂದಲೇ ಪ್ರಾರಂಭಿಸಿದರೆಂದು ಹೇಳಲಾಗುವದು. ಒಟ್ಟಿನ ಮೇಲೆ ಮಂಗಳವೇಢೆಯು ಭಾಗ್ಯವಿಶೇಷದಿಂದಲೇ ಶ್ರೀಗಳವರು ಅಲ್ಲಿ ವಾಸಮಾಡಿ ತಮ್ಮ ಅವತಾರ ಕಾರ್ಯಕ್ಕೆ ಪ್ರಾರಂಭಿಸಿದರೆಂದು ಹೇಳಲಾಗುವದು. ಹೀಗೆ ಶ್ರೀಗಳವರ ಅವತಾರ ಕಾರ್ಯಕ್ಕೆ ಜನ್ಮಸ್ಥಾನವಾದ ಮಂಗಳವೇಢೆಯು ಅತ್ಯಂತ ಭಾಗ್ಯಶಾಲಿಯಾದದ್ದೆಂದು ಕರೆಯುವೆವು.

## ಎರಡನೆಯ ಪ್ರಕರಣ.

### ಕಾಲಕ್ರಮಣ.

ಮಂಗಳವೇಢೆಗೆ ಬಂದಾಗ ಶ್ರೀ ಗಳವರು ಪರಮ ಹಂಸಾಶ್ರಮದಲ್ಲಿದ್ದರು. ಆಗ ಅವರು ವಿಶೇಷವಾಗಿ ಜನರ ಕೂಡ ಸಂಭಾಷಣವನ್ನು ಮಾಡುತ್ತಿರಲಿಲ್ಲ. ಕೆಲವು ಸಜ್ಜನರು "ಜಡೋನ್ಮತ್ತ ಪಿಶಾಚವತ್" ಇರುವರೆಂದು ದೊಡ್ಡವರು ಹೇಳುವಂತೆ ಇವರ ವರ್ತನವಿತ್ತು. ಗ್ರಾಮದ ಬಹಿರ್ಭಾಗದಲ್ಲಿ ಇವರು ವಾಸಸ್ಥಳವನ್ನು ಕಲ್ಪಿಸಿಕೊಂಡಿದ್ದರಿಂದ ಮೊದಮೊದಲು ಯಾರಿಗೂ ಇವರು ಸತ್ಪುರುಷರೆಂಬದು ಗೊತ್ತಾಗಲಿಲ್ಲ. ಎಲ್ಲಕ್ಕೂ ಮೊದಲು ಇವರ ಯೋಗ್ಯತೆಯನ್ನು ಕಂಡು ಹಿಡಿದವರೆಂದರೆ ಬಾಳಕೃಷ್ಣಬುವಾ ಎಂಬವರು; ಕರತಲ ಭಿಕ್ಷೆ ತರುತಲವಾಸ ಎಂಬ ರೀತಿಯಾಗಿ ನಡೆಯುವವರಿಗೆ ಜನರ ಪರಿಚಯದ ಅವಶ್ಯಕತೆಯು ಬೀಳುವದಿಲ್ಲ.

ಇಂಥವರಿಗೆ ಭಿಕ್ಷೆ ಸಿಕ್ಕರೂ ಸಂತೋಷವು, ಸಿಗದಿದ್ದರೂ ಸಂತೋಷವು. ನಮ್ಮ ಶ್ರೀ ಗಳವರಿಗೆ ಮಂಗಳವೇಢೆಯಲ್ಲಿ ಕೆಲವುದಿನ ನಿರಾಹಾರವೇ ಒದಗಿತು. ಯಾವಾಗ ಬಾಳಕೃಷ್ಣಬುವಾನವರು ಶ್ರೀ ಗಳವರ ಪರಿಚಯುವನ್ನು ಮಾಡಿಕೊಂಡರೋ ಆವಾಗಿನಿಂದ ಅವರ ಉಪವಾಸ ವ್ರತವು ತಪ್ಪಿತು. ಬುವಾನವರು ಅವರಿಗೆ ಭಿಕ್ಷೆಯನ್ನು ಒದಗಿಸಿ ಕೊಡಲಾರಂಭಿಸಿದರು. ಹೀಗೆ ಬುವಾನವರ ಯೋಗದಿಂದ ಮಂಗಳ ವೇಢೆಯ ನಿವಾಸಿಗಳು ಶ್ರೀ ಗಳವರ ಪರಿಚಯಕ್ಕೆ ಕಾರಣರಾದರು. ಶ್ರೀಗಳವರ ಕಠಿಣತರವಾದ ವೈರಾಗ್ಯವೃತ್ತಿ, ಪ್ರಸನ್ನಮುಖ, ಸರ್ವದಾ ನಿರಪೇಕ್ಷತಾ ಇವುಗಳನ್ನು ನೋಡಿ ಜನರು ದಂಗಾದರು. ಕಲಿಯುಗದಲ್ಲಿ ಇಂಥ ಸಜ್ಜನರು ಸಿಗುವದು ದುರ್ಲಭವೆಂದು ಅವರಿಗೆ ಅನಿಸಹತ್ತಿತು. ಪ್ರತಿನಿತ್ಯ ಜನಸಮ್ಮರ್ದವು ಅವರ ಬಳಿಯಲ್ಲಿ ಹೆಚ್ಚತೊಡಗಿತು. ಹೀಗೆ ಎಷ್ಟು ಜನರು ಸೇರಿದರೂ ಆ ಮಹಾತ್ಮರು ಸರ್ವದಾ ಏಕರೂಪರಾಗಿಯೇ ಇರುತ್ತಿದ್ದರು. ಮೊದಲು ಒಬ್ಬರೇ ಇರುವಾಗ ಇದ್ದ ಸ್ಥಿತಿಯು ಸಾವಿರಾರು ಜನರು ನೆರೆದರೂ ಚಲಿಸಲಿಲ್ಲ.

ಮಹಾರಾಜರು ಮಂಗಳ ವೇಢೆಯಲ್ಲಿ ಎರಡು ವರುಷ ಮಾತ್ರ ಇದ್ದರು. ಈ ಅವಧಿಯಲ್ಲಿ ಅವರು ಪ್ರಸಂಗ ವಶಾತ್ ಒಂದೆರಡು ದೈವೀ ಚಮತ್ಕಾರಗಳನ್ನು ಜನರಿಗೆ ತೋರಿಸಿದರು. ಜನರಿಗೆ ಚಮತ್ಕಾರಗಳನ್ನು ತೋರಿಸಬೇಕು, ಅವರಿಂದ ನಾಲ್ಕು ದುಡ್ಡು ಎತ್ತಿಸಬೇಕು, ಎಂಬ ಯಾವ ದೋಷ ಮೂಲವಾದ ಉದ್ದೇಶಗಳಿರದ್ದರಿಂದ ಸಜ್ಜನರ ಲೀಲೆಗಳು ಜನರಿಗೆ ತಾರಕವಾಗಿಯೇ ಪರಿಣಮಿಸುತ್ತವೆ. ಆದ್ದರಿಂದ ಸಜ್ಜನರ ದೈವೀ ಲೀಲೆಗಳನ್ನು ಡಾಂಬಿಕವಾಗಿ ಮಾಡುವ ಜನರ ಆಟಗಳಿಗೆ ಹೋಲಿಸಬಾರದು. ಹೀಗೆ ಮಾಡಿದಲ್ಲಿ ಸರ್ವೋತ್ಕೃಷ್ಟವಾದ ವಜ್ರಕ್ಕೂ ಒಂದು ಸಾದಾ ಗಾಜಿಗೂ ಒರೆ ಹಚ್ಚಿದಹಾಗಾಗುವದು. ಆಸ್ತಿಕ ಶಿರೋಮಣಿಗಳು ಸಜ್ಜನರ ಯೋಗ್ಯತೆಯನ್ನರಿತು ಅವರ ಕೃತ್ಯಗಳಿಗೆ ಮಹತ್ವವ ಕೊಡಬೇಕು.

ಮಹಾರಾಜರವರು ಮಂಗಳವೇಢೆಯಲ್ಲಿದ್ದಾಗ ಬಹು ದೂರ ತಮ್ಮ ಪ್ರಕಾಶವನ್ನು ಕೆಡವದೆ ಬಹು ಗುಪ್ತವಾಗಿದ್ದರು. ಅವರು ಜನರು ಕೂಡುವಂಥ ಯಾವ ಸಾಧನಗಳನ್ನೂ ಇಟ್ಟುಕೊಂಡಿದ್ದಿಲ್ಲ. ನಿಜವಾದ ಸತ್ಪುರುಷರು ತಾವಾಗಿಯೇ ಡೊಳ್ಳು ಬಾರಿಸಹೋಗುವದಿಲ್ಲ. ತಾವು ಸ್ವಾಭಾವಿಕವಾಗಿ ಆಚರಿಸುತ್ತಿರುವಾಗ ಎಷ್ಟು ಜನರು ಗುರುತುಹಿಡಿಯುವರೋ ಅವರೇ ಪುಣ್ಯಶಾಲಿಗಳಾಗುವರೆಂದು ತಿಳಿಯುವರು. ತಿರುಗಿ ಕೇಳಿದರೆ ಅವರು ಆದಷ್ಟು ಗುಪ್ತವಾಗಿರಲಿಕ್ಕೇ ಪ್ರಯತ್ನ ಮಾಡುವರಲ್ಲದೆ ಬೈಲಿಗೆ ಬರಲಿಚ್ಛಿಸುವದಿಲ್ಲ. ವ್ಯವಹಾರ ದೃಷ್ಟಿಯಿಂದ ನೋಡಿದರೂ

ಈ ಮಾತು ಅತ್ಯಂತ ಮಹತ್ವದ್ದಿರುವದು. ಗುಪ್ತವಾಗಿದ್ದದ್ದು ಸ್ಥಿರವಾಗುವದು, ತೆರೆದದ್ದು ಹಾಳಾಗುವದು. ಎಂಬ ಮಾತಿನ ರಹಸ್ಯವನ್ನು ಸತ್ಪುರುಷರು ತಮ್ಮ ಆಚರಣೆಯಿಂದ ತಿಳಿಸಿಕೊಡುವರು. ಯಾವನಿಗೆ ಕೀರ್ತಿಯ ಅಭಿಲಾಷೆಯಿದೆಯೋ, ಯಾವನು ಸಮಾಜದಲ್ಲಿ ವೈಭವಶಾಲಿಯಾಗಿ ಮೆರೆಯಬೇಕೆನ್ನುವನೋ ಅವನಿಗೆ ಬ್ರಹ್ಮಾನುಭವವು ಆಗಿಲ್ಲೆಂದು ಅನ್ನಬೇಕಾಗುತ್ತದೆ. ಇದಕ್ಕೆ ವಿಪರೀತ ಸ್ಥಿತಿಯಲ್ಲಿ ತೋರುವವನೇ ಬ್ರಹ್ಮಾನುಭವವನ್ನು ಹೊಂದಿದ ಸಜ್ಜನನು. ಈ ಲಕ್ಷಣವು ನಮ್ಮ ಮಹಾರಾಜರವರ ಚರಿತ್ರದಲ್ಲಿ ಓತಪ್ರೋತವಾಗಿ ತುಂಬಿರುತ್ತದೆ. ಅವರು ತಮ್ಮ ಮಹಿಮಾತಿಶಯವನ್ನು ತಾವಾಗಿಯೇ ತೋರಿಸ ಹೋಗದಿರುವದಕ್ಕೆ ಇದೇ ಕಾರಣವು.

ಬಾಳಕೃಷ್ಣಬುವಾ ಎಂಬವರು ಮಹಾರಾಜರ ಗುರುತು ಹಿಡಿಯದಿದ್ದರೆ, ಇಡೀ ಮಂಗಳವೇಢೆಯಲ್ಲಿ ಅವರನ್ನು ಗುರ್ತಿಸುವಷ್ಟು ಸತ್ವಶಾಲಿಗಳು ಇನ್ನಾರೂ ದೊರೆಯುತ್ತಿದ್ದಿಲ್ಲವೆಂದು ಹೇಳಬೇಕಾಗುವದು. ಪರೀಕ್ಷಕರು ರತ್ನದ ಖನಿಯನ್ನು ಗೊತ್ತುಹಚ್ಚಿದಬಳಿಕ ಪರೀಕ್ಷೆಯಿಲ್ಲದ ಸಾವಿರಾರು ಜನರು ಮುತ್ತುವಂತೆ ಬಾಳಕೃಷ್ಣಬುವಾನವರು ತಮ್ಮ ಸತ್ವಾತಿಶಯದಿಂದ ಮಹಾರಾಜರನ್ನು ಕಂಡು ಹಿಡಿಯಲು ಸಾವಿರಾರು ಜನರು ಅವರ ಬಳಿಗೆ ಬರಹತ್ತಿದರು. ಹೀಗೆ ಸಜ್ಜನರ ಪರೀಕ್ಷೆಯನ್ನು ಮಾಡಿ ಅವರ ಪರಿಚಯವನ್ನು ಲೋಕಕ್ಕೆ ಮಾಡಿಕೊಡುವವರು ನಿಜವಾಗಿ ಧನ್ಯರೆಂದು ಹೇಳಲಾಗುವದು.

ಮಹಾರಾಜರು ತಮ್ಮ ಬ್ರಹ್ಮಾನುಭವಲಕ್ಷಣಕ್ಕನುಸರಿಸಿ ಮಂಗಳವೇಢೆಯಲ್ಲಿ ಯಾವ ಉಪಾಧಿಗೂ ಒಳಗಾಗಲಿಲ್ಲ. ಅವಧೂತ ವೃತ್ತಿಯಿದ್ದದರಿಂದ ಸ್ನಾನ-ಸಂಧ್ಯಾದಿ ಕರ್ಮಾಚರಣೆಗಳ ಆಡಂಬರವು ಕೂಡಾ ಅವರಿಗೆ ಬೇಕಾಗಿದ್ದಿಲ್ಲ ಭಜನೆ ಸಪ್ತಾಹ, ಪಾರಾಯಣಾದಿ ಮಾರ್ಗಗಳಂತೂ ಅವರ ಎಡಬಲ ಸುಳಿದಾಡುವಹಾಗಿದ್ದಿಲ್ಲ. ಈ ಕಾಲಕ್ಕೆ ಅವರು ಕೇವಲ ಸ್ಥಾಣುವತ್ ಇದ್ದರೆಂದು ಹೇಳಬಹುದು. ಯಾರಾದರೂ ಭಿಕ್ಷೆತಂದರೆ ಮನಸಿಗೆ ಬಂದಷ್ಟು ಸ್ವೀಕರಿಸಬೇಕು; ಮಾತಾಡಿಸಿದರೆ ಅಷ್ಟರಮಟ್ಟಿಗೆ ಎರಡು ಮಾತುಗಳನ್ನು ಆಡಬೇಕು; ಜನರು ತಮ್ಮ ಸೇವೆ ಮಾಡಿದರೆ ಸುಮ್ಮನಿರಬೇಕು; ಮಾಡದಿದ್ದರೆ ಮಾಡಿರೆಂದು ಹೇಳುವ ಗೊಂದಲಕ್ಕೆ ಹೋಗುತ್ತಿದ್ದಿಲ್ಲ. ಈ ಪ್ರಕಾರ ಅವರು ಅಖಂಡ ಎರಡು ವರುಷಗಳ ವರೆಗೆ ಆ ಗ್ರಾಮದಲ್ಲಿ ಕಾಲಕ್ರಮಣ ಮಾಡಿದರು. ಇಂಥ ಸ್ಥಿತಪ್ರಜ್ಞೆಯುಳ್ಳ ಮಹಾತ್ಮರಿಗೆ ಅನಂತ ಪ್ರಣಾಮಗಳು!!

ಈ ರೀತಿಯಾಗಿ ಮಹಾರಾಜರವರು ಮಂಗಳವೇಢೆಯಲ್ಲಿ ಕಾಲಕ್ರಮಣಮಾಡತೊಡಗಿದರು. ಈ ಅವಧಿಯಲ್ಲಿ ಬಾಳಕೃಷ್ಣಬುವಾನವರು ಪರಮಧನ್ಯತೆಯನ್ನು ಪಡೆದರು. ಮೊದಲೇ ಅಧಿಕಾರಸಂಪನ್ನರಾದ ಅವರು ಮಹಾರಾಜರ ಸಾನ್ನಿಧ್ಯದಿಂದ ಪೂರ್ಣಬ್ರಹ್ಮಸ್ವರೂಪರಾದರು. ಸಜ್ಜನರು ಲೌಕಿಕ ಸಂತತಿಯನ್ನು ಪಡೆಯಲಿಚ್ಛಿಸದಿದ್ದರೂ ಪಾರಮಾರ್ಥಿಕ ಸಂತತಿಯನ್ನು ಅತ್ಯಂತ ಆಸ್ಥೆಯಿಂದ ಬಯಸುತ್ತಿರುವರು. ಯಾರಾದರೂ ತಮ್ಮ ಬ್ರಹ್ಮಾನುಭವಸುಖಕ್ಕೆ ಪಾಲುಗಾರರಾಗಲಿ ಎಂದು ಹಗಲಿರುಳೂ ಹಾರೈಸುತ್ತಲಿರುವರು. ಅಧಿಕಾರಸಂಪನ್ನರಾದ ಶಿಷ್ಯರು ಸಿಕ್ಕರೆ ಅವರಿಗೆ ಹೊಟ್ಟೆತುಂಬಿದಂತಾಗುವದು. ಅನಧಿಕಾರಿಗಳಾದ ಸಾವಿರಾರುಜನ ಶಿಷ್ಯರಿದ್ದರೂ ಅವರ ಮನಸ್ಸು ತೃಪ್ತವಾಗುವದಿಲ್ಲ. ಅದರಂತೆ ನಮ್ಮ ಮಹಾರಾಜರಾದರು ಸಚ್ಛಿಷ್ಯರನ್ನು ಬಯಸುತ್ತಿದ್ದರು. ಮೇಲೆ ಹೇಳಿದಂತೆ ಬಾಳಕೃಷ್ಣಬುವಾನವರು ಅವರ ಇಚ್ಛೆಯನ್ನು ಪೂರ್ಣಮಾಡಲು ಮಂಗಳವೇಢೆಗೆ ಬಂದ ಕೆಲಸವಾಯಿತೆಂದು ಅವರು ಒಡನುಡಿದರು.

ಬಳಿಕ ಒಂದುದಿನ ಮಹಾರಾಜರು ಸಂಗಡ ಬಾಳಕೃಷ್ಣಬುವಾನವರನ್ನು ಕರಕೊಂಡು ಶ್ರೀ ಮಾಣಿಕ ನಗರಕ್ಕೆ ನಡೆದರು. ಅಲ್ಲಿ ಸುಪ್ರಸಿದ್ಧ ಸತ್ಪುರುಷರಾದ ಶ್ರೀಮಾಣಿಕಪ್ರಭುಗಳು ವಾಸವಾಗಿದ್ದರು. ಮಹಾರಾಜರು ಪುರಿಯನ್ನು ಸೇರಿ ಪ್ರಭುಗಳ ಬಳಿಗೆ ಹೋದರು. ಆಗ ಪ್ರಭುಗಳು ತಮ್ಮ ಪರಿವಾರದೊಡನೆ ಮಾತನಾಡುತ್ತ ಕುಳಿತುಕೊಂಡಿದ್ದರು. ಅವರು ಒಂದು ಗಾದಿಯಮೇಲೆ ಕುಳಿತಿದ್ದರು. ಮಹಾರಾಜರು ಹೋದವರೇ ಪ್ರಭುಗಳ ತೊಡೆಗೆ ತೊಡೆ ಆನಿಸಿ ಅವರು ಕುಳಿತಿರುವ ಗಾದಿಯ ಮೇಲೆ ಕುಳಿತುಕೊಂಡರು. ಜನರಿಗೆ ಆಶ್ಚರ್ಯವಾಯಿತು. ಇವರಾರೋ ಮಹನೀಯರಿರಬಹುದೆಂದು ತರ್ಕಮಾಡತೊಡಗಿದರು. ಅಷ್ಟರಲ್ಲಿ ಒಂದು ಚಮತ್ಕಾರವು ವರ್ತಿಸಿತು. ಅದೇನಂದರೆ ಅಕ್ಕಲಕೋಟೆಯ ಬಾಬಾಜಿಪಂತನೆಂಬ ಒಬ್ಬಗೃಹಸ್ಥನು ವೈರಾಗ್ಯವನ್ನು ತಾಳಿ ಮಾಣಿಕಪ್ರಭುಗಳ ಬಳಿಗೆ ಸೇವೆಗೆ ಬಂದಿದ್ದನು. ಮಹಾರಾಜರು ಬಂದಾಗ ಆತನು ಪ್ರಭುಗಳ ಬಳಿಯಲ್ಲಿಯೇ ಕುಳಿತುಕೊಂಡಿದ್ದನು. ಆಗ ಪ್ರಭುಗಳು ಅವನನ್ನುದ್ದೇಶಿಸಿ—ಬಾಬಾಜಿಪಂತ, ಈ ಮಹಾರಾಜರೇ ನಿನ್ನ ಗುರುಗಳು; ಇವರನ್ನು ಸೇವಿಸಿ ಕೃತಾರ್ಥನಾಗು, ಎಂದು ನುಡಿದರು. ಕೂಡಲೆ ಮಹಾರಾಜರು—ನಾನು ಸ್ವಲ್ಪದಿವಸಗಳಲ್ಲಿ ಅಕ್ಕಲಕೋಟಿಗೆ ಬರುವೆನು. ಆಗ ನೀವು ನನ್ನ ಸೇವೆಗೆ ಬರಬಹುದು? ಎಂದು ನುಡಿದರು. ಹೀಗೆ ಒಮ್ಮಿಂದೊಮ್ಮೆ ತನ್ನ ವಿಷಯವಾಗಿ ಈ ಉಭಯಸತ್ಪುರುಷರೂ ಮಾತಾಡಿದ್ದನ್ನು ಕೇಳಿ ಬಾಬಾಜಿಪಂತನಿಗೆ ಆಶ್ಚರ್ಯವಾಯಿತು. ಆತನು

ಪ್ರಭುಗಳನ್ನು ಕುರಿತು ಬದ್ಧಾಂಜಲಿಯಾಗಿ ಪ್ರಾರ್ಥಿಸಿದನೇನಂದರೆ—ಮಹಾಪ್ರಭೋ, ನಾನು ಸೇವೆಗಾಗಿ ತಮ್ಮ ಚರಣಗಳ ಸನ್ನಿಧಿಯನ್ನಿಚ್ಛಿಸಿ ಬಂದಿರಲು, ತಾವು ಅನ್ಯಸತ್ಪುರುಷರನ್ನು ತೋರಿಸಿ, ನನಗೆ ಹೊರಹಾದಿಯನ್ನು ಹಚ್ಚಬಹುದೇ?

ಬಾಬಾಜಿಪಂತನ ಈ ಮಾತು ಕೇಳಿ ಪ್ರಭುಗಳು ನಕ್ಕರು; ಮತ್ತು ಅವನನ್ನು ಕುರಿತು-"ಅಪ್ಪಾ, ಬಾಬಾಜೀ, ಹಾಗೆ ತಿಳಿಯಬೇಡ. ಈ ಮಹಾರಾಜರೇ, ನಿಜವಾಗಿ ನಿನ್ನ ಗುರುಗಳು; ಪೂರ್ವಜನ್ಮದಲ್ಲಿ ನೀನು ಇವರ ಸೇವೆಯನ್ನು ಮಾಡಿರುವೆ. ಇವರು ನಿನಗೆ ತಮ್ಮ ವಿಳಾಸವನ್ನು ಹಾಕಿಬಿಟ್ಟಿರುತ್ತಾರೆ. ತಿರುಗಿ ಕೇಳಿದರೆ ನಾವೇ ನಿನಗೆ ಅನ್ಯರು. ನೀನು ನಿನ್ನ ಪೂರ್ವಜನ್ಮದ ಗುರುಗಳನ್ನು ಗುರ್ತಿಸದೆ ನನ್ನ ಬಳಿಗೆ ಬಂದಿರುತ್ತೀ; ನಿನಗೆ ಅಜ್ಞಾನವಿದ್ದರೂ ನಿನ್ನ ಗುರುಗಳಿಗೆ ಅಜ್ಞಾನವಿಲ್ಲ. ಅವರು ಶಿಷ್ಯ ವಾತ್ಸಲ್ಯದಿಂದ ನಿನ್ನನ್ನು ಹುಡುಕುತ್ತ ನನ್ನ ಬಳಿಗೆಬಂದಿರುವರು; ಆದ್ದರಿಂದ ನಿನ್ನ ಗುರುಗಳನ್ನು ಸೇವಿಸಿ ಧನ್ಯನಾಗು; ಈ ಜನ್ಮದಲ್ಲಿ ನಿನ್ನ ಪರಿಪಕ್ವವು ಬಂದದ್ದರಿಂದ ನಿನ್ನ ಗುರುಗಳು ನಿನ್ನ ಸಲುವಾಗಿ ಜನ್ಮಧಾರಣೆ ಮಾಡಿರುವರು, ಎಂದು ಹೇಳಿ ಮಹಾರಾಜರೊಡನೆ ಅಂತರ್ಗೃಹವನ್ನು ಪ್ರವೇಸಿಸಿದರು. ಕೂಡಿದ ಜನರು ಆಶ್ಚರ್ಯಪಡುತ್ತ ಗುರು-ಶಿಷ್ಯರ ಸಂಬಂಧವನ್ನು ಚಿಂತಿಸುತ್ತ ಮನೆಗೆ ತೆರಳಿದರು. ಇತ್ತ ಬಾಬಾಜಿಪಂತನು ಸಂದೇಹ ನಿವೃತ್ತಿಯಾಗದೆ ಆಲೋಚಿಸುತ್ತ ಹಾಗೆ ತನ್ನ ಬಿಡಾರಕ್ಕೆ ಹೋಗಿ ಮಲಗಿಕೊಂಡನು. ಆಗ ರಾತ್ರಿಯು ಬಹಳವಾಗಿದ್ದರೂ ಅವನಿಗೆ ನಿದ್ರೆ ಬಾರದಾಯಿತು. ಅವನು ಪ್ರಭುಗಳ ಮಾತನ್ನು ಚಿಂತಿಸುತ್ತ ಹಲವು ಬಗ್ಗೆಯ ಸಂಶಯಕ್ಕೊಳಗಾಗಿ ಹಾಸಿಗೆಯ ಮೇಲೆ ಹೊರಳಾಡುತ್ತಿದ್ದನು. ಯಾವ ಬಿಡಾರದಲ್ಲಿ ಬಾಬಾಜಿಪಂತನು ಚಿಂತೆಯಿಂದ ಹೊರಳಾಡುತಿದ್ದನೋ ಆ ಬಿಡಾರಕ್ಕೇ ಮಹಾರಾಜರು ಮಲಗಲಿಕ್ಕೆ ಬಂದರು. ಪಂತನ ಮನಸ್ಸಿನಲ್ಲಿ ಆಗಾಗ್ಗೆ ಸಂದೇಹಗಳು ಏಳುತ್ತಿದ್ದವು. ಅವುಗಳಿಗೆ ತಕ್ಕ ಸಮಾಧಾನವು ಸಿಗದೆ ಆತನು ಹಣ್ಣಾಗುತ್ತಿದ್ದನು. ಹೀಗೆ ಪಂತನ ಗತಿಯು ಪಂತನಿಗೆ ಆಗಿರಲು, ಅವನ ಬಳಿಯಲ್ಲಿಯೇ ಮುಸುಕು ಹಾಕಿಕೊಂಡು ಮಲಗಿದ ಮಹಾರಾಜರು, ಹಾಕಿದಮುಸುಕು ತೆಗೆಯದೆ, ಪಂತನ ಸಂದೇಹಗಳಿಗೆ ಸಮರ್ಪಕ ಉತ್ತರಗಳನ್ನು ಹೇಳತೊಡಗಿದರು. ಆ ಉತ್ತರಗಳನ್ನು ಕೇಳಿ ಅವನು ಮೆಟ್ಟಿಬಿದ್ದು—ತನ್ನ ಮನಸ್ಸಿನಲ್ಲಿ ನಡೆದ ವಿಚಾರಗಳನ್ನು ಅಕ್ಷರಶಃ ತಿಳಿದು ಅವುಗಳಿಗೆ ಸಮರ್ಪಕ ಉತ್ತರ ಹೇಳುವ ಈ ಮಹಾತ್ಮನು ನಿಜವಾಗಿಯೂ ನನ್ನ ಸದ್ಗುರುವೆಂದು ನಿಶ್ಚಯಿಸಿ, ತಟ್ಟನೆ ಹಾಸಿಗೆಯಿಂದೆದ್ದು ಮಲಗಿದ್ದ ಮಹಾರಾಜರ ಚರಣಗಳನ್ನು ಗಟ್ಟಿಯಾಗಿ ಹಿಡಿದುಕೊಂಡನು; ಮತ್ತು ದಾಸನನ್ನು ಅಂಗೀಕರಿಸ

ಬೇಕೆಂದು ಪ್ರಾರ್ಥಿಸತೊಡಗಿದನು. ಆದರೆ ಮಹಾರಾಜರು ಒಂದುತುಟಿ ಎರಡು ಮಾಡಲಿಲ್ಲ; ಮುಸುಕು ತೆಗೆಯಲಿಲ್ಲ. ಬಾಬಾಜಿಪಂತನು ಚರಣಗಳನ್ನು ಗಟ್ಟಿಯಾಗಿ ಹಿಡಕೊಂಡು ಕುಳಿತವನು ಅಲ್ಲಿಯೇ ಕಣ್ಣುಮುಚ್ಚಿದನು. ಮರುದಿನ ಬೆಳಗಾದಮೇಲೆ ಅಲ್ಲಿ ಮಹಾರಾಜರಿದ್ದಿಲ್ಲ. ಬಾಬಾಜಿಪಂತನಿಗೆ ಅತಿಶಯ ಅಸಮಾಧಾನವಾಯಿತು. ಆಗ ಅವನು ಪುನಃ ಪ್ರಭುಗಳ ಬಳಿಗೆ ಹೋಗಿ ಅವರಿಂದ ಅಭಯವ ಹೊಂದಿ ಗುರುಶೋಧಕ್ಕಾಗಿ ಅಲ್ಲಿಂದ ಹೊರಹೊರಟನು. ಈ ಪ್ರಕಾರ ಮಹಾರಾಜರು ಅದ್ಭುತ ಚಮತ್ಕಾರವನ್ನು ತೋರಿಸಿ ಪುನಃ ಮಂಗಳವೇಢೆಗೆ ಬಂದು ಯಥಾಪ್ರಕಾರ ಕಾಲಕ್ರಮಣ ಮಾಡತೊಡಗಿದರು.

## ೩ನೆಯ ಪ್ರಕರಣ.

### ಅಕ್ಕಲಕೋಟೆಯಲ್ಲಿ ಭಕ್ತರ ಸಮಾಗಮ.

ಮಹಾರಾಜರವರು ತಾವು ಇಂಥಲ್ಲಿಗೆ ಹೋಗುವೆವು, ಇಂಥ ಕೆಲಸ ಮಾಡುವೆವು ಎಂದು ಯಾರ ಮುಂದೆಯೂ ಹೇಳುತ್ತಿದ್ದಿಲ್ಲ. ಅದರಂತೆ ಅವರು ಮಂಗಳವೇಢೆಯನ್ನು ಬಿಟ್ಟು ಹೋಗುವ ಸುದ್ದಿಯನ್ನು ಯಾರ ಮುಂದೆಯೂ ತಿಳಿಸಲಿಲ್ಲ. ಬಾಳಕೃಷ್ಣ ಬುವಾನವರು ಊರಲ್ಲಿಲ್ಲದ ಒಂದು ಸಮಯವನ್ನು ಸಾಧಿಸಿ ಮಂಗಳವೇಢೆಯನ್ನು ಪರಿತ್ಯಜಿಸಿದರು. ಆಗ ಐದು ತಾಸು ಹೊತ್ತು ಆಗಿತ್ತು. ಬಿಸಲಿನ ಪ್ರಖರತೆಯು ಅನುಭವಕ್ಕೆ ಬರತೊಡಗಿತ್ತು. ಅವರು ಒಂದೆರಡು ಹರದಾರಿಗಳನ್ನು ಕ್ರಮಿಸಲು ಸೂರ್ಯನು ನೆತ್ತಿಯಮೇಲೆ ಬಂದನು. ಕಾಲಿಟ್ಟರೆ ಗುಳ್ಳೆ ಬರುವಷ್ಟು ನೆಲವು ಕಾದಿತು. ಆಗ ಮಹಾರಾಜರು ಅತ್ತಿತ್ತ ನೋಡಲು, ಎದುರಿಗೆ ಒಂದು ಹೊಲದಲ್ಲಿ ಇಬ್ಬರು ಬ್ರಾಹ್ಮಣರು ಒಂದು ಗಿಡದ ನೆರಳಿಗೆ ಕುಳಿತುಕೊಂಡಿದ್ದರು. ಮಹಾರಾಜರು ಓಡುತ್ತೋಡುತ್ತ ಅವರ ಬಳಿಗೆ ಹೋದರು. ಆ ಬ್ರಾಹ್ಮಣರಿಗೆ ಇವರು ಮಹಾರಾಜರೆನ್ನುವದು ಗೊತ್ತಿರಲಿಲ್ಲ. ಮಹಾರಾಜರಾದರೂ ನೋಡಲಿಕ್ಕೆ ಭವ್ಯರಾಗಿ ತೋರುತ್ತಿದ್ದಿಲ್ಲ. ಹುಚ್ಚರ ಹಾಗೆ ತೋರುತ್ತಿದ್ದರು. ಅರಿಯದವರು ಇವರನ್ನು ಹುಚ್ಚರೆಂದೇ ಭಾವಿಸಿ ತಿರಸ್ಕರಿಸುತ್ತಿದ್ದರು. ಪ್ರಸ್ತುತದಲ್ಲಿ ಆ ಬ್ರಾಹ್ಮಣರೂ ಹಾಗೆ ಮಾಡಿದರು. ಆದರೆ ಮಹಾರಾಜರು

ಅವರು ತಿರಸ್ಕರಿಸಿದ ಹಾಗೆ ಮತ್ತಷ್ಟು ಅವರ ಸಮೀಪಕ್ಕೆ ಹೋಗಿ ಅವರ ಪಾದರಕ್ಷೆಗಳನ್ನು ಯಾಚಿಸತೊಡಗಿದರು. ಇವರ ಯಾಚನೆಯಿಂದ ಆ ಬ್ರಾಹ್ಮಣರಲ್ಲಿ ಸಣ್ಣವನಿಗೆ ಕೊಡಬೇಕೆಂಬ ಬುದ್ಧಿ ಹುಟ್ಟಿತು. ಕೂಡಲೆ ಅವನು ತನ್ನ ಪಾದರಕ್ಷೆಯ ಜೋಡನ್ನು ಮಹಾರಾಜರ ಮುಂದೆ ಚಲ್ಲಿದನು. ಮಹಾರಾಜರು ಅವನ್ನು ಮೆಟ್ಟಿಕೊಂಡು ಹಾಹಾ ಅನ್ನುವಷ್ಟರಲ್ಲಿ ಅವರ ಕಣ್ಣುಮರೆಯಾದರು. ಬಳಿಕ ಆ ಬ್ರಾಹ್ಮಣರಿಬ್ಬರಲ್ಲಿ ಬಡಿದಾಟಕ್ಕೆ ಪ್ರಾರಂಭವಾಯಿತು. ಹಿರಿಯನಾದವನು ಚಿಕ್ಕವನನ್ನು ಕುರಿತು—ಮೂರ್ಖಾ, ಆ ಹುಚ್ಚನಿಗೆ ಪಾದರಕ್ಷೆಗಳನ್ನು ಕೊಟ್ಟುಬಿಟ್ಟೆ. ಅವನು ಎತ್ತೋ ಅವುಗಳನ್ನು ತೆಕ್ಕೊಂಡು ಹೊರಟು ಹೋದನು. ಮನೆಯಲ್ಲಿ ಕಕ್ಕನಿಗೆ ಏನು ಉತ್ತರ ಹೇಳುವಿ? ಎಂದು ಅವನ ಸೋಟಿತಿವಿದು ಸಿಟ್ಟು ಮಾಡತೊಡಗಿದನು. ಅದನ್ನು ಕೇಳಿ ಆ ಚಿಕ್ಕ ಬ್ರಾಹ್ಮಣನೂ ಆ ಹುಚ್ಚನಿಗೆ ಯಾಕೆ ಪಾದರಕ್ಷೆಗಳನ್ನು ಕೊಟ್ಟನೆಂದು ಮನಸ್ಸಿನಲ್ಲಿ ವಿಷಾದಪಡತೊಡಗಿದನು. ಚಿಕ್ಕತನದಲ್ಲಿ ಮನುಷ್ಯನ ಮನಸ್ಸು ಕೋಮಲವಾಗಿರುತ್ತದೆ; ಯಾರಾದರೂ ಅಂತಃಕರಣ ಬರುವ ಹಾಗೆ ಮಾತನಾಡಿದರೆ ಅವರ ಮನಸ್ಸು ದ್ರವಿಸುತ್ತದೆ. ಮುಂದೆ ಹಿರಿಯರು ಸಿಟ್ಟು ಮಾಡಿದಾಗ ಅದೇ ಮನಸ್ಸು ಕಠೋರವಾಗಿ ವಿಪರೀತ ಪರಿತಾಪವನ್ನು ಅನುಭವಿಸಲಾರಂಭಿಸುತ್ತದೆ. ಅದರಂತೆ ಪ್ರಸ್ತುತದಲ್ಲಿ ಆ ಬ್ರಾಹ್ಮಣ ತರುಣನು ಪರಿತಾಪಕ್ಕೆ ಗುರಿಯಾಗಿರಲು, ಅವನ ಮನದಳವನ್ನು ತಿಳಿದು, ಓಡಿ ಹೋಗುತ್ತಿದ್ದ ಮಹಾರಾಜರು ಹಿಂದಿರುಗಿದರು; ಮತ್ತು ಪುನಃ ಓಡುತ್ತ ಬ್ರಾಹ್ಮಣದ್ವಯರ ಬಳಿಗೆ ಬಂದು—"ಬ್ರಾಹ್ಮಣಪುತ್ರರೇ, ನೀವು ನನಗೆ ಪಾದರಕ್ಷೆಗಳನ್ನು ಕೊಟ್ಟದ್ದಕ್ಕೆ ನಿಮ್ಮ ಕಕ್ಕನು ನಿಮಗೆ ಬಯ್ಯುವನೇ? ಹಾಗೆ ಯಾಕೆ ಬೈಸಿಕೊಳ್ಳುವಿರಿ? ತಕ್ಕೊಳ್ಳಿರಿ ನಿಮ್ಮ ಪಾದರಕ್ಷೆಗಳನ್ನು" ಎಂದು ಅವನ್ನು ಅವರ ಮುಂದೆ ಚಲ್ಲಿಕೊಟ್ಟವನೇ ಎತ್ತೋ ಓಡಿಹೋದನು. ಈ ಹುಚ್ಚನು ಇಲ್ಲಿಯೇ ಸಮೀಪದಲ್ಲಿ ಅಡಗಿಕೊಂಡು ಕುಳಿತಿದ್ದು, ನಮ್ಮ ಮಾತು ಕೇಳಿ ಪಾದರಕ್ಷೆಗಳನ್ನು ತಿರುಗಿಕೊಟ್ಟನೆಂದು ಅವರು ಸುಮ್ಮನಾದರು.

ಮುಂದೆ ಕೆಲಹೊತ್ತಿನ ಮೇಲೆ ಮಹಾರಾಜರು ಓಡಿಹೋಗಿದ್ದ ದಾರಿಯಿಂದ ಕೆಲಜನ ಪ್ರಯಾಣಿಕರು ಬಂದರು. ಅವರು ಬಹಳ ಕಳವಳಗೊಂಡದ್ದರಿಂದ ಈ ಬ್ರಾಹ್ಮಣದ್ವಯರ ಹತ್ತರ ಬಂದು ಕುಳಿತು ಸಹಜವಾಗಿ ಅವರನ್ನು ಕುರಿತು—ಏನಿರಯ್ಯಾ, ಕೆಲಹೊತ್ತಿನ ಮುಂಚೆ ನಮ್ಮೆದುರಿಗೆ ಒಬ್ಬ ಹುಚ್ಚನು ಓಡುತ್ತ ಬಂದನು. ಅವನು ಅರ್ಧಹಾದಿಯಲ್ಲಿನ ವರೆಗೆ ಬಂದು, ತಟ್ಟನೆ ಅಲ್ಲಿಂದಲೇ

ತಿರುಗಿ ಪುನಃ ನೀವು ಕುಳಿತದಿಕ್ಕಿಗೆ ಓಡಿಬಂದನು. ಅವನು ಹುಚ್ಚನೇ ಇರಬಹುದಾಗಿ ತೋರಿತು. ಅವನು ನಿಮ್ಮ ಮುಂದೆಯೇ ಹಾಯ್ದುಹೋದನೇನು? ಎಂದು ಕೇಳಿದರು. ಅವರ ಈ ಪ್ರಶ್ನೆಯನ್ನು ಕೇಳಿ, ಆ ಬ್ರಾಹ್ಮಣಪುತ್ರರಿಗೆ ದಿಗಿಲು ಬಿದ್ದಿತು. ಆ ಹುಚ್ಚನ ವಿಷಯವಾಗಿ ಅವರಲ್ಲಿ ಸಂಶಯವುತ್ಪನ್ನವಾಯಿತು. ತಮ್ಮಿಂದ ಬಹುದೂರ ಓಡಿಹೋದ ಆ ಹುಚ್ಚನು ತಾವು ಮಾತಾಡಿದ್ದನ್ನು ಅಕ್ಷರಶಹಃ ಹೇಳಿದ್ದರಿಂದ ಅವನು ಹುಚ್ಚನಾಗಿರಲಿಕ್ಕಿಲ್ಲೆಂಬ ಬಲವಾದ ಸಂಶಯವು ಅವರನ್ನು ಬಾಧಿಸಿತು. ಈ ಸಂಗತಿಯನ್ನು ಅವರು ಆ ಪ್ರಯಾಣಿಕರಿಗೆ ತಿಳಿಸಿದರು. ಅವರಿಗೂ ಈ ಸಂಗತಿಯ ಶ್ರವಣದಿಂದ ತುಂಬಾ ಆಶ್ಚರ್ಯವಾಯಿತು. ಅವರೆಲ್ಲರೂ ಬಹಳವಾಗಿ ವಿಚಾರಿಸಿ, ಇಂಥ ವಿಲಕ್ಷಣ ಮಹಾಪುರುಷನು ಬೇರೆ ಯಾರೂ ಆಗಿರದೆ ಮಂಗಳವೇಢೆಯ ಸಾಧುಗಳಾಗಿರಬಹುದೆಂದು ನಿಶ್ಚಯಿಸಿದರು. ಬಳಿಕ ಅವರಿಗೆ ಆ ಸಾಧುವರ್ಯರ ದರ್ಶನ ತಕ್ಕೊಳ್ಳಬೇಕೆಂಬ ಲವಲವಿಕೆಯು ಹೆಚ್ಚಿತು. ಆ ಬ್ರಾಹ್ಮಣದ್ವಯರಿಗೂ ಪಶ್ಚಾತ್ತಾಪವಾಗಿ ಅವರೂ ಮಂಗಳವೇಢೆಗೆ ಹೊರಟರು. ಆದರೆ ಮಹಾರಾಜರು ಅಲ್ಲಿ ಇದ್ದರಷ್ಟೇ, ಅವರಿಗೆ ಭೆಟ್ಟಿಯಾಗುವದು! ಅವರು ಊರ ತುಂಬಾ ಹುಡುಕಿದರು. ಜನರನ್ನು ಕೇಳಿದರು. ಏನಾದರೂ ಮಹಾರಾಜರ ದರುಶನವಾಗಲಿಲ್ಲ. ಮಂಗಳವೇಢೆಯ ನಿವಾಸಿಗಳಿಗಾದರೂ ಮಹಾರಾಜರು ತಮ್ಮ ಗ್ರಾಮವನ್ನು ಬಿಟ್ಟದ್ದನ್ನು ಕೇಳಿ, ತುಂಬಾ ಅಸಮಾಧಾನವಾಯಿತು. ಆದರೆ ಅವರು ಎಲ್ಲಿಗೆ ಹೋದರೆಂಬದನ್ನು ತಿಳಿಯಲಾರದೆ ಆ ಊರ ಜನರು ಬಹಳವಾಗಿ ಮಿಡಿಕಿದರು.

ಈ ನೀರೆಗೆ ಮಹಾರಾಜರು ಯಾರಿಗೂ ಸುದ್ದೀ ಹಚ್ಚದಂತೆ ಮಂಗಳವೇಢೆಯನ್ನು ಬಿಟ್ಟು ನೆಟ್ಟಗೆ ಅಕ್ಕಲಕೋಟೆಗೆ ಬಂದರು. ಆಗ ಶಾಲಿವಾಹನ ಶಕೆ ೧೭೭೮ ನೆ ಭಾದ್ರಪದಮಾಸವು ನಡೆಯುತ್ತಿತ್ತು. ಮೊಟ್ಟಮೊದಲು ಮಹಾರಾಜರು ಅಕ್ಕಲಕೋಟೆಯ ಅಡವಿಯಲ್ಲಿ ವಾಸಮಾಡಿದರು. ಅವರು ಗ್ರಾಮವನ್ನು ಪ್ರವೇಶಿಸುವದಕ್ಕೆ ಕಾಲ ನಿರೀಕ್ಷಣೆ ಮಾಡುವವರ ಹಾಗೆ ಆಗ ವರ್ತಿಸುತ್ತಿದ್ದರು. ಈ ಬಗ್ಗೆ ಒಂದು ಆಖ್ಯಾಯಿಕೆಯುಂಟು, ಅದೇನಂದರೆ—ಯಾವ ಅಡವಿಯಲ್ಲಿ ಮಹಾರಾಜರು ವಾಸಮಾಡಿದ್ದರೋ ಆ ಅಡವಿಯಲ್ಲಿ ಕುರಿಗಳನ್ನು ಮೇಸುವದಕ್ಕೆ ಒಬ್ಬ ಕುರುಬರ ಹುಡುಗನು ದಿನಾಲೂ ಹೋಗುತ್ತಿದ್ದನು. ಹುಡುಗನು ಚಿಕ್ಕವನಿದ್ದನು. ಅವನಿಗೆ ದಿನಾಲು ಮಹಾರಾಜರು ದರ್ಶನಕೊಟ್ಟು—"ತಮ್ಮಾ, ನಿನ್ನ ಊರಿಗೆ ಬರಲಿಯಾ?" ಎಂದು ಕೇಳುತ್ತಿದ್ದರು. ಆದರೆ ಅವರಿಗೆ ಉತ್ತರವನ್ನು

ಕೊಡುವದಕ್ಕೆ ಆ ಕುರುಬ ಬಾಲಕನಿಗೆ ಬುದ್ಧಿ ಸಾಲುತ್ತಿದ್ದಿಲ್ಲ. ಅವರು ಕೇಳಿದಾಗೆಲ್ಲ ಅವನು ಸುಮ್ಮನಿರುತ್ತಿದ್ದನು. ಹೀಗೆ ಕೆಲವು ದಿವಸಗಳ ವರೆಗೆ ನಡೆಯಲು, ಒಂದು ದಿನ ಆ ಕುರುಬರ ಹುಡುಗನು ಸಂಜೆಗೆ ಮನೆಗೆ ಬಂದಬಳಿಕ ಈ ಸಂಗತಿಯನ್ನು ತಮ್ಮ ತಂದೆಗೆ ತಿಳಿಸಿದನು. ಆಗ ಅವನ ತಂದೆಯು—''ಮಗನೇ ಅವರು ಹೀಗೆ ಕೇಳಿದರೆ ಇನ್ನುಮೇಲೆ ಸುಮ್ಮನಿರಬೇಡ; ಬಾ, ಎಂದು ಕರೆ'' ಎಂದು ಹೇಳಿಕೊಟ್ಟನು. ಮರುದಿನ ಆ ಕುರುಬ ಕುವರನು ಕುರಿಗಳನ್ನು ಅಟ್ಟಿಕೊಂಡು ಅಡವಿಗೆ ನಡೆದನು. ಎಂದಿನಂತೆ ಮಹಾರಾಜರು ಅವನ ಬಳಿಗೆ ಬಂದು "ತಮ್ಮಾ, ಊರಿಗೆ ಬರಲಿಯಾ?'' ಎಂದು ಪ್ರಶ್ನೆ ಮಾಡಿದರು. ಕೂಡಲೆ ಆ ಹುಡುಗನು—ಯಾರು ಬೇಡೆನ್ನುವರು? ಬಾ, ಎಂದು ಕಟ್ಟನೆ ನುಡಿದು ಸುಮ್ಮನಾದನು. ಆ ಹುಡುಗನ ಮುಖದಿಂದ ಹೊರಟ ಈ ಶಬ್ದಗಳನ್ನು ಕೇಳಿ ಮಹಾರಾಜರಿಗೆ ಸಂತೋಷವೆನಿಸಿತು. ಅವರು ಆ ಕ್ಷಣದಲ್ಲಿಯೇ ಅಕ್ಕಲಕೋಟಿ ಗ್ರಾಮವನ್ನು ಪ್ರವೇಶಿಸಿದರು. ಆ ಗ್ರಾಮದಲ್ಲಿ ತಮ್ಮ ಭಕ್ತರಾರು, ತಮ್ಮ ಸೇವೆಗೆ ಯಾರು ಯೋಗ್ಯರು? ಎಂಬ ಸಂಗತಿಗಳನ್ನು ಅವರು ಮೊದಲೇ ತಮ್ಮ ದಿವ್ಯಜ್ಞಾನದಿಂದ ಗೊತ್ತುಪಡಿಸಿಕೊಂಡಿದ್ದರು. ಗಣಪತಿಜೋಯಿಸರೆಂಬವರು ಸದ್ವೃತ್ತಿಯಲ್ಲಿ ಹೆಸರಾಗಿದ್ದರು. ಪರನಾರಿ ಪರದ್ರವ್ಯಗಳನ್ನು ಅವರು ನರಕವೆಂದು ತಿಳಿಯುತ್ತಿದ್ದರು. ಸದ್ಭಕ್ತರಿಗೆ ಒಪ್ಪಬಹುದಾದ ಸದ್ಗುಣಗಳು ಅವರಲ್ಲಿ ಸಂಪೂರ್ಣವಾಗಿ ನೆಲೆಗೊಂಡಿದ್ದವು. ಅವರು ತಮ್ಮ ಕರ್ತವ್ಯವೆಂದು ಹೆಂಡಿರು-ಮಕ್ಕಳ ಸಂಗೋಪನವನ್ನು ಮಾಡುತ್ತಿದ್ದರೇ ಹೊರತು ಮೋಹಾಸಕ್ತರಾಗಿ, ಅಂದರೆ ಪತ್ನೀಪುತ್ರಾದಿಗಳು ಶಾಶ್ವತವೆಂದು ನಂಬಿ ಸಂಸಾರವ ಮಾಡುತ್ತಿರಲಿಲ್ಲ. ಅವರಿಗೆ ಪೂರ್ವಸುಕೃತದಿಂದ ಮನೆಯಲ್ಲಿ ಧನಧಾನ್ಯಾದಿಗಳು ಸಮೃದ್ಧವಾಗಿದ್ದವು. ಆದರೆ ಅವರ ಈ ಸದ್ವೃತ್ತಿಗೆ ಮಂಗಲಸೂತ್ರ ರೂಪವಾಗಿ ಸದ್ಗುರುವು ಮಾತ್ರ ಅವರಿಗೆ ಸಿಕ್ಕಿದ್ದಿಲ್ಲ. ಅದರಿಂದ ಅವರು ಮನಸ್ಸಿನಲ್ಲಿ ಸರ್ವದಾ ಖೇದಗೊಳ್ಳುತ್ತಿದ್ದರು. ಆದರೆ ಇವರ ಮನದಳವನ್ನು ತಿಳಿದೋ ಎಂಬಂತೆ ಮಹಾರಾಜರು ಮೇಲೆ ಹೇಳಿದಂತೆ ಪುರಪ್ರವೇಶ ಮಾಡಿದ

ಕೂಡಲೆ ಗಣಪತಿ ಜೋಯಿಸನ ಮನೆಯನ್ನು ಹೊಕ್ಕರು.

ಮನೆಗೆ ಬಂದವರನ್ನು ಆದರಿಸುವದು ಗಣಪತಿ ಜೋಯಿಸನ ಹುಟ್ಟುಗುಣವಾಗಿತ್ತು. ಆದ್ದರಿಂದ ಅವನು ಮಹಾರಾಜರನ್ನು ಸತ್ಕರಿಸಿದನು. ಮೊದಲು ಆತನು ಮಹಾರಾಜರನ್ನು ಸಾಮಾನ್ಯ ಮನುಷ್ಯರೆಂದು ಭಾವಿಸಿದನು. ಆದರೆ ಒಂದೆರಡು ದಿವಸಗಳು ಕಳೆಯಲು ಅವರ ದಿವ್ಯತೇಜಸ್ಸನ್ನು ನೋಡಿ ಆತನಿಗೆ ಪಶ್ಚಾತ್ತಾಪವುಂಟಾ

ಯಿತು. ಮನೆಗೆ ಕಾಮಧೇನುವು ಬಂದಾಗ ಗೊಡ್ಡಾಕಳವೆಂದು ತಿಳಿದಂತೆಯೂ, ನಿರ್ಭಾಗ್ಯನು ಅಡ್ಡಬಂದ ನಿಧಿಯನ್ನು ದಾಟುತ್ತ ಹೋದಂತೆಯೂ ತನ್ನಸ್ಥಿತಿಯಾಯಿತೆಂದು ಅವನು ಕಳವಳಿಸಿದನು. ಈಗ ಮನೆಗೆ ಬಂದ ಅತಿಥಿಯು ಸಾಮಾನ್ಯನಿರದೆ ಇವನೇ ತನ್ನ ಮೋಕ್ಷಗುರುವು ಇರುವನೆಂದು ತಿಳಿದನು. ಇಷ್ಟುಪಶ್ಚಾತ್ತಾಪ ಹುಟ್ಟಿದ್ದೊಂದೇತಡ; ಗಣಪತಿಯು ಮಹಾರಾಜರ ಚರಣಗಳನ್ನು ಗಟ್ಟಿಯಾಗಿ ಹಿಡಿದು ಕಣ್ಣುತುಂಬಾ ನೀರುತಂದನು. ಆಗ ಅವನ ಕಂಠವು ಬಿಗಿದು ಬಂದಿತ್ತು; ಮೈಮೇಲೆ ರೋಮಾಂಚಗಳು ಎದ್ದಿದ್ದವು. ಮಾತಾಡಹೋಗಲು ನಾಲಿಗೆಯು ತೊದಲಿಸುತ್ತಿತ್ತು. ಈ ಪ್ರಕಾರ ಅವನ ಸ್ಥಿತಿಯಾಗಿರಲು, ಮಹಾರಾಜರಿಗೆ ಅಂತಃಕರುಣವುಂಟಾಯಿತು. ಆಗ ಅವರು ಮೌನವನ್ನು ಬಿಸುಟಿ—ವತ್ಸಾ, ಏಳು; ನಿನ್ನನ್ನು ಉದ್ಧರಿಸುವದಕ್ಕಾಗಿಯೇ ನಿನ್ನನ್ನು ಹುಡಕುತ್ತ ನಿನ್ನ ಬಳಿಗೆ ಬಂದಿರುವೆನು. ಈಗ ನಾನು ಯಾರಿರುವೆನು ನೋಡು, ಎಂದು ನುಡಿಯಲು, ಗಣಪತಿಯು ದುಃಖವನ್ನು ಸಮಾಧಾನ ಮಾಡಿಕೊಂಡು ಮೇಲಕ್ಕೆ ಮೋರೆಯನ್ನೆತ್ತಿ ನೋಡಿದನು. ಆಗ ಅವನಿಗೆ ಒಂದು ಅದ್ಭುತ ಸಂಗತಿಯು ಗೋಚರಿಸಿತು. ಮಹಾರಾಜರ ಸ್ಥಳದಲ್ಲಿ ಪ್ರಶಾಂತವಾದ ದತ್ತಾವಧೂತ ಮೂರ್ತಿಯು ವಿರಾಜಮಾನವಾಗಿತ್ತು. ಆ ಮೂರ್ತಿಯ ಪ್ರಸನ್ನಮುಖವು ಭಕ್ತರ ತಾಪತ್ರಯಗಳನ್ನು ಪರಿಹರಿಸುತ್ತಿತ್ತು. ಶುಭ್ರಭಸ್ಮ-ರುದ್ರಾಕ್ಷಿಗಳ ಮಾಲಿಗಳು ಆ ಮೂರ್ತಿಯ ದಿವ್ಯತೇಜಸ್ಸನ್ನುಹೆಚ್ಚಿಸುತ್ತಿದ್ದವು. ಅನಸೂಯಾಮಾತೆಯ ಪುಣ್ಯಪ್ರಭಾವದಿಂದ ಒಟ್ಟುಗೂಡಿದ ತ್ರೈಮೂರ್ತಿಗಳ ಸತ್ವವೇ ಈ ಮೂರ್ತಿಯಾಗಿರಬಹುದೆಂದು ಒಡನೆಯೇ ಹೇಳಬಹುದಾಗಿತ್ತು. ಗಣಪತಿಯು ಒಮ್ಮೆಮಾತ್ರ ಆ ಸುಂದರ ಮೂರ್ತಿಯನ್ನು ಕಣ್ಣುತುಂಬ ನೋಡಿದನು. ಅಷ್ಟಕ್ಕೆ ಅವನು ತೃಪ್ತನಾಗದೆ, ಚನ್ನಾಗಿ ಮೇಲಕ್ಕೆದ್ದು ನೋಡಬೇಕೆಂದು ಏಳುವದಕ್ಕಾಗಿ ಮುಖವನ್ನು ಕೆಳಗೆ ಮಾಡಲು, ಆ ದಿವ್ಯಮೂರ್ತಿಯು ಅದೃಶ್ಯವಾಯಿತು. ಗಣಪತಿಯು ಚಟುವಟಿಕೆಯಿಂದ ಮೇಲಕ್ಕೆದ್ದು ನೋಡುವಷ್ಟರಲ್ಲಿ ಮಹಾರಾಜರ ಮಾನುಷರೂಪವು ಕಣ್ಣಿಗೆಬಿತ್ತು. ಆಗ ಅವನು ಭ್ರಾಂತನಂತೆ ನೋಡುತ್ತಿರಲು ಮಹಾರಾಜರು—ವತ್ಸಾ, ಯಾಕೆ ಇನ್ನೂ ನಿದ್ದೆಗಣ್ಣಿನಲ್ಲಿರುವಿಯೇನು? ಏನಾದರೂ ಸ್ವಪ್ನಗಿಪ್ನವು ನಿನಗೆ ಬಿದ್ದಿಲ್ಲವಷ್ಟೇ? ಎಂದು ಪರಿಹಾಸ ಮಾಡಿದರು. ಅವರ ಪರಿಹಾಸದಿಂದ ಆತನು ಎಚ್ಚತ್ತನು. ತನ್ನ ಗುರುವು ತನ್ನ ಸಂಶಯವನ್ನು ಛೇದಿಸುವದಕ್ಕಾಗಿ ಹೀಗೆ ದಿವ್ಯರೂಪವನ್ನು ತೋರಿಸಿದನೆಂದು ಅವನಿಗೆ ನಂಬಿಗೆಯುಂಟಾಯಿತು.

ಬಳಿಕ ಮಹಾರಾಜರು ಗಣಪತಿಯನ್ನು ಕುಳ್ಳಿರಿಸಿಕೊಂಡು ಅವನಿಗೆ

ಜ್ಞಾನೋಪದೇಶವನ್ನು ಮಾಡಿದರು. ಯಾರ ಕೈಗೂ ಸಿಕ್ಕದ ಈ ಪರಬ್ರಹ್ಮ ಮೂರ್ತಿಯು ಯಾವ ಸುಕೃತದಿಂದಲೋ ತನಗೆ ಸಿಕ್ಕಿತೆಂದು ಗಣಪತಿಯು ನಲಿದಾಡತೊಡಗಿದನು. ಅವನ ಮನೆಯಲ್ಲಿಯೇ ಮಹಾರಾಜರು ಗುಪ್ತವಾಗಿ ವಾಸಿಸಿದರು.

ಕೆಲವು ದಿನಗಳು ಕಳೆದ ಬಳಿಕ ಹೀಗೆ ತಮ್ಮ ಭಕ್ತರಿಂದ ಕದ್ದಿರುವದು ಮಹಾರಾಜರಿಗೆ ಬೇಸರಿಟ್ಟಿತು. ಈ ಅವತಾರದಲ್ಲಿ ಅವರಿಗೆ ಇದುವರೆಗೆ ಯಾರೂ ಭಕ್ತರಾಗದಿದ್ದರೂ ಅವರ ಪೂರ್ವಾವತಾರದ ಭಕ್ತರು ಮುಂದುಗಾಣದೆ ಹಂಬಲಿಸುತ್ತಿದ್ದರು. ಅಂಥವರಿಗೆ ದರ್ಶನಕೊಟ್ಟು ಅವರನ್ನು ತೃಪ್ತಪಡಿಸುವದು ಮಹಾರಾಜರಿಗೆ ಅವಶ್ಯವಿತ್ತು. ಆದ್ದರಿಂದ ಅವರು ತಮ್ಮ ಗೌಪ್ಯವನ್ನು ಶಿಥಿಲಗೊಳಿಸಬೇಕಾಯಿತು.

ಆ ಕಾಲದಲ್ಲಿ ಅಕ್ಕಲಕೋಟೆಯಲ್ಲಿ ಮಹಾರಾಜರ ದರುಶನಕ್ಕೆ ಪಾತ್ರರಾಗುವ ಪಾತ್ರತೆಯುಳ್ಳವರು ಏಳು ಜನರಿದ್ದರು. ಅವರಲ್ಲಿ ಮೊದಲನೆಯವರಾದ ಗಣಪತಿಜೋಯಿಸರಿಗೆ ಈ ಮೊದಲೇ ದರ್ಶನಸುಖವು ಲಭಿಸಿತ್ತು. ಆದರೆ ಇನ್ನುಳಿದ ಆರು ಜನರಿಗೆ ದರ್ಶನಕೊಟ್ಟು ಅವರನ್ನು ಕೃತಾರ್ಥರನ್ನಾಗ ಮಾಡಬೇಕಾಗಿತ್ತು. ಅದಕ್ಕಾಗಿ ಮಹಾರಾಜರು ಪ್ರತಿನಿತ್ಯ ಒಬ್ಬೊಬ್ಬರ ಸ್ವಪ್ನದಲ್ಲಿ ಹೋಗಿ ತಾವಿದ್ದ ಸ್ಥಳವನ್ನೂ ತಮ್ಮ ದರುಶನಕ್ಕೆ ಉಚಿತ ಕಾಲವನ್ನೂ ಸೂಚಿಸುತ್ತಿದ್ದರು. ಅದರಂತೆ ಅವರು ಬೆಳಗಾದಮೇಲೆ ಸ್ವಪ್ನದ ಸಂಗತಿಯನ್ನು ಸ್ಮರಿಸಿ ಗಣಪತಿಜೋಯಿಸನ ಮನೆಗೆ ಬಂದು ಸ್ವಪ್ನದಲ್ಲಿ ಕಂಡ ಮೂರ್ತಿಯನ್ನೇ ಪ್ರತ್ಯಕ್ಷವಾಗಿ ಕಂಡು ಪರಮ ಸಂತೋಷವನ್ನು ತಾಳುತ್ತಿದ್ದರು. ಅವರು ಮಹಾರಾಜರನ್ನು ತಮ್ಮ ಭಾಗದ ಸ್ವಾಮಿಯೆಂತಲೇ ದೃಢವಾಗಿ ನಂಬಿದರು. ಹೀಗೆ ಆರು ದಿನಗಳಲ್ಲಿ ಆರು ಜನ ಭಕ್ತರಿಗೆ ತಮ್ಮ ಮಹಿಮೆಯನ್ನು ತೋರಿಸಿ ಮಹಾರಾಜರು ಅವರನ್ನು ಸನ್ನಿಧಿಗೆ ಬರಮಾಡಿಕೊಂಡರು. ಈ ಏಳು ಜನ ಭಕ್ತರಿಂದ ಮಹಾರಾಜರ ಸಾಧುತ್ವವು ಮೆಲ್ಲಮೆಲ್ಲಗೆ ಹೊರಬೀಳತೊಡಗಿತು. ಇವರು ತಮ್ಮ ತಮ್ಮ ಮನೆಗಳಿಗೆ ಮಹಾರಾಜರನ್ನು ಕರೆದುಕೊಂಡು ಹೋಗುವದು, ಅವರನ್ನು ಷೋಡಶೋಪಚಾರಗಳಿಂದ ಪೂಜಿಸುವದು, ನಿರಂತರ ಅವರ ಸನ್ನಿಧಿಯಲ್ಲಿರುವದು ಜನರಿಗೆ ಗೊತ್ತಾಗತೊಡಗಿತು. ಗಣಪತಿಜೋಯಿಸರ ಮನೆಯಲ್ಲಿ ಯಾರೋ ಸಾಧುಗಳಿರುವರೆಂಬ ದಟ್ಟವಾರ್ತೆಯು ಜನರಲ್ಲಿ ಪಸರಿಸತೊಡಗಿತು. ಆದರೆ ಕಾಮನಾಪರರಾದ ಲೌಕಿಕರು ಮಹಾರಾಜರ ಅಮಾನುಷಕೃತ್ಯಗಳ ಸಮಾಚಿನವಾದ ಕಥೆಗಳು ಕಿವಿಗೆಬೀಳದ್ದರಿಂದ ಅವರ ದರುಶನಕ್ಕೆ ಮುಂದೊರೆಯಲು ಉದಾಸೀನತೆಯನ್ನು ತೋರಿಸಿದರು.

# ನಾಲ್ಕನೆಯ ಪ್ರಕರಣ.

## ಸಾಧುತ್ವ.

ಹಿಂದಿನ ಪ್ರಕರಣದಲ್ಲಿ ಹೇಳಿದಂತೆ ಮಹಾರಾಜರು ಗಣಪತಿ ಜೋಯಿಸನ ಮನೆಯಲ್ಲಿ ಮೂರು ತಿಂಗಳವರೆಗೆ ವಾಸಮಾಡಿ ಅನಂತರ ಚೋಳಪ್ಪನೆಂಬ ಭಾವಿಕನ ಮನೆಗೆ ಹೋದರು. ಚೋಳಪ್ಪನು ಜನ್ಮತಃ ದರಿದ್ರನು. ಆದರೆ ಮಹಾರಾಜರಲ್ಲಿ ಅತ್ಯಂತ ವಿಶ್ವಾಸವುಳ್ಳವನಾಗಿದ್ದನು. ಅವನನ್ನು ಅನುಗ್ರಹಿಸಬೇಕೆಂಬ ಇಚ್ಛೆಯು ಉಂಟಾದ್ದರಿಂದ ಮಹಾರಾಜರು ಅವನ ಮನೆಯಲ್ಲಿ ಸ್ಥಿರವಾಗಿ ನೆಲೆಸಿದರು. ಮಹಾರಾಜರು ಕಾಲಿಟ್ಟ ದಿವಸದಿಂದ ಚೋಳಪ್ಪನ ಲೌಕಿಕ ಅಭ್ಯುದಯಕ್ಕೆ ಆರಂಭವಾಯಿತು. ಅವನು ಮಣ್ಣು ಹಿಡಿದರೂ ಚಿನ್ನವಾಗಲಾರಂಭಿಸಿತು. ತುಸ ದಿವಸಗಳಲ್ಲಿ ಚೋಳಪ್ಪನು ಧನಿಕನೆಂದು ಹೆಸರಾದನು. ಕೈವಲ್ಯ ಪದವಿಯನ್ನೇ ಕೊಡಲು ಸಮರ್ಥರಾದ ಮಹಾರಾಜರು ಚೋಳಪ್ಪನಿಗೆ ಐಶ್ವರ್ಯವನ್ನು ಕೊಟ್ಟಿದ್ದರಲ್ಲಿ ಹೆಚ್ಚಿನ ಆಶ್ಚರ್ಯವೇನೂ ಇರದಿದ್ದರೂ ಸಜ್ಜನರು ಭಕ್ತಾಭಿಮಾನಿಗಳಿರುವರೆಂಬುದು ವ್ಯಕ್ತವಾಗುವದು. ಶ್ರೀ ಗುರುಚರಿತ್ರದಲ್ಲಿ ಶ್ರೀಪಾದಶ್ರೀವಲ್ಲಭಸ್ವಾಮಿಗಳು ಒಬ್ಬ ರಜಕಭಕ್ತನಿಗೆ ಅವನ ಇಚ್ಛೆಯಂತೆ ರಾಜ್ಯೈಶ್ವರ್ಯವನ್ನು ದಯಪಾಲಿಸಿದ ವರ್ಣನೆಯುಂಟು; ಅದರಂತೆ ಪ್ರಸ್ತುತದಲ್ಲಿ ಮಹಾರಾಜರು ಚೋಳಪ್ಪನಿಗೆ ಹಿಂದಿನ ಯಾವ ಜನ್ಮದ ಋಣಾನುಬಂಧದಿಂದಲೋ ಈ ಜನ್ಮದಲ್ಲಿ ಧನಸಂಪತ್ತನ್ನು ಒದಗಿಸಿಕೊಟ್ಟರು! ಜಡವೈಭವದಿಂದ ತೃಪ್ತರಾಗಿ, ಅದೇ ಸಜ್ಜನರ ಪರಮಾನುಗ್ರಹವೆಂದು ಭಾವಿಸುವದು ಮಂದಾಧಿಕಾರಿಗಳ ಲಕ್ಷಣವಾದ್ದರಿಂದ ಚೋಳಪ್ಪನು ಇಂಥ ಮಂದಾಧಿಕಾರಿ ಭಕ್ತನೆಂದೇ ಹೇಳಬೇಕಾಗುತ್ತದೆ. ಬಹುತರ ಯಾವ ಸಜ್ಜನರ ಕಾಲಕಿರ್ದಿಯಲ್ಲಾದರೂ ಮಂದಾಧಿಕಾರಿಗಳ ಸಂಖ್ಯೆಯೇ ಹೆಚ್ಚಿರುತ್ತದೆ. ಇವರೇ ಮುಂದೆ ಕ್ರಮೇಣ ಜನ್ಮ-ಜನ್ಮಾಂತರಗಳಲ್ಲಿ ವೈರಾಗ್ಯ ಪರಿಪೂರ್ಣತೆಯಿಂದ ಜ್ಞಾನಾಧಿಕಾರಿಗಳಾಗಿ ಪರಿಣಮಿಸಬೇಕಾದ್ದರಿಂದ ಸಜ್ಜನರಿಗಿರುವ ಈ ಮಂದಾಧಿಕಾರೀ ಭಕ್ತವರ್ಗವು ಗೌಣವೆಂದು ಹೇಳುವ ಹಾಗಿಲ್ಲ. ಇವರನ್ನು ಒಂದು ಬಗೆಯಿಂದ ಮೋಕ್ಷೇಚ್ಛೆಯ ಭಾವೀ ಪೀಳಿಗೆಯೆಂದು ಕರೆಯಬಹುದು.

ಮಹಾರಾಜರು ಚೋಳಪ್ಪನ ಮನೆಗೆ ಬಂದ ಕೆಲವು ವರುಷಗಳಲ್ಲಿ ಶ್ರೀ ಮಾಣಿಕಪ್ರಭುಗಳು ದೇಹವಿಟ್ಟರು. ಅವರಿರುವವರೆಗೆ ಹೆಚ್ಚಾಗಿ ಲೋಕದಲ್ಲಿ ಪ್ರಕಟವಾಗಬಾರದೆಂದು ಮಹಾರಾಜರ ಸಂಕಲ್ಪವಿತ್ತೋ ಹ್ಯಾಗೆಂಬದು ತಿಳಿಯದು! ಪ್ರಭುಗಳು ಬ್ರಹ್ಮೈಕ್ಯರಾದದ್ದೊಂದೇ ತಡ; ಮಹಾರಾಜರು, ತಮ್ಮ ದೈವೀ ತೇಜಸ್ಸನ್ನು ಬೈಲಿಗಿಟ್ಟರು, ಪ್ರತಿನಿತ್ಯದಲ್ಲಿ ಹೊಸಹೊಸ ಮಹಿಮೆಗಳು ಜನರ ನಿದರ್ಶನಕ್ಕೆ ಬರಹತ್ತಿದವು. ಮಹಾರಾಜರಲ್ಲೇನು ಅಲೌಕಿಕ ಸಾಮರ್ಥ್ಯವಿರುತ್ತದೆ? ಎಂದು ನಿರೀಕ್ಷಿಸುತ್ತ ದೂರ ನಿಂತಿದ್ದ ಕಾಮುಕರು ಅವರನ್ನು ಮುತ್ತಕೊಡಗಿದರು. ಮಹಾರಾಜರು ಅಕ್ಕಲಕೋಟೆಗೆ ಬಂದ ಆರೇಳು ವರುಷಗಳಾದರೂ ಇಂದಿನವರೆಗೆ ಯಾವ ಕಾಮುಕಭಕ್ತನೂ ಅವರ ಬಳಿಗೆ ಸುಳಿದಿದ್ದಿಲ್ಲ. ಏಳುಜನ ಭಕ್ತರ ಹೊರತು ಉಳಿದವರು ಮಹಾರಾಜರನ್ನು ಹುಚ್ಚರೆಂತಲೇ ಸಂಬೋಧಿಸುತ್ತಿದ್ದರು. ಯಾರು ಮಹಾರಾಜರಿಗೆ ಹುಚ್ಚರೆಂದು ನಿಂದಿಸುತ್ತಿದ್ದರೋ ಅವರೇ ಈಗ ಪರಮದಾಸರಾಗಿ ಸೇವೆಯನ್ನು ಮಾಡತೊಡಗಿದರು. ದೈವೀಸಾಮರ್ಥ್ಯದ ಮುಂದೆ ಯಾರ ಆಟ ನಡೆಯುವುದು?

ಅಕ್ಕಲಕೋಟೆಯು ಒಂದು ಸಣ್ಣ ಸಂಸ್ಥಾನವಿದ್ದು ಅಲ್ಲಿ ಶ್ರೀಮಂತ ಮಾಲೋಜಿರಾಯನೆಂಬುವನು ಸಂಸ್ಥಾನಿಕನಾಗಿದ್ದನು. ಮಾಲೋಜಿರಾಯನು ಮಹಾರಾಜರ ಅದ್ಭುತ ಚಮತ್ಕಾರಗಳನ್ನು ಕೇಳಿಯೂ, ಪ್ರತ್ಯಕ್ಷ ನೋಡಿಯೂ ದಂಗಾಗಿ ಹೋದನು. ಆತನು ಮಹಾರಾಜರನ್ನು ತಮ್ಮ ಅರಮನೆಯಲ್ಲಿಟ್ಟುಕೊಳ್ಳಬೇಕೆಂದು ಬಹುವಿಧವಾಗಿ ಹಾತೊರೆದನು. ಆದರೆ ಮಹಾರಾಜರು ಚೋಳಪ್ಪನ ಮನೆಯಿಂದ ಕದಲಲಿಲ್ಲ. ಆದ್ದರಿಂದ ನಿರುಪಾಯನಾಗಿ, ಆತನು ಪ್ರತಿನಿತ್ಯ ಮಹಾರಾಜರೆಡೆಗೆ ಸಿಧಾ-ಸಾಮಗ್ರಿಗಳನ್ನು ಕಳಿಸಲುಪಕ್ರಮಿಸಿದನು.

ಸಕ್ಕರೆಯಿದ್ದಲ್ಲಿ ಇರುವೆಗಳು ಹರಿದು ಬರುವಂತೆ ದೈವೀ ಚಮತ್ಕಾರಗಳಿದ್ದಲ್ಲಿ ಜನರು ಹಿಂಡುಗಟ್ಟಿ ಹೋಗುವರು. ಇದಕ್ಕೆ ದೊಡ್ಡವರು ಒಂದು ಉದಾಹರಣೆಯನ್ನು ಹೇಳುವರು. ಅದೇನಂದರೆ—ಒಬ್ಬ ಮಹಾನ್ ಸಾಧುಗಳು ಶಿಷ್ಯನೊಡನೆ ಸಂಚಾರಕ್ಕಾಗಿ ಹೊರಟಿದ್ದರು. ಅವರು ಒಂದು ದಿನ ಮಧ್ಯಾಹ್ನದಲ್ಲಿ ಒಂದು ಹಳ್ಳಿಯಲ್ಲಿ ಇಳಿದುಕೊಂಡರು; ಆ ಊರ ಜನರು ದಾನ-ಧರ್ಮ ಮಾಡುವಲ್ಲಿ 'ದಾನ' ಎಂಬ ಶಬ್ದದೊಳಗಿನ ಪೂರ್ವಾಕ್ಷರವನ್ನು ಕಾವಿಟ್ಟುಕೊಂಡು ಉತ್ತರಾಕ್ಷರವನ್ನೇ ಬಹು ಭಕ್ತಿಯಿಂದ ಉಪಯೋಗಿಸುತ್ತಿದ್ದರೆಂದು ಹೇಳಲಾಗುವದು. ಇದರಿಂದ ಅವರ ಕೀರ್ತಿಯು ದಿಗಂತಗಳನ್ನೂ ವ್ಯಾಪಿಸಿತ್ತು. ಇಂಥ ಊರಿಗೆ

ಅಪರೂಪದಹಾಗೆ ಸಾಧುಗಳು ಮಧ್ಯಾಹ್ನದ ಹೊತ್ತಿಗೆ ಹೋದರು. ಸಾಧುಗಳು ಸ್ನಾನಮಾಡಿ ಆಹ್ನಿಕಕ್ಕೆ ಕುಳಿತರು. ಶಿಷ್ಯನು ಮಧುಕರಿ ಬೇಡಿ ತರಬೇಕೆಂದು ಸ್ನಾನಮಾಡಿ ಶುಚಿರ್ಭೂತನಾಗಿ ಭಸ್ಮ-ರುದ್ರಾಕ್ಷಿಗಳು ದೇಹದ ಪವಿತ್ರತೆಯನ್ನು ಹೆಚ್ಚಿಸುತ್ತಿರಲು ಜೋಳಿಗೆಯನ್ನು ಮುಂದು ಮಾಡಿಕೊಂಡು ಊರಲ್ಲಿ ಹೋದನು. ಆದರೆ ಕಲಿಪುರುಷನ ಪ್ರತ್ಯಕ್ಷ ಅವತಾರವೇ ಆಗಿದ್ದ ಆ ಊರ ಬ್ರಾಹ್ಮಣರು ಅವನಿಗೆ ಹಿಡಿ ಅನ್ನವನ್ನು ಹಾಕಿದರಷ್ಟೇ? ಎಲ್ಲರೂ ಬಾಗಿಲ ಹಾಕಿಕೊಂಡು ಬಿಟ್ಟರು. ಶಿಷ್ಯನು ಚಿಂತೆಗೊಳಗಾದನು. ಬಳಿಕ ಅವನು ಮಧುಕರಿಯ ಉಸಾಬರಿಯನ್ನು ಬಿಟ್ಟು ರೈತರಾದರೂ ಹಿಟ್ಟು ಅಕ್ಕಿಗಳನ್ನು ನೀಡುವರೇನೆಂದು ನೋಡಿದನು, ಅದೂ ವ್ಯರ್ಥವಾಯಿತು. ತಾಸೆರಡು ತಾಸುಗಳವರೆಗೆ ತಿರುಗಿದರೂ ಅವನ ಜೋಳಿಗೆಯಲ್ಲಿ ಒಂದು ಒಡಕಕಾಳು ಸಹ ಬೀಳದಾಯಿತು. ಆಗ ಆ ಶಿಷ್ಯನು ಆ ಗ್ರಾಮವಾಸಿಗಳ ಧರ್ಮಬುದ್ಧಿಗೆ ತಲೆದೂಗಿ ಮನದಲ್ಲಿ ವಿಚಾರಮಾಡಿದನೇನಂದರೆ:—"ಮಧ್ಯಾಹ್ನವಾಗಿಹೋಯಿತು. ಗುರುಗಳು ಹಸಿದಿರುವರು. ಬೇರೊಂದು ಊರಿಗೆ ಹೋಗಿ ಮಧುಕರಿ ತರಬೇಕೆಂದರೆ ಸನಿಯಕ್ಕೆ ಗ್ರಾಮಗಳಿಲ್ಲ. ಆದ್ದರಿಂದ ಏನಾದರೊಂದು ಆಟ ಹೂಡಿ ಇಲ್ಲಿಯೇ ಭಿಕ್ಷೆಯನ್ನೆತ್ತಬೇಕು."

ಈ ಮೇರೆಗೆ ಆಲೋಚಿಸಿ, ಆ ಶಿಷ್ಯನು ಒಂದು ಹಗ್ಗವನ್ನು ತಕ್ಕೊಂಡು ಗುರುನಾಮವನ್ನುಚ್ಚರಿಸಿ ಮೇಲಕ್ಕೆ ತೂರಿದನು. ಗುರುನಾಮಪ್ರಭಾವದಿಂದ ಆ ಹಗ್ಗವು ಬಿದಿರಿನಂತೆ ಹಾಗೆಯೇ ಸೆಟೆದು ನಿಂತಿತು. ಬಳಿಕ ಅವನು ಆ ಹಗ್ಗವನ್ನು ಸರಸರ ಏರಿ ಹೋಗಿ ಅದರ ತುದಿಯಮೇಲೆ ಪದ್ಮಾಸನಸ್ಥನಾಗಿ ಕುಳಿತುಬಿಟ್ಟನು. ಈ ಸಂಗತಿಯು ಹಾ ಹಾ ಅನ್ನುವಷ್ಟರಲ್ಲಿ ಊರಲ್ಲೆಲ್ಲ ಹಬ್ಬಿತು. ಬಳಿಕ ಕೇಳುವದೇನು? ಅಲ್ಲಿಯೊಂದು ಜಾತ್ರೆನೆರೆದಹಾಗಾಯಿತು. ಕ್ಷಣದಲ್ಲಿ ಹಣ್ಣು-ಕಾಯಿಗಳ ರಾಶಿಗೆರಾಶಿಯೇ ಬಿದ್ದಿತು. ಎಷ್ಟೋ ಜನರು ಅಡ್ಡಬೀಳತೊಡಗಿದರು; ಎಷ್ಟೋ ಜನರು ಮುಡುಪುಗಳನ್ನು ತಂದಿಡತೊಡಗಿದರು. ಕೆಲವರು ಹರಿಕೆಗಳನ್ನು ಬೇಡಿಕೊಳ್ಳಹತ್ತಿದರು. ಹೀಗೆ ಜನರಲ್ಲಿ ಭಕ್ತಿ ಸಾಮ್ರಾಜ್ಯವೇ ಪ್ರಸ್ಥಾಪಿತವಾದಹಾಗೆ ತೋರತೊಡಗಿತು.

ಈ ರೀತಿಯಾಗಿ ಶಿಷ್ಯನು ಆಟ ಹೂಡಿರಲು, ಇತ್ತ ಇಳಕೊಂಡ ಸ್ಥಳದಲ್ಲಿ ಗುರುಗಳು ಶಿಷ್ಯನ ದಾರೀ ನೋಡಿನೋಡಿ ಬೇಸತ್ತರು. ಆಹ್ನಿಕವು ಮುಗಿದು ಎಷ್ಟೋ ಹೊತ್ತು ಕಳೆದು ಹೋದರೂ ಶಿಷ್ಯನ ಸುಳಿವು ಇಲ್ಲದಾಯಿತು. ಆಗ ಗುರುಗಳು ತಾವೇ ಶಿಷ್ಯಶೋಧಾರ್ಥವಾಗಿ ಹೊರಟರು. ಅವರು ಊರಲ್ಲಿ ಬಂದು

ನೋಡುತ್ತಾರೆ, ಶಿಷ್ಯನು ಹಗ್ಗದ ಮೇಲೆ ಕುಳಿತುಕೊಂಡಿದ್ದಾನೆ; ಬಳಿಯಲ್ಲಿ ಸಾವಿರಾರು ಜನರು ಕೈಮುಗಿದುಕೊಂಡು ನಿಂತುಕೊಂಡಿದ್ದಾರೆ; ಆಗ ಗುರುಗಳು ನಕ್ಕು—ಏನಯ್ಯಾ, ಇದೇನು ಇಂದ್ರಜಾಲ ವಿದ್ಯೆಯನ್ನು ಕಲಿತೆ! ಎಂದು ನುಡಿದರು. ಗುರುಗಳ ಸ್ವರವು ಕಿವಿಗೆ ಬಿದ್ದಕೂಡಲೆ ಅವನು ಚಟ್ಟನೆ ಹಗ್ಗದಿಂದಿಳಿದು ಗುರುಚರಣಕ್ಕೆರಗಿ ಹೀಗೆ ಮಾಡಬೇಕಾದ ಕಾರಣವನ್ನು ಹೇಳಿ ಕ್ಷಮೆಬೇಡಿಕೊಂಡನು. ಗುರುಗಳು ನಗುತ್ತ ಶಿಷ್ಯನೊಡನೆ ಇಳಕೊಂಡಲ್ಲಿಗೆ ನಡೆದರು. ಹೇಳತಕ್ಕ ತಾತ್ಪರ್ಯವಿಷ್ಟೇ; ಮೊದಲು ಶಿಷ್ಯನು ಭಿಕ್ಷೆಗೆ ಹೋದಾಗ ಬಾಗಿಲ ಹಾಕಿಕೊಂಡು ಕುಳಿತ ಜನರು, ಅವನು ದೈವೀ ಚಮತ್ಕಾರ ತೋರಿಸಿದಾಗ ತಮ್ಮ ಸರ್ವಸ್ವವನ್ನೂ ಕೊಡಲು ಕೈಕಟ್ಟಿಕೊಂಡು ನಿಂತರು. ಈ ಉದಾಹರಣೆಯು ನಮ್ಮ ಮಹಾರಾಜರ ಅನುಭವಕ್ಕೆ ಪೂರ್ಣವಾಗಿ ಬಂದುಹೋಯಿತು.

ಮಹಾರಾಜರ ದೈವೀಶಕ್ತಿಯ ಅನುಭವವು ಬರಹತ್ತಲು, ಅವರ ದರುಶನಕ್ಕೆ ಪ್ರತಿನಿತ್ಯ ಜನ ಸಮ್ಮರ್ದವು ಹೆಚ್ಚತೊಡಗಿತು. ಮಹಾರಾಜರು ಚೋಳಪ್ಪನ ಮನೆಯಲ್ಲಿಯೇ ಇರಲಿ, ಶ್ರೀಮಂತರ ವಾಡೆಯಲ್ಲಿಯೇ ಇರಲಿ, ಜನರು ತಂಡತಂಡಾಗಿ ಹೋಗುತ್ತಿದ್ದರು. ಒಮ್ಮೊಮ್ಮೆ ಜನರ ಗದ್ದಲವು ಹೆಚ್ಚಾದಾಗ ಸಂಜೆಯವರೆಗೆ ಕುಳಿತರೂ ಕೆಲವರಿಗೆ ದರ್ಶನಕ್ಕೆ ಹೋಗುವ ಸರತಿಯೇ ಬರುತ್ತಿದ್ದಿಲ್ಲ. ಹೀಗೆ ಜನಸಮ್ಮರ್ದವು ಹೆಚ್ಚಿ ಜನರು ದರ್ಶನಕ್ಕೋಸ್ಕರ ಚಡಪಡಿಸುವಾಗ ಮಹಾರಾಜರು ಭಾವಿಕರನ್ನು ಹೆಸರುಗೊಂಡು ಮೊದಲು ಕರೆಯಿಸಿಕೊಂಡು ಅವರಿಗೆ ದರುಶನಲಾಭ ಮಾಡಿಕೊಡುತ್ತಿದ್ದರು. ಎಷ್ಟು ದೂರ ದೇಶದವನೇ ಇರಲಿ, ಮಹಾರಾಜರ ದರುಶನಕ್ಕೆ ಭಾವನಾಪೂರ್ವಕವಾಗಿ ಬಂದನೆಂದರೆ ತೀರಿತು. ಮಹಾರಾಜರು ಅವನ ಹೆಸರು-ದೆಸೆಗಳನ್ನು ಹೇಳಿ, ಅವನನ್ನು ಬರಮಾಡಿಕೊಂಡರೆಂತಲೇ ತಿಳಿಯಬೇಕು. ಇದರಿಂದ ಮಹಾರಾಜರ ವಿಷಯವಾಗಿ ಜನರಲ್ಲಿ ಪೂಜ್ಯಬುದ್ಧಿಯು ವಿಶೇಷವಾಗಿ ಬೆಳೆಯಿತು.

ಹೀಗೆ ಮಹಾರಾಜರು ಜನರ ಗುರುತು ಪರಿಚಯನ್ನು ಹೇಳುವಂತೆ, ಯಾರಾದರೂ ದುರಾಚಾರಿಗಳು ಹತ್ತರ ಬಂದರೆ ಅವರ ಗುಪ್ತಪಾಪ ಕೃತ್ಯವನ್ನು ಬಡಬಡ ಒಡನುಡಿದು ಅವರಿಗೆ ಬಾಯಿಗೆ ಬಂದಹಾಗೆ ಅಂದು ಬಿಡುತ್ತಿದ್ದರು. ಇದರಿಂದ ಪಾಪಿಗಳು ಅವರಲ್ಲಿ ಹೋಗಲು ಅಂಜುತ್ತಿದ್ದರು. ವ್ಯಭಿಚಾರ ಬುದ್ಧಿಯುಳ್ಳ ಸ್ತ್ರೀ ಪುರುಷರಂತೂ ಮಹಾರಾಜರನ್ನು ಕಂಡರೆ ಗದಗದನೆ ನಡುಗುತ್ತಿದ್ದರು. ಅವರು ಬಹುಶಃ ತಾವಾಗಿಯೇ ಮಹಾರಾಜರ ದರ್ಶನಕ್ಕೆ ಹೋಗು

ತ್ತಿದ್ದಿಲ್ಲ. ಯಾರಾದರೂ ಭಿಡೆಕ್ಕೆ ಹಾಕಿ ಕರಕೊಂಡು ಹೋದರೆ, ಆಗ ಅವರಿಗೆ ಜೀವದಲ್ಲಿ ಜೀವವಿರುತ್ತಿದ್ದಿಲ್ಲ. ಎಲ್ಲಿ ಮಹಾರಾಜರು ತಟ್ಟನೆ ಒಡನುಡಿದು ತಮ್ಮ ಹೂರಣವನ್ನು ಹೊರಬೀಳಿಸುವರೋ ಎಂದು ಬಹಳವಾಗಿ ಅಂಜುತ್ತಿದ್ದರು. ಮಹಾರಾಜರು ಲಹರೀ ಸ್ವಭಾವದವರು. ಒಮ್ಮೆ ಜನರಿಗೆ ಬೈದರೆ ಬೈದೇ ಬೈಯ್ಯುವರು. ಅವರ ಪಾಪಪುಣ್ಯಗಳನ್ನು ಹೇಳಹತ್ತಿದರೆ ಆ ದಿಸವೆಲ್ಲ ಅದೇ ಕೆಲಸಗಳನ್ನೇ ಮಾಡುವರು. ಒಮ್ಮೊಮ್ಮೆ ಯಾರು ಬಂದರೂ ಪಿಟ್ಟೆಂದು ಮಾತಾಡುತ್ತಿದ್ದಿಲ್ಲ. ಇಂಥ ಸಂಧಿಯಲ್ಲಿಯೇ ದರುಶನ ತಕ್ಕೊಂಡು ಪಾರಾಗಿ ಬಂದು ದುಷ್ಕರ್ಮಿಗಳು ಒಂದು ಕುತ್ತದಿಂದ ಪಾರಾದವರಂತೆ ಮನದಲ್ಲಿಯೇ ಸಂತೋಷವನ್ನು ತಾಳುತ್ತಿದ್ದರು; ತಮ್ಮ ದುರಾಚಾರಕ್ಕೆ ಹೇಸಿ, ಸಜ್ಜನರಿಗೆ ಕಿಂಬಹುನಾ ಭಗವಂತನಿಗೆ ಅಪ್ರಿಯವಾದ ಇಂಥ ಕೆಲಸಗಳನ್ನು ಮಾಡಬಾರದೆಂದು ಅವರು ಪಶ್ಚಾತ್ತಾಪಕ್ಕೆ ಒಳಗಾಗುತ್ತಿದ್ದಿಲ್ಲ. ಇಂಥವರು ಎಲ್ಲಿ ಹೋದರೂ ಪಶ್ಚಾತ್ತಾಪದಿಂದ ಪರಿಶುದ್ಧರಾಗದೆ ಕಳ್ಳಗಾಳಿನಂತೆ ಹಾಗೇ ಉಳಿದುಕೊಂಡು ಒಂದು ದಿನ ತಮ್ಮ ಪಾಪದಲ್ಲಿಯೇ ಬೆಂದುಹೋಗುವರು. ಮಹಾರಾಜರು ಸಿಟ್ಟಿಗೆದ್ದಾಗ ಯಾರಾದರೂ ಕುಕರ್ಮಿಗಳು ದರುಶನಕ್ಕೆ ಬಂದರೆ ಅವರ ನೆವದಿಂದ ಜಗತ್ತಿಗೆ ಸರಸವಾಗಿ ಧರ್ಮವನ್ನು ತಿಳಿಸಿಕೊಡುತ್ತಿದ್ದರು. ಮಹಾರಾಜರು ಮಾಡುತ್ತಿದ್ದ ಬೋಧದ ರಹಸ್ಯವನ್ನು ಸೂಕ್ಷ್ಮವಾಗಿ ವಿಚಾರಿಸಿದರೆ, ಆ ಕಾಲದಲ್ಲಿ ಜನರಲ್ಲಿ ನೈತಿಕಮರ್ಯಾದೆಯು ಖಿಲವಾಗುತ್ತ ನಡೆದಿತ್ತೆಂಬದು ವ್ಯಕ್ತವಾಗುತ್ತದೆ. ಆದರೂ ಆ ಕಾಲದಲ್ಲಿ ಧರ್ಮವಂತರಾದ, ಪರಧನ-ಪರಸ್ತ್ರೀಯರನ್ನು ಮುಟ್ಟದ ಪುಣ್ಯಶಾಲಿಗಳು ಬಹುಮಟ್ಟಿಗೆ ಇದ್ದರೆಂದು ಕಂಡು ಬರುತ್ತದೆ. ಯಾಕಂದರೆ, ಮಹಾರಾಜರು ಎಷ್ಟೋ ಜನರಿಗೆ ಅವರವರ ಉಪಾಸ್ಯ ದೈವತರೂಪದಿಂದಲೇ ದರುಶನ ಕೊಟ್ಟಿರುತ್ತಾರೆ. ಅಂದಬಳಿಕ ಇಂಥ ಸಗುಣರೂಪ ದರುಶನವು ಪುಣ್ಯವಂತರಿಗಲ್ಲದೆ ಪಾಪಿಷ್ಠರಿಗೆ ದೊರಕದು!

ಮಹಾರಾಜರು ಬಹಿರಾಡಂಬರದವರಲ್ಲವೆಂದು ಹಿಂದೆಯೊಮ್ಮೆ ಹೇಳಿದೆಯಷ್ಟೇ; ಇಷ್ಟೇ ಅಲ್ಲ, ಅವರಿಗೆ ತಮ್ಮ ಸ್ವಂತ ದೇಹದ ಪರವೆಯು ಕೂಡಾ ಇರುತ್ತಿದ್ದಿಲ್ಲ. ಯಾರಾದರೂ ಊಟಮಾಡಿಸಿದರ, ಮನಸ್ಸಿಗೆ ಬಂದರೆ ಉಣ್ಣಬೇಕು; ಇಲ್ಲದಿದ್ದರೆ, ಅನ್ನದ ಪಾತ್ರೆಯನ್ನು ಬಿಸುಟಿ ಬಿಡಬೇಕು. ಇದರಂತೆ ಸ್ನಾನಾದಿಗಳ ಸ್ಥಿತಿಯೂ ಹಾಗೆಯೇ ಇತ್ತು. ವಸ್ತ್ರ-ಪ್ರಾವರಣಗಳನ್ನು ಧರಿಸುವಲ್ಲಾದರೂ ಇದೇ ಸ್ಥಿತಿಯು; ಒಟ್ಟಿಗೆ ಅವರು ತಮ್ಮ ಇಚ್ಛೆಗೆ ಬಂದಾಗ ಸೇವೆಯನ್ನು ಸ್ವೀಕ

ರಿಸುತ್ತಿದ್ದರು; ಬಾರದಿದ್ದಾಗ ಬಿಟ್ಟುಬಿಡುತ್ತಿದ್ದರು. ಅವರ ಈ ವೃತ್ತಿಯು ಕೇವಲ ಅವಧೂತ ಮಾರ್ಗಕ್ಕೆ ಸರಿಯಾಗಿತ್ತು.

ಈ ಪ್ರಕಾರ ಮಹಾರಾಜರು ಪರಮಹಂಸಾಶ್ರಮದಲ್ಲಿದ್ದರೂ ಆ ಆಶ್ರಮಕ್ಕೆ ಉಚಿತವಾದ ಕಾರ್ಯಗಳನ್ನು ಮಾಡುವ ಶ್ರಮವನ್ನು ಮಾತ್ರ ವಹಿಸಲಿಲ್ಲ. ಹೀಗೇಕೆ ಆಶ್ರಮ ವಿಧಿಯನ್ನು ಮೀರಿ ನಡೆಯುತ್ತೀರೆಂದು ಕೇಳುವ ಧೈರ್ಯವು ಯಾರಿಗೂ ಇರುತ್ತಿದ್ದಿಲ್ಲ. ಯಾಕಂದರೆ, ಯಾರಾದರೂ ಗಟ್ಟಿಗರು ಕೇಳಿದರೆ, ಕೇಳಿದವರನ್ನೇ ಅವರು ಅಂಟಿಕೊಂಡು ಬಿಡುತ್ತಿದ್ದರು. ಕೇವಲ ಧರ್ಮಶಾಸ್ತ್ರವಿಹಿತವಾದ ಕರ್ಮಠವೃತ್ತಿಯನ್ನು ನಡಿಸಿಕೊಂಡು ಹೋಗುವದು ಈ ಕಲಿಯುಗದ ಜನರಿಂದ ಆಗುವದಿಲ್ಲೆಂಬದನ್ನು ಪ್ರಶ್ನೆ ಮಾಡಿದವರ ಬಾಯಿಂದಲೇ ಒಡನುಡಿಸುತ್ತಿದ್ದರು. ಅವರು ಒಮ್ಮೊಮ್ಮೆ ಜನರನ್ನು ಕುರಿತು,—''ಪ್ರಾಣಿಗಳಿರಾ, ನೀವು ಅಲ್ಪಶಕ್ತರು, ಅಲ್ಪ ಮನಸ್ಕರು; ನಿಮ್ಮಿಂದ ಯಥಾಸಾಂಗವಾಗಿ ಧರ್ಮಕರ್ಮಗಳು ನಡೆದಾವೆಂದು ಖಂಡಿತವಾಗಿ ಹೇಳಲಿಕ್ಕೆ ಬರುವ ಹಾಗಿಲ್ಲ. ಸಾಮಾನ್ಯಧರ್ಮವನ್ನಾದರೂ ನೀವು ಕಾಯ್ದುಕೊಂಡು ಹೋದರೆ, ನಿಮ್ಮ ಸಮಾನ ಪುಣ್ಯವಂತರು ಇಲ್ಲವೆಂತಲೇ ಹೇಳಲಾಗುವದು. ಮುಂದೆ ಅದೂ ನಿಮ್ಮ ಕಡೆಯಿಂದ ಆಗುವದಿಲ್ಲ. ನಿಮ್ಮಲ್ಲಿ ಆಸುರೀಭಾವವು ಹೆಚ್ಚುವದು, ಸ್ವಾರ್ಥವು ಮಿತಿಮೀರುವದು; ನೈತಿಕ ಸಾಮರ್ಥ್ಯವು ಕುಗ್ಗುವದು. ಕಡೆಗೆ ಪಶ್ವಾದಿಗಳಂತೆ ಆಚರಿಸಹತ್ತಿ ಯಮದಂಡನೆಯಿಂದ ಗೋಳಿಡುವಿರಿ'' ಎಂದು ಹೇಳುತ್ತಿದ್ದರು.

ಪ್ರಿಯವಾಚಕರೇ, ನೋಡಿದಿರಾ, ಸಜ್ಜನರ ಹೃದಯವನ್ನು! ಇಷ್ಟು ಅಂತಃಕರಣದಿಂದ ನಮಗೆ ಕಲ್ಯಾಣವಾಗಲೆಂದು ಬಯಸುವವರು ಸಜ್ಜನರ ಹೊರತು ಇನ್ನಾರಿರುವರು? ಅವರಿಗೆ ಯಾವ ಆಶ್ರಮಧರ್ಮಗಳನ್ನು ಪಾಲಿಸಲೂ ಅಶಕ್ಯವಿಲ್ಲ; ಆದರೆ ಅವರು ಪ್ರಾಣಿಮಾತ್ರರಿಗೆ ಶಕ್ಯವಿದ್ದಷ್ಟನ್ನೇ ಆಚರಿಸಿ, ಅವರಿಗೆ ಮಾರ್ಗದರ್ಶಕರಾಗಬೇಕಾಗುವದು. ಯಾಕಂದರೆ— ''ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೇಜನಃ ||'' ಎಂದು ಭಗವದ್ಗೀತೆಯಲ್ಲಿ ಹೇಳಿದಂತೆ ದೊಡ್ಡವರ ಅನುಕರಣವನ್ನೇ ಜನರು ಮಾಡುವರು. ಅನುಕರಣ ಮಾಡಲಿಕ್ಕೆ ತಕ್ಕ ಸಾಮರ್ಥ್ಯವು ಬೇಕಷ್ಟೇ; ಅಲ್ಪ ಚೇತನರಾದ ನಮ್ಮಿಂದ ಯಥಾ ಸಾಂಗ ಬ್ರಹ್ಮಕರ್ಮಗಳನ್ನು ನೆರವೇರಿಸುವದು ಆಗದ್ದರಿಂದಲೇ ನಮ್ಮ ಅಳವನ್ನು ಮೀರಿದ ಆ ಕೆಲಸವನ್ನು ಮಾಡಿ ಅವರು ನಮ್ಮನ್ನು ಅಶಕ್ಯದ ಅನುಕರಣ ಮಾಡಹಚ್ಚುವದಿಲ್ಲ. ಮುಖ್ಯವಾಗಿ ಜನರು ಶಕ್ಯವಿದ್ದ ಮಟ್ಟಿಗೆ ಧರ್ಮ-ಕರ್ಮಗಳಂತೆ ಆಚರಿಸಿ ಭಕ್ತಿ

ಮಾರ್ಗ-ನೀತಿಮಾರ್ಗಗಳನ್ನು ತಪ್ಪದೆ ಅನುಸರಿಸಲೆಂದು ಸಜ್ಜನರ ಬಯಕೆಯಿರುವದು. ಆದಕ್ಕಾಗಿಯೇ ಅವರು ಬಹಳವಾಗಿ ಹೆಣಗುವರು. ಅವರ ಈ ಸುಲಭ ಉಪದೇಶವನ್ನಾದರೂ ಪಾಲಿಸುವಷ್ಟು ದಾರ್ಢ್ಯವು ನಮ್ಮಲ್ಲುಳಿದಿರುವದಿಲ್ಲ. ನಮ್ಮಲ್ಲಿ ವಿಷಯಲಂಪಟತ್ವವು ಬೆಳೆಯಿತು. ಪರಧನ-ಪರನಾರಿಯರೆಂದರೆ ನಮಗೆ ಅತಿ ಆದರದ ಸಂಗತಿಗಳಾಗಿ ಕುಳಿತವು! ಹಾಯ್! ಹಾಯ್! ಇಂಥ ನಾವು ಸಾಮಾನ್ಯ ಧರ್ಮವನ್ನು ಪಾಲಿಸುವದೆಂತು? ಈ ಸಾಮಾನ್ಯ ಧರ್ಮದಲ್ಲಿಯೇ ನೆಟ್ಟಗೆ ನಡೆಯದ ನಾವು ಬ್ರಹ್ಮಕರ್ಮಗಳನ್ನು ಯಥಾ ಸಾಂಗವಾಗಿ ನಡೆಯಿಸಬಹುದೋ? ಅಂತೇ ನಮ್ಮ ಕರ್ಮಗಳೆಲ್ಲ ನಮಗೆ ತಾರಕವಾಗದೆ ಮಾರಕವಾಗಿ ಪರಿಣಮಿಸುವವು!

ಮಹಾರಾಜರು ಯಾವಾಗಲೂ ನಿರಿಚ್ಛರಾಗಿದ್ದರು. ಆದರೆ ಒಂದು ಬಾಬಿನಲ್ಲಿ ಮಾತ್ರ ಅವರು ಪ್ರಬಲ ಆಶೆಯನ್ನು ತಾಳಿದ್ದರು. ಅದೇನಂದರೆ—ಸಚ್ಛಿಷ್ಯ ಸಂಗತಿಯು; ಬ್ರಹ್ಮಾನಂದವನ್ನು ಹೊಂದಿ ಕೃತಾರ್ಥರಾಗುವ ಪುಣ್ಯವಂತರು ಹೆಚ್ಚಿದ ಮಾನದಿಂದ ತಮ್ಮ ಹೊಟ್ಟೆತುಂಬುವದೆಂದು ಆ ಮಹಾತ್ಮರು ಅನ್ನುತ್ತಿದ್ದರು. ಜನರು ಯಾರಾದರೂ ನೈವೇದ್ಯ ಮಾಡಿಸಿ ಪಂಚ ಭಕ್ಷ್ಯ ಪರಮಾನ್ನವನ್ನು ಉಣಬಡಿಸಿದರೆ ಅಂದು ಉಣ್ಣುತ್ತಿದ್ದರೇನೋ ನಿಜ; ಆದರೆ ಅದರಿಂದ ತಮಗೆ ನಿಜವಾದ ಆನಂದವಾಗುವದಿಲ್ಲೆಂದು ಹೇಳುತ್ತಿದ್ದರು. ಸಜ್ಜನರಿಗೆ ಜಡಾನ್ನದಿಂದ ಪ್ರಯೋಜನವಿರುವದಿಲ್ಲ; ಆದರೂ ಅವರು ಭಕ್ತರಾದ ನಮ್ಮ ಭಿಡೆಕ್ಕೆ ಬಿದ್ದು ಮಿಷ್ಟಾನ್ನವನ್ನು ಸೇವಿಸುವರು. ಇದರ ಮರ್ಮವನ್ನು ತಿಳಿಯದೆ ಅಜ್ಞಾನಿಗಳು ಸಜ್ಜನರ ಸಮೀಚೀನ ಆಹಾರದ ವಿಷಯವಾಗಿ ಆಡಿಕೊಳ್ಳುವರು. ಯಾವ ಮಹಾತ್ಮರು ಜಗತ್ತಿನ ಎಲ್ಲ ಪದಾರ್ಥಗಳಲ್ಲಿ ಸಮಭಾವವನ್ನಿಟ್ಟು ವರ್ತಿಸುವರೋ, ಅಂದವರಿಗೆ ಸುಗ್ರಾಸ ಭೋಜನಪ್ರಿಯರೆಂದು ಕರೆಯಬಹುದೋ? ತಿಳುವಳಿಕೆಯಿಲ್ಲದ ಮೂಢಜನರು ಮಾತ್ರ ಹಾಗೆ ಕರೆಯುವರು. ಮಹಾರಾಜರ ಕಾಲದಲ್ಲಿ ಇದೇ ಮಾದರಿಯ ಒಂದು ಪ್ರಸಂಗವು ವರ್ತಿಸಿತು. ಅದೇನಂದರೆ:—

ಒಬ್ಬ ಬ್ರಾಹ್ಮಣನು ಮಹಾರಾಜರನ್ನು ನಿಂದಿಸುತ್ತಿದ್ದನು. ಅವನ ನಿಂದೆಯ ವಿಷಯವು ಮಹಾರಾಜರ ಸುಗ್ರಾಸಭೋಜನವಾಗಿತ್ತು. ದಿನಾಲು ಹೊಸ ಹೊಸ ಭಕ್ತರು ಮಹಾರಾಜರ ಮೇಲಿನ ಪ್ರೇಮದಿಂದ ಅವರಿಗೆ ಸಮೀಚೀನವಾದ ಆಹಾರವನ್ನು ಸಿದ್ಧಗೊಳಿಸಿ ಉಣಿಸುತ್ತಿದ್ದರು. ಒಂದು ದಿನ ಉತ್ತರಸೀಮೆಯ

ಒಬ್ಬ ಭಕ್ತನು ಬಂದಿದ್ದನು. ಅವನು ಮಹಾರಾಜರಿಗಾಗಿ ಬಗೆಬಗೆಯ ಪಕ್ವಾನ್ನ ಗಳನ್ನು ಸಿದ್ಧಗೊಳಿಸಿ ಅವನ್ನು ತನ್ನ ಕೈಮುಟ್ಟಿ ಮಹಾರಾಜರಿಗೆ ಉಣಿಸುತ್ತ ಕುಳಿತಿದ್ದನು. ಅದೇ ಸಮಯದಲ್ಲಿ ಆ ನಿಂದಕ ಮನುಷ್ಯನ ಆಗಮನವಾಯಿತು. ಅವನು ನೆಟ್ಟಗೆ ಮಹಾರಾಜರಿದ್ದಲ್ಲಿಗೆ ಹೋದನು. ಆಗ ಅವನ ಕಣ್ಣಿಗೆ ಅಲ್ಲಿಯ ಉತ್ತಮೋತ್ತಮವಾದ ಪಕ್ವಾನ್ನಗಳು ಬಿದ್ದವು. ಅವನ್ನು ಕಂಡು ಆ ಗೃಹಸ್ಥನು—"ಆಹಾ! ಸಾಧುಗಳಾಗುವದು ಬಲು ಸೌಖ್ಯವು; ದಿನಾಲು ನಾವು ಸಂಜೆಯವರೆಗೆ ಮಂದಿಯ ಚಾಕರೀ ಮಾಡಿದರೂ ನಮಗೆ ಅಂಬಲಿ-ರೊಟ್ಟಿ ಸಿಗಬೇಕಾದರೆ ಸಾಕುಸಾಕಾಗಿ ಹೋಗುವದು. ಇವರು ಸಾಧುಗಳೆಂಬ ನೆವದಿಂದ ಏನೂ ದುಡಿಯುವದಿಲ್ಲ. ಹೀಗಿದ್ದರೂ ಇವರು ದಿನಾಲು ಸುಗ್ರಾಸವನ್ನೇ ಸವಿಯುವರಲ್ಲ! ನಾನೂ ಸಾಧು ಆಗಿಬಿಟ್ಟರೆ ಹೀಗೆಯೇ ಸುಖಪಡಬಹುದಲ್ಲವೆ?" ಎಂದು ಮನದೊಳಗೆ ಯೋಚಿಸಲಾರಂಭಿಸಿದನು. ಹೀಗೆ ಅವನ ಯೋಚನೆಗಳು ನಡೆದಿರಲು ಮಹಾರಾಜರು ಸರ್ವಾಂತರ್ಯಾಮಿಗಳಾದ್ದರಿಂದ ಅವನ ಮನಸ್ಸಿನ ತಳಮಳವನ್ನು ಕಂಡುಹಿಡಿದು, ಕೂಡಲೆ ತಮಗೆ ಉಣಿಸುತ್ತಿದ್ದ ಪಕ್ವಾನ್ನಗಳನ್ನು ಬಿಸುಟಿ, ಒಳ್ಳೇ ಖಾರವಿರುವ ಹಣ್ಣುಮೆಣಸಿನಕಾಯಿಗಳನ್ನು ತರಲು ಆಜ್ಞಾಪಿಸಿದರು. ಉತ್ತರ ಸೀಮೆಯ ಆ ಭಕ್ತನು ಕಾರಣವನ್ನು ಕೇಳಲಾರದೆ ಸುಮ್ಮನೆ ಹೋಗಿ ಎರಡು ಮೂರು ಸೇರಿನಷ್ಟು ಹಣ್ಣುಮೆಣಸಿನ ಕಾಯಿಗಳನ್ನು ತಕ್ಕೊಂಡು ಬಂದನು. ಆ ಕಾಯಿಗಳನ್ನು ತಕ್ಕೊಂಡು ಮಹಾರಾಜರು ತಿನ್ನಲಾರಂಭಿಸಿದರು. ಕ್ಷಣದಲ್ಲಿ ಆ ಎಲ್ಲ ಕಾಯಿಗಳನ್ನು ಮಹಾರಾಜರು ತಿಂದುಹಾಕಿದರು. ಆದರೆ ಈ ಲಕ್ಷಣವು ಆ ನಿಂದಕನಿಗೆ ಹೊಳೆಯದೆ ಹೋಗಲಿಲ್ಲ. ಅವನಿಗೆ ತನ್ನ ಅಂತರಂಗದ ದುರ್ಬುದ್ಧಿಯ ಬಗ್ಗೆ ಪಶ್ಚಾತ್ತಾಪವಾಯಿತು. ಕೂಡಲೆ ಅವನು ಮಹಾರಾಜರಿಗೆ ದಂಡವತ್ ಪ್ರಣಾಮವನ್ನು ಮಾಡಿ ಪ್ರಾರ್ಥಿಸಿದನೇನಂದರೆ:—ಮಹಾರಾಜ, ನಾನು ಮಹಾ ಅಪರಾಧಿಯಿದ್ದೇನೆ. ಬಹು ದಿವಸಗಳಿಂದ ತಮ್ಮ ನಿಂದೆಯನ್ನು ಮಾಡುತ್ತ ಬಂದಿದ್ದೇನೆ. ಈ ದಿವಸ ನೀವು ಪ್ರತ್ಯಕ್ಷ ಪಕ್ವಾನ್ನಗಳನ್ನು ಉಣ್ಣುವದನ್ನು ನೋಡಿಯಂತೂ ನನ್ನ ಕುಬುದ್ಧಿಗೆ ಕಳೆಯೇರಿತು. ನಾನು ಸಾಧುತ್ವದ ಮರ್ಮವರಿಯದೆ ಮನಸ್ಸಿಗೆ ಬಂದಹಾಗೆ ಕಲ್ಪಿಸಿಕೊಂಡೆನು. ಸರ್ವಜ್ಞರಾದ ತಾವು ಅಜ್ಞನಾದ ನನ್ನನ್ನು ಹಾದಿಗೆ ತರುವದಕ್ಕಾಗಿ ಹಣ್ಣುಮೆಣಸಿನ ಕಾಯಿಗಳನ್ನು ತಿಂದು ತೋರಿಸಿದಿರಿ. ಸಾಧುಗಳಾದ ತಮಗೆ ಪಕ್ವಾನ್ನದ ರುಚಿಯೂ ಅಷ್ಟೇ; ಮೆಣಸಿನಕಾಯಿಯ ಖಾರವೂ ಅಷ್ಟೇ; ತಾವು ಸುಖ-ದುಃಖಗಳಿಗೆ ನಿಲುಕ

ದಿರುವಿರೆಂಬದು ನನ್ನ ಅನುಭವಕ್ಕೆ ಬಂದಿತು. ಅದರಂತೆ ಕಂಡಕಂಡವರಿಗೆ ಸಾಧುವಾಗಲಿಕ್ಕೆ ಬರುವದಿಲ್ಲೆಂಬದನ್ನೂ, ಸಾಧುತ್ವವು ಬಹು ಕಠಿಣವೆಂಬ ದನ್ನೂ ಮನಗಂಡೆನು. ಮಹಾಸ್ವಾಮಿಾ, ನಿಮ್ಮ ದರ್ಶನದಿಂದ ನನ್ನಲ್ಲಿ ಈ ಪಶ್ಚಾತ್ತಾಪ ಯುಕ್ತವಾದ ಜ್ಞಾನವು ಹುಟ್ಟಿದುದಕ್ಕೆ ನನಗೆ ಸಂತೋಷವಾಗಿದೆ. ನಾನು ನಿಮ್ಮ ದರುಶನಕ್ಕೆ ಬಂದೆನು. ಮನೆಯಲ್ಲಿಯೇ ನಿಮ್ಮನ್ನು ನಿಂದಿಸುತ್ತ ಕುಳಿತಿದ್ದರೆ, ಈ ಬಗೆಯ ಸದ್ಬುದ್ಧಿಯು ನನ್ನಲ್ಲಿ ಉದ್ಭವಿಸುತ್ತಿತ್ತೋ, ಇಲ್ಲವೋ ಎಂಬದು ಸಂಶಯಾಸ್ಪದವಾಗಿದೆ. ಇನ್ನುಮೇಲೆ ನಿಮ್ಮ, ಕಿಂಬಹುನಾ ಯಾವ ಸಾಧುಗಳ ನಿಂದೆಯನ್ನೂ ಮಾಡಲಿಕ್ಕಿಲ್ಲ. ಆದರೆ ಈಗಾದ ನನ್ನ ಅಪರಾಧ ವನ್ನು ಕ್ಷಮಿಸಬೇಕಾಗದೇಕು.''

ಈ ಮೇರೆಗೆ ಬ್ರಾಹ್ಮಣನು ಪ್ರಾರ್ಥಿಸಲು, ಮಹಾರಾಜರು ಮುಗುಳು ನಗೆ ನಕ್ಕು ಮೌನದಿಂದ ಮೇಣಸಿನಕಾಯಿ ತಿನ್ನುವದನ್ನು ಬಿಟ್ಟು, ಪುನಃ ಪಕ್ವಾ ನ್ನವನ್ನು ಉಣ್ಣಹತ್ತಿದರು. ಬಾಯಿಂದ ಒಂದು ಶಬ್ದವನ್ನಾದರೂ ಉಚ್ಚರಿ ಸಲಿಲ್ಲ. ಆಗ ಉತ್ತರ ಸೀಮೆಯ ಭಕ್ತನಿಗೆ ಈ ಎಲ್ಲ ಸಂಗತಿಗಳ ಪೂರ್ವಾ ಪರ ಸಂಬಂಧವು ತಿಳಿಯಲು, ಅವನಿಗೆ ತುಂಬಾ ಸಂತೋಷವಾಯಿತು. ತನ್ನ ಗುರುವು ಸರ್ವಜ್ಞನೂ, ಲೋಕಶಿಕ್ಷಕನೂ ಆಗಿರುವನೆಂದು ತನ್ನ ಧನ್ಯ ತೆಯನ್ನು ಕಡು ಸಂಭ್ರಮದಿಂದ ವರ್ಣಿಸಿಕೊಳ್ಳತೊಡಗಿದನು.

## ೬ನೆಯ ಪ್ರಕರಣ.

## ಉನ್ಮತ್ತಶಾಸ್ತ್ರಿಯಲ್ಲಿ ವೈರಾಗ್ಯೋತ್ಪತ್ತಿ.

ಕೇವಲ ಭಕ್ತರ ಕಲ್ಯಾಣಕ್ಕಾಗಿ ಹುಟ್ಟಿಬಂದ ಮಹಾರಾಜರು ಅಕ್ಕಲಕೋ ಟೆಯಲ್ಲಿ ಸಾಮಾನ್ಯ ಮನುಷ್ಯರಂತೆ ನಟಿಸುತ್ತಿರಲು, ಭಕ್ತಕೋಟಿಯಲ್ಲಿ ಪ್ರವಿಷ್ಟ ರಾದವರಿಗೆ ಅವರ ವಿವಿಧ ಲೀಲೆಗಳಿಂದ ಆನಂದವಾಗುತ್ತಿತ್ತೆಂಬದು ಸ್ಪಷ್ಟವೇ ಸರಿ! ಆದರೆ ಮಹಾರಾಜರ ಆಚರಣೆಗಳನ್ನು ತಿರಸ್ಕರಿಸುವವರೂ ಕ್ರಮೇಣ ಪ್ರಜ್ಞಾವಂ ತರಾಗಿ ಅವರ ಉಪಾಸನೆಯಲ್ಲಿ ನಿಂತರಾಗತೊಡಗಿದರು. ಅವರ ದೈವೀ ಸಾಮ

ರ್ಥ್ಯವು ಎಂಥವನನ್ನಾದರೂ ನಡುಗಿಸಿಕೊಡುತ್ತಿತ್ತು. ಬಹುಶಃ ಲೋಕದಲ್ಲಿ ಮಾಯೆಯ ವ್ಯವಹಾರಗಳಿಗೆ ಒಳಗಾದವರ ಸಂಖ್ಯೆಯೇ ಬಹಳ; ಮನುಷ್ಯನು ವಿದ್ವಾಂಸನಿರಲಿ, ಅವಿದ್ವಾಂಸನಿರಲಿ, ಅವನು ಈ ಸ್ವಾಭಾವಿಕ ವ್ಯವಹಾರದಿಂದ ಪಾರಾಗಲಾರನು. ವಿದ್ವಾಂಸ, ಪಂಡಿತ ಎಂಬ ಶಬ್ದಗಳು ಈಗ ಕೇವಲ ಶಾಬ್ದಿಕ ಪಂಡಿತರನ್ನೇ ಗೌರವಿಸಹತ್ತಿವೆ; ನಿಜವಾದ ಪಂಡಿತ ಅಥವಾ ವಿದ್ವಾಂಸ ಪದವಿಗೆ ಅರ್ಹರಾದವರೆಂದರೆ, ಯಾರು ಅವಿದ್ಯಾರೂಪವಾದ ಮಾಯಾ ವ್ಯವಹಾರಗಳನ್ನು ಮೀರಿರುವರೋ ಅವರೇ ಎಂದು ಹೇಳಬಹುದು. ಉಳಿದವರಿಗೆ ಅಂದರೆ ಮಾಯಾಧೀನರಾದವರಿಗೆ ಆ ವಿಶೇಷಣಗಳನ್ನು ಹೊಂದಲು ಅಧಿಕಾರವಿಲ್ಲೆಂದು ಹೇಳಬಹುದು.

ಮಹಾರಾಜರ ಕಾಲದಲ್ಲಿ ಒಬ್ಬ ಬ್ರಾಹ್ಮಣನು ಶಾಸ್ತ್ರಾಧ್ಯಯನದಿಂದ ಉನ್ಮತ್ತನಾಗಿದ್ದನು. ನ್ಯಾಯ, ವ್ಯಾಕರಣಗಳಲ್ಲಿ ಆತನು ಅದ್ವಿತೀಯ ಪ್ರಾವಿಣ್ಯತೆಯನ್ನು ಪಡೆದದ್ದರಿಂದ ಅವನ ಹೆಮ್ಮೆಗೆ ಮೇರೆಯಿದ್ದಿಲ್ಲ. ಎಷ್ಟು ಅಧ್ಯಯನ ಮಾಡಿದ್ದರೂ ಬ್ರಹ್ಮಾನುಭವ ಸ್ಥಿತಿಯು ಪ್ರಾಪ್ತವಾಗದ್ದರಿಂದ ಪಂಡಿತನೆಂಬ ಹೆಸರಿಗೆ ಅವನು ತಕ್ಕವನಾಗಿದ್ದಿಲ್ಲ. ಆದರೂ ಲೋಕರೂಢಿಯಂತೆ ದೊಡ್ಡ ಪಂಡಿತನೆಂಬ ಅಭಿಧಾನವು ಅವನಿಗೆ ಪ್ರಾಪ್ತವಾಗಿತ್ತು. ಮಾಯಾರೂಪವಾದ ಅವಿದ್ಯೆಯನ್ನು ಹೋಗಲಾಡಿಸಿಕೊಳ್ಳದ ಈ ಪಂಡಿತನು ತನ್ನ ಯೋಗ್ಯತೆಯು ಬಹುದೊಡ್ಡದಿರುವದೆಂದು ಭಾವಿಸಿ ಪ್ರಸ್ತುತದ ಚರಿತ್ರನಾಯಕರನ್ನು ನಿಂದಿಸುತ್ತಿದ್ದನು. "ಶಾಸ್ತ್ರಾನುಸಾರವಾಗಿ ಸಂನ್ಯಾಸ ಧರ್ಮವನ್ನು ಪಾಲನ ಮಾಡದ ಇವರು ಭ್ರಷ್ಟರಿರುವರೆಂದು" ಸ್ಪಷ್ಟವಾಗಿ ಅನ್ನುತ್ತಿದ್ದನು. ಮಹಾರಾಜರು ಅಧರ್ಮಿಗಳೂ, ಅಪವಿತ್ರರೂ ಇರುವದರಿಂದ ಅವರ ಮುಖಾವಲೋಕನವು ಕೂಡಾ ಮಹಾಪಾಪಕರವೆಂದು ಉಪನ್ಯಾಸಾದಿಗಳನ್ನು ಮಾಡುತ್ತಿದ್ದನು. ಈ ನಿಂದೆಯನ್ನು ಕೇಳಿ ಮಹಾರಾಜರ ಭಕ್ತರಿಗೆ ಹೇಳು ಬಾರದಷ್ಟು ವ್ಯಥೆಯಾಗುತ್ತಿತ್ತು. ಆದರೆ ಪಂಡಿತನ ವಾಗ್ವೈಖರಿಗೆ ಎದುರಾಗುವಷ್ಟು ಸಾಮರ್ಥ್ಯವು ತಮ್ಮಲ್ಲಿರದ್ದರಿಂದ ಮನಸ್ಸಿನಲ್ಲಿಯೇ ಅವನ ದುರಹಂಕಾರಕ್ಕೆ ಮರುಗಿ ಮನೆಗೆ ಹೋಗುತ್ತಿದ್ದರು.

ಹೀಗಿರಲು, ಕೆಲಜನ ಭಕ್ತರು ಒಂದು ಹಂಚಿಕೆಯಿಂದ ಒಂದುದಿನ ಪಂಡಿತನನ್ನು ಮಹಾರಾಜರ ಭೆಟ್ಟಿಗೆ ಕರೆದೊಯ್ದರು. ಆಗ ಮಹಾರಾಜರು ಅವಧೂತವೇಷದಿಂದ ಕುಳಿತಿದ್ದರು, ಬೇರೊಬ್ಬ ಗೃಹಸ್ಥನು ಅವರ ಸಮ್ಮುಖದಲ್ಲಿ ಕುಳಿತು ಅವರಿಗೆ ಬಗೆ ಬಗೆಯ ಪಕ್ವಾನ್ನಗಳನ್ನು ಉಣ್ಣಿಸುತ್ತಿದ್ದನು. ಈ ಸ್ಥಿತಿಯಲ್ಲಿ

ಮಹಾರಾಜರನ್ನು ಕಂಡ, ಪಂಡಿತನ ಪಿತ್ಥವು ತಲೆಗೇರಿತು. ಮೊದಲೇ ಮಹಾರಾಜರ ವಿಷಯವಾಗಿ ದೂಷಿತವಾದ ಅವನ ಮನಸ್ಸು ಈಗ ವಿಲಕ್ಷಣ ಸಂತಾಪಕ್ಕೊಳಗಾದದ್ದರಲ್ಲಿ ಆಶ್ಚರ್ಯವಿಲ್ಲ. ಆ ಸಂತಾಪದ ಭರದಲ್ಲಿ ಅವನು ಹಿಂದು-ಮುಂದಿನ ವಿಚಾರವಿಲ್ಲದೆ ಮಹಾರಾಜರನ್ನು ಜರೆಯ ತೊಡಗಿದನು. ಅವನು ಮನಸೋಕ್ತವಾಗಿ ಜರೆಯುವವರೆಗೆ ಮಹಾರಾಜರು ಅವನ ಉಸಾಬರಿಯನ್ನೇ ತೆಗೆಯಲಿಲ್ಲ. ಮೌನದಿಂದ ಅವನ ನಿಂದೆಯನ್ನು ಕೇಳುತ್ತ ಕುಳಿತರು. ಪಂಡಿತನ ವಷಟ್ಕಾರಗಳು ಮುಗಿದು ಅವನು ಸುಮ್ಮನಾಗಲು. ಮಹಾರಾಜರು ಆತನನ್ನು ಕುರಿತು ಹಾಸ್ಯಮುಖದಿಂದ—ಪಂಡಿತರೇ, ನೀವನ್ನುವದು ನಿಜವು; ನಾನು ನಿಜವಾಗಿಯೂ ಭ್ರಷ್ಟನಿರುತ್ತೇನೆ. ನಾನು ಸಿಕ್ಖನ ಮನೆಯಲ್ಲಿ ಉಣ್ಣುತ್ತಿದ್ದದರಿಂದ ಆ ಅನ್ನ ದೋಷದಿಂದ ನನ್ನ ದೇಹವು ಅಪವಿತ್ರವಾಗಿರಬಹುದು. ಆದರೆ ನಿಮ್ಮ ದೇಹದ ಅಪವಿತ್ರತೆಯನ್ನು ನೀವು ಕಂಡುಕೊಂಡಿಲ್ಲವೆಂಬಂತೆ ತೋರುತ್ತದೆ. ಹಾಯ್! ಹಾಯ್!! ಬ್ರಾಹ್ಮಣಾ, ನಿನ್ನ ಉತ್ಪತ್ತಿಯು ಎಷ್ಟು ಕರ್ಮಕಲೋಲವಾಗಿರುವದಲ್ಲ! ನಿನ್ನ ತಾಯಿಯು ಶುದ್ಧ ವ್ಯಭಿಚಾರಿಣಿಯಿದ್ದು ನಿನ್ನನ್ನು ಒಬ್ಬ ಯುವನ ಪುರುಷನ ಸಂಗದಿಂದ ಹಡೆದಿರುತ್ತಾಳೆ. ಮ್ಲೇಂಛವೀರ್ಯಸಂಭೂತನಾದ ನಿನ್ನ ದೇಹವು ಎಷ್ಟು ಪವಿತ್ರತನವಾಗಿದೆಯೆಂಬುದನ್ನು ನೀನೇ ನೋಡಿಕೊ! ಎಂದು ನುಡಿದು ಆ ಮ್ಲೇಂಛನ ಹೆಸರನ್ನೂ ಅವನ ತಾಯಿಯ ಹೆಸರನ್ನೂ ಇವರಿಬ್ಬರ ದುರ್ವ್ಯವಹಾರದ ಕಾಲಗಣನೆಯನ್ನೂ ಯಥಾಸ್ಥಿತನಾಗಿ ಹೇಳಿದರು. ಮತ್ತು ಪಂಡಿತನ ಮನೆತನಕ್ಕಿರುವ ಆ ಮ್ಲೇಂಛನ ಪ್ರೇಮ ಪ್ರಮಾಣ ಸಂಬಂಧವನ್ನೂ, ಅವನ ಮರಣಕಾಲವನ್ನೂ, ಅವನು ಕೊಟ್ಟ ಆಸ್ತಿಯ ಮಹಾನೆಯನ್ನೂ ಲೋಪದೋಷವಿಲ್ಲದೆ ಒಡನುಡಿದರು. ಮಹಾರಾಜರ ಈ ಮಾತುಗಳನ್ನು ಕೇಳಿ ಪಂಡಿತನು ಗದಗದನೆ ನಡುಗಿದನು. ಮಹಾರಾಜರ ಸರ್ವಸಾಕ್ಷಿತ್ವದ ಅನುಭವವು ಅವನಿಗೆ ಬಂದುಹೋಯಿತು. ಅವನ ಗರ್ವವೆಲ್ಲ ಒಂದೇ ಉಸಿರಿಗೆ ಸುರ್ರನೆ ಇಳಿದುಹೋಗಲು, ಮುಂದೇನು ಮಾತಾಡಬೇಕೆಂಬುದು ತಿಳಿಯದ್ದರಿಂದ ಅವನು ದಿಙ್ಮೂಢನಾಗಿ ಕುಳಿತನು. ಹೀಗೆ ಪಂಡಿತನು ಹತಬುದ್ಧನಾಗಿ ಅತ್ಯಂತ ವ್ಯಸನದಲ್ಲಿ ಬಿದ್ದಿರುವದನ್ನು ಕಂಡು ಮಹಾರಾಜರು ಕನಿಕರಪಟ್ಟು ನುಡಿದರೇನಂದರೆ—ಪಂಡಿತರೇ, ಪರನಿಂದೆಯು ಪಾಪಕರವು; ಇದು ಈಗ ನಿಮ್ಮಂಥ ಪಂಡಿತರ ಲಕ್ಷ್ಯದಲ್ಲಿ ಬಾರದೆ ಹೋಗಿರುವದು. ಯಾರ ಹೃದಯದಲ್ಲಿ ನಿಂದಾರೂಪವಾದ ದೋಷವು ಇರುವದೋ ಅವರ ಹೃದಯದಲ್ಲಿ ಸುಖಸಮಾಧಾನಗಳು ಇಲ್ಲವೆಂದು ತಿಳಿಯಿ

ಬೇಕು. ಸರ್ವತ್ರದಲ್ಲಿ ಭಗವಂತನ ವ್ಯಾಪ್ತಿಯಿದ್ದದರಿಂದ ತಿಳಿದವರು ಯಾರ ನಿಂದೆಯನ್ನೂ ಮಾಡಲಾರರು. ನೀವು ಪಂಡಿತರೆಂದು ಅನ್ನಿಸಿಕೊಳ್ಳುತ್ತೀರಿ; ಆದರೆ ಮಾಯಾ ವ್ಯವಹಾರದ ಅರಿವು ಮಾತ್ರ ನಿಮಗಾಗಿಲ್ಲ; ಅದು ತಿಳಿಯುವವರೆಗೆ ನಿಮ್ಮ ಸ್ಥಿತಿಯು ಹೀಗೆಯೇ ಎಂದು ತಿಳಿಯಬೇಕು. ಈಗಿನ ಬ್ರಾಹ್ಮಣ ಸ್ತ್ರೀಪುರುಷರಲ್ಲಿ ವಿಷಯಲೋಲುಪತೆಯು ಹೆಚ್ಚಲಿಕ್ಕೆ ಈ ಅವಿದ್ಯೆಯೇ ಕಾರಣವಾಗಿರುತ್ತದೆ. ಬ್ರಾಹ್ಮಣತ್ವವು ಶಾಸ್ತ್ರಾಧ್ಯಯನದಲ್ಲಿರುವದಿಲ್ಲ; ಬ್ರಹ್ಮತ್ವವನ್ನು ತಿಳಿಯುವದರಲ್ಲಿರುತ್ತದೆ. ಈ ಬ್ರಹ್ಮತ್ವವನ್ನು ನಿಮ್ಮ ತಾಯಿಯು ತಿಳಿಯದ್ದರಿಂದ ವ್ಯಭಿಚಾರಕ್ಕೆ ಗುರಿಯಾದಳು. ಆಕೆಯ ದುಷ್ಕರ್ಮದಿಂದ ಹುಟ್ಟಿದ ನೀವು ಅಜ್ಞಾನದಿಂದ ಮತ್ತಾಗಿ ನಾನು ಪವಿತ್ರನು. ನಾನು ಪುಣ್ಯವಂತನು, ನಾನು ಬ್ರಾಹ್ಮಣನು ಎಂದು ಚಟಚಟದು ಬೀಳುತ್ತಿರುವಿರಿ. ಇದು ಎಷ್ಟು ಅಜ್ಞಾನದ ಮಾತೆಂಬದು ಈಗ ನಿಮಗೇ ಹೊಳೆಯುಹತ್ತಿದೆ. ಆದ್ದರಿಂದ ಒಣಹೆಮ್ಮೆಗೆ ಬೀಳಬಾರದು. ಭಕ್ತಿಮಾರ್ಗದಿಂದ ನಡೆಯಿರಿ ದುರ್ವ್ಯವಹಾರಗಳಲ್ಲಿ ತಿರಸ್ಕಾರವನ್ನು ತಾಳಿರಿ. ನಿಮ್ಮ ತಾಯಿಯಿಂದ ಆದ ಅಪರಾಧವು ಆಗಿಹೋಯಿತು. ಇಂಥ ಅಧಮ ಕೃತಿಗಳಿಂದ ಪಿತೃಗಳು ಲುಪ್ತಪಿಂಡೋದಕಕ್ರಿಯೆಯುಳ್ಳವರಾಗತೊಡಗಿರುವರು............ ಇನ್ನು ಮುಂದಾದರೂ ನಿಮಗೆ ಪಶ್ಚಾತ್ತಾಪವಾಗಿದ್ದರೆ ಈ ಅವಿದ್ಯೆಯನ್ನು ನೀಗಲಾಡುವದಕ್ಕೆ ಪ್ರಖರತರ ವೈರಾಗ್ಯವನ್ನು ಧರಿಸಿರಿ.''

ಮಹಾರಾಜರ ಈ ಉಪದೇಶದಿಂದ ಪಂಡಿತನು ಸ್ವಲ್ಪ ಸಮಾಧಾನವನ್ನು ತಾಳಿದನು. ತನ್ನ ದುರಭಿಮಾನ-ದೊಡ್ಡಸ್ತಿಕೆಗಳ ವಿಷಯವಾಗಿ ಅವನಿಗೆ ತಿರಸ್ಕಾರವುಂಟಾಯಿತು. ಮಹಾರಾಜರು ಸರ್ವಾಂತರ್ಯಾಮಿಗಳಿರುವರೆಂದೂ, ಅವರ ವರ್ತನದ ವಿಷಯವಾಗಿ ರಹಸ್ಯವನ್ನು ತಿಳಿಯದೆ ಹೆಸರಿಡುವದು ಮೂರ್ಖತನವೆಂದೂ ಅವನಿಗೆ ನಂಬಿಗೆಯಾಗಲು ಅವನು ಪಶ್ಚಾತ್ತಾಪದಿಂದ ಅವರಿಗೆ ಶರಣು ಹೋದನು. ಹಾಗು ಅವರ ಸದುಪದೇಶದಿಂದ ಕೃತಾರ್ಥನಾಗಿ ಪರಮವಿರಕ್ತಿಯನ್ನು ತಾಳಿ, ಸ್ವಸ್ಥಳಕ್ಕೆ ಹೋದನು. ಮತ್ತು ಆಮರಣ ಪರ್ಯಂತರ ಮಹಾರಾಜರ ಉಪಾಸನೆಯನ್ನು ಮಾಡುತ್ತ ಅವರ ಕೀರ್ತಿಯ ಪ್ರಸಾರವನ್ನೂ, ಭಕ್ತಿಮಾರ್ಗದ ಅಭಿವೃದ್ಧಿಯನ್ನೂ ಮಾಡಿದನು. ಯಾವ ದಿವಸ ಅವನು ಮಹಾರಾಜರಿಂದ ಜ್ಞಾನದ ರಹಸ್ಯವನ್ನು ತಿಳಿದುಕೊಂಡನೋ, ಆ ದಿವಸವೇ ಅವನು ತನಗಿದ್ದ ಪಂಡಿತ ಎಂಬ ಅಭಿಧಾನವನ್ನು ಕಿತ್ತೊಗೆದನು. ಮುಂದೆ ಅವನು ಎಂದೂ ಪಂಡಿತನೆಂದು ಅನ್ನಿಸಿಕೊಳ್ಳಲಿಲ್ಲ. ಈ ಸಂಗತಿಯನ್ನು ಕೇಳಿ, ಜನರು ದಂಗಾಗಿ ತಮ್ಮ ಪಾಪ

ಕೃತ್ಯಗಳಿಗಾಗಿ ನಾಚಿಕೊಳ್ಳತೊಡಗಿದರು. ಇದರಿಂದ ಜನರಲ್ಲಿ ನೈತಿಕ ಸಾಮರ್ಥ್ಯವು ಬೆಳೆಯಲಿಕ್ಕೆ ಮಾರ್ಗವಾಯಿತು.

## ೬ನೆಯ ಪ್ರಕರಣ.

### ಒಬ್ಬ ಸ್ತ್ರೀಯ ದುಷ್ಕರ್ಮ ಕಥನ.

ಸಜ್ಜನರ ಹೃದಯವು ಬಹು ಕೋಮಲವಿರುವದರಿಂದ ಅವರ ಬಳಿಯಲ್ಲಿ ಹೋದರೆ ತಮಗೆ ಯಾವ ತರದ ಹಿಂಸೆಯೂ ಆಗದೆಂದು ಕೆಲ ಜನ ದುಷ್ಕರ್ಮಪ್ರಿಯಮನುಷ್ಯರು ತಿಳಿಯುವರು. ಸಜ್ಜನರು ಶುದ್ಧಹೃದಯದವರಿಗೆ ಕೃಪೆಮಾಡಿದ ಹಾಗೆ ಅಶುದ್ಧಹೃದಯದವರನ್ನು ಎಂದೂ ಪ್ರೀತಿಸುವದಿಲ್ಲ. ಕೆಲಜನ ಸತ್ಪುರುಷರು ತಮ್ಮ ದರ್ಶನಕ್ಕೆ ಬಂದ ಪಾಪಿಗಳಿಗೆ ಏನನ್ನೂ ಅನ್ನದೆ ತಮ್ಮ ಸಮದೃಷ್ಟಿಯಿಂದ ಅವರನ್ನು ಬ್ರಹ್ಮಭಾವನೆಯಿಂದ ನೋಡಿಬಿಟ್ಟ ಮಾತ್ರದಿಂದ ಆ ಪಾಪಿಗಳು ತನ್ನನ್ನು ಇಂಥ ಸತ್ಪುರುಷರು ಪ್ರೀತಿಸಿದರೆಂದು ಜನರಲ್ಲಿ ಹೇಳಿಕೊಳ್ಳುವರು. ಕೆಲಜನ ಸತ್ಪುರುಷರು ಪಾಪಿಗಳನ್ನು ಎದುರಿಗೆ ನಿಲ್ಲಗೊಡುವದಿಲ್ಲ. ಆದರೆ ಅವರ ಅಂತರಂಗದಲ್ಲಿ ಸರ್ವತ್ರ ಬ್ರಹ್ಮಭಾವನೆಯಿರುತ್ತದೆ. ಬಹಿರಂಗದಲ್ಲಿ ಮಾತ್ರ ಇವರು ಪುಣ್ಯವಂತರು ಇವರು ಪಾಪಿಷ್ಟರು ಎಂಬ ತಾರತಮ್ಯವನ್ನು ವಹಿಸುತ್ತಾರೆ. ಒಟ್ಟಿಗೆ ಹೇಳತಕ್ಕದ್ದೇನಂದರೆ,—ಸತ್ಪುರುಷರು ಪರಿಶುದ್ಧ ಹೃದಯವನ್ನು ನೋಡಿ, ಅನುಗ್ರಹಮಾಡುವರಲ್ಲದೆ ಬೇಡಬಂದವರಿಗೆ ಪಾತ್ರಾಪಾತ್ರ ವಿಚಾರವಿಲ್ಲದೆ ತಮ್ಮ ಕೃಪಾ ಪ್ರಭಾವವನ್ನು ತೋರಿಸುತ್ತ ಹೋಗುವದಿಲ್ಲ. ಆದ್ದರಿಂದ ಸತ್ಪುರುಷರ ಬಳಿಗೆ ಅನುಗ್ರಹಾಪೇಕ್ಷಿಗಳಾಗಿ ಹೋಗತಕ್ಕವರು ಪರಿಶುದ್ಧ ಹೃದಯದಿಂದಲೇ ಹೋಗಬೇಕೆಂಬದನ್ನು ಯಾರೂ ಮರೆಯತಕ್ಕದ್ದಲ್ಲ. ನಮ್ಮ ಚರಿತ್ರನಾಯಕರಂತೂ ದುಷ್ಕರ್ಮಿಗಳಿಗೆ ಬಹಿರಂಗವಾಗಿ ಉಚ್ಚಾಟನೆ ಕೊಟ್ಟು ಬಿಡುತ್ತಿದ್ದರು. ಒಂದು ದಿವಸ ಅವರ ಬಳಿಗೆ ಒಬ್ಬ ಹೆಂಗಸು, ಇಬ್ಬರು ಗಂಡಸರು ಹೀಗೆ ಮೂವರು ದರುಶನಕ್ಕೆ ಬಂದರು. ಅವರು ನೋಡಲಿಕ್ಕೆ ಸಭ್ಯಗೃಹಸ್ಥರಂತೆ ತೋರುತ್ತಿದ್ದರು. ಉಡಿಗೆ-ತೊಡಿಗೆಗಳ ಮೇಲಿಂದ ಅವರ ಶ್ರೀಮಂತಿಕೆಯು ವ್ಯಕ್ತವಾಗುತ್ತಿತ್ತು, ಸಾಯಂಕಾಲದ ಸಮಯ; ಅವರು ಮಹಾರಾಜರ ವಸತಿಸ್ಥಾನ

ವನ್ನು ಪ್ರವೇಶಿಸಿದರು. ಆದರೆ ಆ ದಿವಸ ಮಹಾರಾಜರು ಏಕಾಂತವಾಸದಲ್ಲಿದ್ದದರಿಂದ ಅವರಿಗೆ ದರುಶನವಾಗಲಿಲ್ಲ. ಉಳಿದ ಶಿಷ್ಯರು ಅವರ ಯೋಗಕ್ಷೇಮವನ್ನು ತಕ್ಕೊಂಡರು.

ಮರುದಿನ ಬೆಳಗಾಯಿತು; ಪ್ರಾತರ್ವಿಧಿಯು ನೆರವೇರಿದ ಬಳಿಕ ಮಹಾರಾಜರು ಹೊರಗಿನ ಮಂಚದ ಮೇಲೆ ಬಂದು ಕುಳಿತರು. ಆಗ ದರುಶನಕ್ಕಾಗಿ ನೂರಾರು ಜನರು ಕಾದುಕೊಂಡು ಕುಳಿತಿದ್ದರು. ಒಬ್ಬೊಬ್ಬರೇ ಸರತಿಯಂತೆ ಮಹಾರಾಜರ ಚರಣಗಳ ಮೇಲೆ ಮಸ್ತಕವನ್ನಿಟ್ಟು ಸ್ವಸ್ಥಳಕ್ಕೆ ತೆರಳಹತ್ತಿದರು. ಹೀಗೆ ಆಗುತ್ತ ನಿನ್ನೆ ಸಾಯಂಕಾಲದಲ್ಲಿ ದರುಶನಕ್ಕೆ ಬಂದ ಮೂವರ ಸರತಿಯು ಬಂದಿತು. ಅವರಲ್ಲಿ ಸ್ತ್ರೀಯು ಮೊದಲು ಮಹಾರಾಜರ ಬಳಿಗೆ ಬಂದಳು. ಆಕೆಯು ಇನ್ನು ಚರಣಗಳನ್ನು ಮುಟ್ಟಿ ನಮಸ್ಕರಿಸತಕ್ಕವಳು; ಅಷ್ಟರಲ್ಲಿ ಮಹಾರಾಜರು 'ಹತ್' ಎಂದು ಉಚ್ಚರಿಸಿದರು; ಅದರಿಂದ ಆ ಸ್ತ್ರೀಯು ಬೆದರಿ ದೂರ ಸರಿದು ನಿಂತಳು. ಆಗ ಮಹಾರಾಜರ ಕಣ್ಣುಗಳು ಕೆಂಪಗಾಗಿದ್ದವು. ಕ್ರೋಧವು ಅವರ ಸರ್ವಾಂಗವನ್ನೂ ವ್ಯಾಪಿಸಿದ ಹಾಗೆ ಭಾಸವಾಯಿತು. ಮಹಾರಾಜರಿಗೆ ಈಪರಿ ಸಿಟ್ಟು ಬಂದದ್ದನ್ನು ನೋಡಿ ಅಲ್ಲಿ ಕುಳಿತವರೆಲ್ಲರೂ ಗಾಬರಿಯಾದರು. ಆ ಸ್ತ್ರೀಯಂತೂ ಛಳಿ ಬಂದವರಂತೆ ನಡುಗುತ್ತ, ಮುಂದೆ ತನ್ನ ಗತಿಏನಾಗುವದೋ ಎಂದು ಚಿಂತಿಸತೊಡಗಿದಳು. ಶಿಷ್ಯರು ಚಿತ್ರದಲ್ಲಿಯ ಗೊಂಬೆಗಳಂತೆ ತಟಸ್ಥರಾಗಿ ನಿಂತುಬಿಟ್ಟರು. ಅಲ್ಲಿದ್ದ ಎಲ್ಲ ಜನರೂ ಬಗೆಬಗೆಯ ಕಲ್ಪನೆಗಳನ್ನು ಕಟ್ಟುತ್ತಿರಲು, ಮಹಾರಾಜರು ಮೇಘಗರ್ಜನದೋಪಾದಿಯಲ್ಲಿ ಗಾಂಭೀರ್ಯದಿಂದ ನುಡಿದರೇನಂದರೆ,—"ಚಾಂಡಾಲಿನೀ, ಯಾವ ಮೋರೆಯಿಂದ ನಮ್ಮ ದರುಶನಕ್ಕೆ ಬಂದೆ? ನೀನು ಆಚಂದ್ರಾರ್ಕವಾಗಿ ನರಕದಲ್ಲಿ ಬಿದ್ದರೂ ನಿನ್ನ ಪಾಪಕ್ಷಾಲನವು ಆಗದು! ಹೀಗಿದ್ದು, ನೀನು ನಮ್ಮ ಬಳಿಗೆ ಪುಣ್ಯದ ಫಲವೆನಿಸುವ ಮಕ್ಕಳನ್ನು ಕೇಳಬಂದಿರುವಿಯಾ? ದುಷ್ಟೇ; ಲಗ್ನಮಾಡಿಕೊಂಡ ಗಂಡನಿರುತ್ತಿರಲು, ಪ್ರತ್ಯಕ್ಷ ಅಣ್ಣನನ್ನು ಕೂಡಿಕೊಳ್ಳಲಿಕ್ಕೆ ನಿನಗೆ ತಿಳಿಯಲಿಲ್ಲವೇ? ಈಗ ನಿನ್ನ ಸಂಗಡ ಬಂದವರಿಬ್ಬರಲ್ಲಿ ಒಬ್ಬನು ನಿನ್ನ ವಿವಾಹ ಮಾತ್ರದಿಂದ ಗಂಡನಾದವನೂ, ಇನ್ನೊಬ್ಬನು ನಿನ್ನ ಅಣ್ಣ ಅಲ್ಲ! ಅಲ್ಲ! ಭೋಗಪತಿಯೂ ಆಗಿರುವವರಲ್ಲವೇ? ಕುಲಕಂಟಕಳೇ, ನಿನ್ನಂಥ ಚಾಂಡಾಲಿನಿಯು ಮಕ್ಕಳನ್ನು ಹಡೆದು ಯಾವ ಲೋಕಕ್ಕೆ ಮೂಲವಾಡಬೇಕೆನ್ನುತ್ತೀ; ಪಾಪಿಷ್ಠೇ; ಹೋಗು ಹೋಗು; ಪಶ್ಚಾತ್ತಾಪವಾಗುವ ವರೆಗೆ ನರಕದಲ್ಲಿ ಬಿದ್ದು, ಹೊರಳಾಡು.

ಈ ಮೇರೆಗೆ ಮಹಾರಾಜರು ಅರಳು ಹುರಿದಹಾಗೆ ಅಂದರೆ ಆ ಪಾಪಿಗಳ ಹೃದಯವು ತಲ್ಲಣಿಸುವಹಾಗೆ ಬಡಬಡ ಒಡನುಡಿಯಲು ಅಲ್ಲಿ ಕುಳಿತವರ ಮೈಕೂದಲುಗಳು ನೆಟ್ಟಗಾದವು. ಅವರು ತಮ್ಮ ಮನಸ್ಸಿನಲ್ಲಿ—ಅಹಾ! ಕಲಿಯುಗವು ತನ್ನ ಪ್ರತಾಪವನ್ನು ವ್ಯಕ್ತಗೊಳಿಸಹತ್ತಿತು. ಈ ಸ್ತ್ರೀಯು ಸುಂದರಿಯಾಗಿ ತೋರುವಳು! ಬೆಲೆಯುಳ್ಳ ವಸ್ತ್ರಾಭರಣಗಳಿಂದ ಭೂಷಿತಳಾಗಿರುವಳು. ಶ್ರೀಮಂತ ಮನೆತನದವಳಿರುವಳು. ಆದರೆ ಏನು ಮಾಡಬೇಕು? ಈಕೆಯು ಎಂಥ ದುಶ್ಚರಿತೆಯಾಗಿರುವಳಲ್ಲ? ಹಾಯ್! ಹಾಯ್! ಈ ಹಾಳು ವಿಷಯಭೋಗವು ಎಷ್ಟು ಪ್ರಬಲವಾಯಿತು? ಎಂದು ಅಂದುಕೊಳ್ಳಲಾರಂಭಿಸಿದರು. ಅಷ್ಟರಲ್ಲಿ ಆ ಸ್ತ್ರೀಯ ಉಪಪತಿಯು ಮೆಲ್ಲನೆ ಅಲ್ಲಿಂದ ಕಾಲ್ದೆಗೆದನು. ಆಗ ಮಹಾರಾಜರು—ಕಳ್ಳನು ಓಡಿ ಹೋಗುವನು. ನೀಚಾ ನಿನ್ನ ಭಯಂಕರ ಕೃತ್ಯದಿಂದ ನಿನ್ನ ಸುತ್ತುವರೆದು ಯಮನ ಬಲೆಯು ಪಸರಿಸಿರುವಾಗ ಎಲ್ಲಿಗೆ ಓಡಿ ಹೋಗುವೆ? ಎಂದು ನುಡಿದರು. ಅವನು ತಿರುಗಿ ಸಹ ನೋಡದೆ ಪಲಾಯನಸೂಕ್ತವನ್ನೇ ಪಠಿಸಿದನು.

ಬಳಿಕ ಮಹಾರಾಜರು ಅಲ್ಲಿ ಕುಳಿತವರನ್ನು ಕುರಿತು—ಮಾನವ ದೇಹಧಾರಿಗಳಿರಾ, ನೋಡಿದಿರಾ, ಮನ್ಮಥನ ಆಟವನ್ನು? ನಿಮಗೆ ಭಗವಂತನ ಅಂಜಿಕೆಯು ತಪ್ಪಹತ್ತಿದ್ದರಿಂದ ಪತಂಗ-ದೀಪ ನ್ಯಾಯದಂತೆ ನೀವು ಪಾಪ ಪುಣ್ಯಗಳನ್ನು ಗಣನೆಗೆ ತಾರದೆ ವಿಷಯಗಳ ಕಳವಿಗೆ ಬೀಳುವಿರಿ. ಈ ಸ್ತ್ರೀಯ ಸ್ಥಿತಿಯನ್ನು ನೋಡಿರಿ! ಐಶ್ವರ್ಯದ ಸಂಜೀರಿ ಎಂಥ ಅಧಮ ಕೃತ್ಯವನ್ನು ಮಾಡಿರುವಳು. ಇವಳು ಅನಂತ ಕಾಲ ನರಕಯಾತನೆಯನ್ನನುಭವಿಸಿ ಮುಂದೆ ಶ್ವಾನಯೋನಿಯಲ್ಲಿ ಜನ್ಮತಾಳುವಳು. ಇದು ನಿಶ್ಚಯವೆಂದು ತಿಳಿಯಿರಿ. ಯಾರು ಪಾಪಕರ್ಮಗಳಲ್ಲಿ ರತರಾಗುವರೋ ಅವರು ದೇವರ ಅಂಜಿಕೆಯನ್ನು ಬಿಟ್ಟಿರುವರೆಂದು ತಿಳಿಯಬೇಕು. ಅವರು ದೇವಾಜ್ಞೆಯನ್ನು ಮೀರಿರುವರೆಂದು ತಿಳಿಯಬೇಕು. ಅವರಿಗೆ ದೈವದ್ರೋಹಭೂತವು ಬಡಿದಿರುತ್ತದೆಂದು ತಿಳಿಯಬೇಕು. ಅಂಥವರಿಗೆ ಭಗವಂತನ ನ್ಯಾಯಮಂದಿರದಲ್ಲಿ ಶಿಕ್ಷೆಯು ತಪ್ಪದು; ಭಗವತ್ಕೃಪೆಯಿಂದ ಸುಖವನ್ನು ಪಡೆಯಬೇಕನ್ನುವವರು ಇಂಥವರ ನೆರಳಿಗೆ ಸಹ ನಿಲ್ಲಬಾರದು. ಈ ಸ್ತ್ರೀಯನ್ನು ಹೊರದೂಡಿ ಬಿಡಿರಿ, ಕರ್ಮರೂಪೀ ಪ್ರವಾಹದಲ್ಲಿ ತೇಲಿ ಹೋಗುತ್ತಿರುವ ಈ ಮೂರ್ಖರಿಗೆ ಪಶ್ಚಾತ್ತಾಪರೂಪೀ ಒಡ್ಡಿನ ಆಶ್ರಯವು ಸಿಗುವವರೆಗೆ ಇವರ ಗತಿನಿರೋಧವು ಆಗಲಾರದು.

ಬಳಿಕ ಆ ಸ್ತ್ರೀಯು ಲಜ್ಜೆಯಿಂದ ತಲೆಬಾಗಿಸಿಕೊಂಡು ಮುಂದಿಗೆ ಮುಖವನ್ನು ತೋರಿಸಲಾರದೆ ಅಲ್ಲಿಂದ ಹೊರಹೊರಟಳು. ಆಕೆಯ ಪತಿಯು ಹೆಂಡತಿಯ

ಮೇಲೆಯೂ ಆಕೆಯ ಅಣ್ಣನಮೇಲೆಯೂ ಸಿಟ್ಟು ಬೆಂಕಿಯಾಗಿ ಹೊರಟು ನಿಲ್ಲಲು ಮಹಾರಾಜರು ಅವನನ್ನು ತಡೆದು ಪ್ರಸಂಗೋಚಿತ ವ್ಯವಹಾರಿಕ ಮಾತುಗಳನ್ನು ಹೇಳಿದರು; ಅದರಿಂದ ಅವನು ಸಮಾಧಾನಪಟ್ಟು ದ್ವಿತೀಯ ಲಗ್ನಮಾಡಿಕೊಂಡು ಮಹಾರಾಜರಲ್ಲಿ ಭಕ್ತಿ ವಿಶ್ವಾಸಗಳನ್ನಿಟ್ಟು ನಡೆದು ಕಾಮನಾಪರಿಪೂರ್ತಿಯನ್ನು ಮಾಡಿಕೊಂಡನು. ಆ ಸ್ತ್ರೀಯು ಎತ್ತೋ ಹೋಗಿಬಿಟ್ಟಳು. ಮುಂದ ಆಕೆಯ ಗತಿಯೇನಾಯಿತೆಂಬದನ್ನು ಮಹಾರಾಜರೇ ಬಲ್ಲರು!

ಹೀಗೆ ಮಹಾರಾಜರು ಕಲಿಯುಗದ ವಿಷಯಲಂಪಟರ ಕೀಳಾಚರಣೆಯನ್ನು ಬೈಲಿಗೆಳೆಯುತ್ತ ಜಗತ್ತಿನಲ್ಲಿ ಪಾಪವು ಹ್ಯಾಗ ಹಬ್ಬುತ್ತಿರುತ್ತದೆಂಬದನ್ನು ತೋರಿಸುತ್ತಿರಲು ಒಂದುದಿನ ಒಬ್ಬ ಸುವಾಸಿನಿಯು ಮಹಾರಾಜರ ದರುಶನಕ್ಕ ಬಂದಳು. ಆಕೆಗೆ ಹೊಟ್ಟೆಶೂಲಿಯು ವಿಶೇಷವಾಗಿತ್ತು. ಎಷ್ಟೋ ಔಷಧೋಪಚಾರಗಳು ಆಗಿ ಹೋದವು. ಆದರೂ ಅವಳ ಶೂಲಿಯು ಕಡಿಮೆಯಾಗಿದ್ದಿಲ್ಲ. ಅದ್ದರಿಂದ ಅವಳು ಮಹಾರಾಜರಿಗೆ ಶರಣು ಬಂದಿದ್ದಳು. ಸರ್ವಜ್ಞರಾದ ಮಹಾರಾಜರು ಆಕೆಯನ್ನು ಕಂಡಕೂಡಲೇ ಆಕೆಯನ್ನು ನಮಸ್ಕಾರ ಮಾಡಗೊಡದೆ ಹಾಗೆಯೇ ನಿಲ್ಲಿಸಿ—"ನೀನು ಹೊಟ್ಟೆಶೂಲಿ ಹೋಗಬೇಕೆಂದು ನಮ್ಮ ಬಳಿಗೆ ಬಂದಿರುವಿಯಷ್ಟೇ; ನೀನು ದುಷ್ಕರ್ಮಗಳ ದುಡಿಯಲ್ಲಿ ಸಿಕ್ಕಿಬಿದ್ದರೂ ಗಂಡನನ್ನು ನಿಂದಿಸುವ ದುಷ್ಟಗುಣವು ನಿನ್ನಲ್ಲಿರುವದು. ಅದ್ದರಿಂದ ನಿನಗೆ ಗಂಡನು ಬೇಕೋ ಅಥವಾ ಹೊಟ್ಟೆ ಶೂಲಿಯು ಹೋಗುವದು ಬೇಕೋ ಹೇಳು; ಹೊಟ್ಟೆಶೂಲಿಯು ಹೋಗುವದೇ ಬೇಕಾದರೆ ನೀನು ಗಂಗಾಭಾಗೀರಥಿಯಾಗುವಿ. ಸೌಭಾಗ್ಯವನ್ನು ಕಾಯ್ದುಕೊಂಡಿರಬೇಕೆಂದರೆ ಹೊಟ್ಟೆಶೂಲಿಯನ್ನು ಅನುಭವಿಸಲು ಸಿದ್ಧಳಾಗು ಎಂದು ನುಡಿದರು. ಆಗ ಆ ಸ್ತ್ರೀಯು ನಾಚಿಕೊಂಡು ಪಶ್ಚಾತ್ತಾಪಯುಕ್ತಳಾಗಿ ಸೌಭಾಗ್ಯವೇ ಇರಲೆಂದು ಕೋರಿಕೊಂಡಳು. ಆಕೆಯ ಅಂತಃಕರಣವು ಪರಿಶುದ್ಧವಾದದ್ದನ್ನು ಕಂಡು ಮಹಾರಾಜರು ಸಂತೋಷಪಟ್ಟು—ನೀನು ಗಂಡನೊಡನೆ ಪ್ರೇಮದಿಂದ ನಡೆದರೆ ನಿನ್ನ ಶೂಲಿಗೆ ಅದೇ ಔಷಧವಾಗುವದು ಎಂದು ಹೇಳಿದರು. ಅದರಂತೆ ಆ ಸ್ತ್ರೀಯು ಆಚರಿಸಲು ಮಹಾರಾಜರ ಅಭಯದಂತೆ ಅವಳ ಹೊಟ್ಟೆ ಶೂಲಿಯು ಸ್ವಲ್ಪ ದಿನಗಳಲ್ಲಿ ನಾಮಶೇಷವಾಯಿತು.




## ೭. ನೆಯ ಪ್ರಕರಣ.

### ಕೆಲವು ಅಮಾನುಷ ಸಂಗತಿಗಳು.

ಮಹಾರಾಜರು ಈಶ್ವರ ಸ್ವರೂಪರಿರುವರೆಂಬ ಅನುಭವವು ಅವರ ಸೇವಕರಿಗೆ ಬಂದು ಹೋಯಿತು. ಅವರ ಸರಳತನ, ದ್ವಂದ್ವಾತೀತವೃತ್ತಿ, ಲೋಕಕಲ್ಯಾಣಾಪೇಕ್ಷೆ ಇವುಗಳನ್ನು ಜನರು ಮನನ ಮಾಡತೊಡಗಿದರು. ಹೀಗಿರಲು, ಒಂದು ದಿನ ಅಕ್ಕಲಕೋಟೆಯ ಕಾರಭಾರಿಯು ಮಹಾರಾಜರ ಬಳಿಗೆ ಬಂದು ವಿನಯದಿಂದ ನಮಸ್ಕರಿಸಿ ಕುಳಿತನು. ಆತನು ಮಹಾರಾಜರ ಪೂರ್ಣ ಭಕ್ತನಿದ್ದನು, ಅವನಿಗೆ ಆ ಮಹಾತ್ಮರ ಮಹಿಮೆಗಳು ಅವಗತವಾಗಿದ್ದವು; ಆದ್ದರಿಂದ ಏನು ಕೆಲಸ ಮಾಡಬೇಕಾದರೂ ಅವನು ಮಹಾರಾಜರಿಗೆ ತಿಳಿಸದೆ ಮಾಡುತ್ತಿದ್ದಿಲ್ಲ. ರಾಜಕರಣವೇ ಆಗಲಿ, ಗೃಹಕೃತ್ಯವೇ ಆಗಲಿ ಮಹಾರಾಜರನ್ನು ಕೇಳಿಯೇ ಮಾಡುವ ಪದ್ಧತಿಯನ್ನು ಆ ಕಾರಭಾರಿಯು ಇಟ್ಟುಕೊಂಡಿದ್ದನು. ಆದ್ದರಿಂದ ಅವನು ಈ ದಿವಸ ಒಂದು ಕೆಲಸಕ್ಕಾಗಿ ಮಹಾರಾಜರ ಅಪ್ಪಣೆ ಪಡೆಯಬೇಕೆಂದು ಬಂದಿದ್ದನು.

ಕಾರಭಾರಿಯ ತಾಯಿಯು ಕಾಶಿಯಲ್ಲಿದ್ದಳು. ಪ್ರತ್ಯಕ್ಷ ವಿಶ್ವೇಶ್ವರಸ್ವರೂಪರಾದ ಮಹಾರಾಜರು ಅಕ್ಕಲಕೋಟೆಯಲ್ಲಿರುತ್ತಿರಲು, ಅವರನ್ನು ತಿಳಿಯಲಾರದೆ ಆ ಹೆಣ್ಣು ಮಗಳು ಗಂಗಾತಟಾಕವನ್ನು ಬಯಸಿ ಕಾಶೀವಾಸವನ್ನು ಮಾಡಿದ್ದಳು. ಎಲ್ಲರಿಗೂ ಸತ್ಪುರುಷರ ಐಶ್ವರರೂಪವು ಗೋಚರಿಸದು. ಪುಣ್ಯಶಾಲಿಗಳಾದವರು ಮಾತ್ರ ಅವರನ್ನು ಕಂಡು ಹಿಡಿಯುವರು. ಉಳಿದವರು ಸಜ್ಜನರನ್ನು ತಮ್ಮಂತೆ ಮನುಷ್ಯರೆಂದೇ ಭಾವಿಸುವರಲ್ಲದೆ, ಅವರಲ್ಲಿದ್ದ ದೈವೀ ತೇಜಸ್ಸನ್ನು ಕಂಡು ಹಿಡಿಯಲಾರರು. ಇದರಂತೆ ಪ್ರಸ್ತುತದ ಕಾರಭಾರಿಯ ತಾಯಿಯು ಸ್ವಾಭಾವಿಕವಾದ ಅಜ್ಞಾನದಿಂದ ಮಹಾರಾಜರನ್ನು ಉಪೇಕ್ಷಿಸಿದ್ದಳು. ಆದರೆ ಆಕೆಯ ಮಗನು ಮಾತ್ರ ಮಹಾರಾಜರಲ್ಲಿ ಒಳ್ಳೇ ವಿಶ್ವಾಸವುಳ್ಳವನಾಗಿದ್ದನು. ಇರಲಿ. ಕಾಶಿಯಲ್ಲಿರುವಾಗ ಕಾರಭಾರಿಯ ತಾಯಿಗೆ ಬಂದು ದೊಡ್ಡ ಬೇನೆಯು ಗಂಟುಬಿದ್ದಿತು, ಆದರಿಂದ ಅವಳಿಗೆ ಜೀವಿತವು ಸಾಕುಸಾಕೆನಿಸಿತು; ಬರಬರುತ್ತ

ಬೇನೆಯು ಕಸುವು ಹೆಚ್ಚಾದ್ದರಿಂದ ಅವಳ ಶಕ್ತಿಯೆಲ್ಲ ಕ್ಷೀಣಿಸಿಹೋಯಿತು. ಈಗ ಸಾಯುವಳೋ ಇನ್ನೊಂದು ಗಳಿಗೆಗೆ ಸಾಯುವಳೋ ಎಂಬಹಾಗೆ ಆದಳು. ಮಾತಾಡಲಿಕ್ಕೆ ಸಹ ತ್ರಾಣವಿಲ್ಲದಾಯಿತು, ಆಗ ಅವಳು ಪುತ್ರಮೋಹದಿಂದ ವ್ಯಾಪ್ತಳಾಗಿ ಮಗನಿಗೆ ತನ್ನ ಅತ್ಯವಸ್ಥೆಯನ್ನು ತಾರಿನಿಂದ ತಿಳಿಸಿದಳು. ಕಾಶಿಯಂಥ ಅರಿಯದ ಪ್ರದೇಶದಲ್ಲಿ ತಾಯಿಗೆ ಬಂದ ಆಪತ್ತನ್ನು ತಿಳಿದು ಆ ಮಾತೃಭಕ್ತ ಕಾರಭಾರಿಯು ಕಳವಳಿಸಿದನು—"ನಮಾತುಃ ಪರದೈವತಂ" ಎಂದು ಶ್ರುತಿಯಿರುವದರಿಂದ ಅಂತ್ಯಕಾಲದಲ್ಲಿ ತಾಯಿಯ ಬಳಿಗೆ ಹೋಗದಿದ್ದರೆ ತಾನು ಕೃತಘ್ನನಾಗುವೆನೆಂದು ಭಾವಿಸಿ ಆತನು ಕಾಶಿಗೆ ಹೋಗುವದನ್ನು ನಿಶ್ಚಯಿಸಿದನು. ಮತ್ತು ತನ್ನ ಈ ಪ್ರಯಾಣಕ್ಕೆ ಮಹಾರಾಜರ ಅನುಜ್ಞೆಯನ್ನು ಪಡೆಯಬೇಕೆಂದು ಮೇಲೆ ಹೇಳಿದಂತೆ ಅವರ ಬಳಿಗೆ ಬಂದು ಪ್ರಸ್ತಾಪವನ್ನು ತೆಗೆದನು. ಆದರೆ ಮಹಾರಾಜರು ಅವನ ಮಾತಿಗೆ ಕೆಲ ಹೊತ್ತಿನವರೆಗೆ ಉತ್ತರವನ್ನೇ ಕೊಡದೆ ಬಳಿಕ ಅವನ ಮನಸ್ಸಿನ ವಿರುದ್ಧವಾಗಿ "ನೀನು ಹೋಗುವ ಕಾರಣವಿಲ್ಲ" ಎಂದು ನುಡಿದು ಬಿಟ್ಟರು. ಕಾರಭಾರಿಗೆ ದೊಡ್ಡ ಗಂಡಾಂತರವೇ ಬಂದಹಾಗಾಯಿತು. ಇತ್ತ ತಾಯಿಯ ನಿರ್ಯಾಣ; ಇತ್ತ ಮಹಾರಾಜರ ಆಜ್ಞೆ ಇವೆರಡರ ಮಧ್ಯದಲ್ಲಿ ಸಿಕ್ಕು ಅವನು ಜಿಬ್ಬೆಯಾಗತೊಡಗಿದನು. ಮಹಾರಾಜರು ತನಗೆ ಯಾಕೆ ಬೇಡೆಂದರು ಎಂಬದರ ಕಾರಣವು ಅವನಿಗೆ ಹೊಳೆಯದಾಯಿತು. ಆದರೆ ಅವನಿಗೆ ಮಹಾರಾಜರಲೀಲೆಗಳು ಗೊತ್ತಿದ್ದದ್ದರಿಂದ ಅವನು ಮೌನದಿಂದ ನಮಸ್ಕರಿಸಿ ಮನೆಗೆ ಹೊರಟು ಹೋದನು. ಈ ಮಾತಿಗೆ ತಿಂಗಳೆರಡುತಿಂಗಳು ಕ್ರಮಿಸಿದವು. ತಾಯಿಯಿಂದ ಯಾವ ವರ್ತಮಾನವೂ ಬಾರದ್ದರಿಂದ ಅವನು ಚಡಪಡಿಸುತ್ತಿದ್ದನು. ಅಷ್ಟರಲ್ಲಿ ತಾಯಿಗೆ ಗುಣವಾದಬಗ್ಗೆ ವಾರ್ತೆಯು ಬಂದಿತು. ಅದರಿಂದ ಕಾರಭಾರಿಗೆ ಹೇಳಕೂಡದಷ್ಟು ಸಂಭ್ರಮವಾಯಿತು.

ಈ ಮಾತಿಗೆ ನಾಲ್ಕಾರು ತಿಂಗಳುಗಳು ಕ್ರಮಿಸಿದ ಬಳಿಕ ಮತ್ತೆ ತಾಯಿಗೆ ಜಡ್ಡಾದ ಬಗ್ಗೆ ಕಾರಭಾರಿಗೆ ತಾರು ಬಂತು. ಹಿಂದಿನಂತೆ ಈ ಸಾರೆಯೂ ಆತನಿಗೆ ಮಹಾರಾಜರು ಅಪ್ಪಣೆ ಕೊಡಲಿಲ್ಲ. ಆದರೂ ಆ ಕಾರಭಾರಿಯು ಗುರುಭಕ್ತಿಯ ವಿಶೇಷದಿಂದ ಮನಸ್ಸಿಗೆ ಸಮಾಧಾನವ ತಂದುಕೊಂಡು ಕಾಶಿಗೆ ಪ್ರಯಾಣ ಬೆಳಿಸಲಿಲ್ಲ. ಈ ಎರಡನೆಯ ಸಾರೆಯೂ ಕಾರಭಾರಿಯ ತಾಯಿಗೆ ಗುಣವಾಯಿತು. ಮುಂದೆ ಈ ಮಾತಿಗೆ ಮತ್ತೊಂದು ವರುಷವು ಕ್ರಮಿಸಿತು. ಆಗ ಪುನಃ ತಾಯಿಗೆ ಜಡ್ಡಾದ ಬಗ್ಗೆ ತಾರು ಬರಲು ಕಾರಭಾರಿಯು ಸಣ್ಣಮೋರೆ ಮಾಡಿಕೊಂಡು

ಶ್ರೀಗಳವರ ಎದುರಿಗೆ ಬಂದು ನಿಂತನು. ಆಗ ಮಹಾರಾಜರು ಅನ್ಯಶಬ್ದಗಳನ್ನು ಚ್ಚರಿಸದೆ ತಟ್ಟನೆ ''ಹೋಗು'' ಎಂದು ನುಡಿದು ಬಿಟ್ಟರು. ಮಹಾರಾಜರ ಮುಖದಿಂದ ಇಷ್ಟು ಅಪ್ಪಣೆಯು ಹೊರಟದ್ದೊಂದೇ ತಡ; ಕಾರಭಾರಿಯು ಪ್ರಯಾಣ ಬೆಳಸಿಬಿಟ್ಟನು. ಅವನು ಕೆಲವು ದಿವಸಗಳಲ್ಲಿ ಕಾಶಿಯನ್ನು ಮುಟ್ಟಿ ಬೇನೆಯಿಂದ ಬಳಲುತ್ತಿರುವ ತಾಯಿಗೆ ಪೊಡಮುಟ್ಟನು. ಹಿಂದಕ್ಕೆ ಎರಡುಸಾರೆ ಜಡ್ಡು ಆದಾಗ ತಾರು ಮಾಡಿದರೂ ಬಾರದೆ ಇದ್ದ ಮಗನು ಈ ಸಾರೆ ಬಂದದ್ದಕ್ಕೆ ಆ ಹೆಣ್ಣುಮಗಳಿಗೆ ತುಂಬಾ ಸಂತೋಷವಾಯಿತು. ಆವಳು ಎದ್ದು ಕುಳಿತುಕೊಳ್ಳಲಿಕ್ಕೆ ಶಕ್ತಿ ಸಾಲದೆ ಮಲಗಿದಲ್ಲಿಯೇ ಮಗನನ್ನು ಕುರಿತು—''ಅಪ್ಪಾ ಮಗೂ, ಈಗ ಎರಡು ಸಾರೆ ಜಡ್ಡಾಗಿ ಸತ್ತುಸತ್ತು ಉಳಿದೆನು. ಆಗ ನೀನು ಯಾಕೆ ಬರಲಿಲ್ಲ?

ಮಗ:—ತಾಯಿಯೆ, ಆಗ ನೀನು ಸಾಯುವ ಯೋಗವಿಲ್ಲದ್ದರಿಂದ ಮಹಾರಾಜರು ಅಪ್ಪಣೆ ಕೊಡಲಿಲ್ಲ. ಈ ಸಾರೆ ಕೇಳಿದ ಕೂಡಲೆ ಕೊಟ್ಟರು. ಏನಾಗುವದೋ ನೋಡಬೇಕು.

ತಾಯಿ:—ಮಹಾರಾಜರು ಭವಿಷ್ಯಜ್ಞಾನಿಗಳಿರುವರೇನು?

ಮಗ:—ಅವ್ವಾ, ಏನು ಹೇಳಲಿ? ಮಹಾರಾಜರು ಸಾಕ್ಷಾತ್ ಪರಮೇಶ್ವರರಿರುತ್ತಾರೆ. ಅವರಿಗೆ ತಿಳಿಯದ್ದು ಯಾವದಿರುವದು? ನೀನು ಇತ್ತ ಬಂದಬಳಿಕ ಮಹಾರಾಜರ ಪ್ರಖ್ಯಾತಿಯು ಬಹಳವಾಗಿರುವದು. ಅವರ ಅದ್ಭುತ ಸಾಮರ್ಥ್ಯವನ್ನು ತಿಳಿಯುವದು ನಮ್ಮಂಥ ಪಾಮರರಿಗೆ ಅಸಾಧ್ಯವಾಗಿರುವದು.

ತಾಯಿ:—ಅಪ್ಪಾ ಮಗನೇ, ಹೀಗೇನು? ಆ ಮಹಾತ್ಮರನ್ನು ಬಿಟ್ಟು ನಾನು ಇಲ್ಲಿಗೆ ವ್ಯರ್ಥವಾಗಿ ಬಂದೆನು. ಇಲ್ಲಿಗೆ ಬಂದಂದಿನಿಂದ ಹವೆಯು ತಡೆಯದ ಮೂಲಕ ಒಂದಿಲ್ಲೊಂದು ಬೇನೆಯಿಂದ ಬಳಲುತ್ತಿರುವೆನು. ನಿನ್ನಿಂದ ಸುಮ್ಮನೇ ದುಡ್ಡು ಮಾತ್ರ ಖರ್ಚು ಮಾಡಿಸಿದಹಾಗಾಯಿತು.

ಈ ಮೇರೆಗೆ ಆ ತಾಯಿ ಮಕ್ಕಳಿಬ್ಬರ ಸಂಭಾಷಣವು ಬಹಳಹೊತ್ತಿನವರೆಗೆ ನಡೆದು ಆ ಮುದುಕೆಯು ಕಣ್ಣು ತುಂಬಾ ನೀರು ತಂದಳು. ಕಾರಭಾರಿಯು ಸಮಯೋಚಿತ ವಚನಗಳಿಂದ ತಾಯಿಯನ್ನು ಸಂತೈಸಿದನು. ಬಳಿಕ ೮-೧೦ ದಿನಗಳು ಕಳೆಯುತ್ತಿರಲು ಬೇನೆಯು ಹೆಚ್ಚಾಯಿತು. ಆಗ ಮುದುಕೆಯು ಮಹಾರಾಜರ ಸ್ಮರಣ ಮಾಡುತ್ತ ಇಹಲೋಕದ ಯಾತ್ರೆಯನ್ನು ಮುಗಿಸಿದಳು. ಕಾರಭಾರಿಯು ಆಕೆಯ ಔರ್ಧ್ವದೇಹಿಕ ಕರ್ಮಗಳನ್ನು ನೆರವೇರಿಸಿಕೊಂಡು ಅಕ್ಕಲಕೋಟೆಗೆ ಬಂದು ಮಹಾರಾಜರ ಸನ್ನಿಧಾನದಲ್ಲಿ ನಮಸ್ಕರಿಸಿದನು. ಆಗ ಮಹಾ

ರಾಜರು ಸುಮ್ಮನೆ ಕಣ್ಣು ಮುಚ್ಚಿಕೊಂಡು ಕುಳಿತಿದ್ದರು. ಕಾರಭಾರಿಯುಬಂದು ನಮಸ್ಕರಿಸಲು ಒಮ್ಮೆಲೆ ಕಣ್ಣು ತೆರೆದು ಬುದ್ಧಿ ಪೂರ್ವಕವಾಗಿ—"ಕಾರಭಾರಿಗಳೇ, ನಿಮ್ಮ ತಾಯಿಗೆ ಹೇಗಿರುವದು?" ಎಂದು ಕೇಳಿದರು. ಆಗ ಕಾರಭಾರಿಯು ಕಿಂಚಿತ್‌ವಿಷಾದ ಭಾವದಿಂದ—ಮಹಾರಾಜ, ನನ್ನ ತಾಯಿಯು ಪರಂಧಾಮಕ್ಕೆ ಹೋದಳು, ಎಂದು ನುಡಿದನು. ಕಾರಭಾರಿಯ ಮಾತುಕೇಳಿ ಮಹಾರಾಜರು ನಕ್ಕು—ನಿಮ್ಮ ತಾಯಿಯಿಂದ ನಿಮಗೇನಾದರೂ ಅನುಭವವು ಸಿಕ್ಕಿತೋ ಎಂದು ಕೇಳಿದರು. ಆಗ ಕಾರಭಾರಿಯು ಎಚ್ಚತ್ತು, ಮಹಾರಾಜರೇ, ತಮ್ಮ ಅಗಾಧ ಮಹಿಮೆಯನ್ನು ತಿಳಿಯುವದು ದುಸ್ತರವಾಗಿದೆ. ನಮ್ಮ ತಾಯಿಯು ತಮ್ಮ ಪ್ರಭಾವವನ್ನು ಕೇಳಿ ಪಶ್ಚಾತ್ತಾಪಪಟ್ಟಳು. ಮನುಷ್ಯರಾದ ನಮಗೆ ಎಷ್ಟು ಸಂಗತಿಗಳು ಅನುಭವಕ್ಕೆ ಬಂದರೂ ಮನಸ್ಸಿನ ನಿರ್ಧಾರವೇ ಆಗುವದಿಲ್ಲ. ನಮ್ಮ ತಾಯಿಯ ನಿರ್ಯಾಣದ ಈ ಪ್ರಸಂಗದಲ್ಲಿ ನನಗೆ ಬಹಳ ಅನುಭವ ಬಂದಿರುತ್ತದೆ. ಎಂದು ನುಡಿದನು. ಬಳಿಕ ಮಹಾರಾಜರು ಅವನಿಗೆ ಪ್ರಸಂಗೋಚಿತ ಸದ್ಬೋಧವನ್ನು ಮಾಡಿದರು. ಅದು ಏನಂದರೆ:—

"ಕಾರಭಾರಿಗಳೇ, ಸರ್ವತ್ರದಲ್ಲಿ ಭಗವದ್ಭಾವನೆಯುಂಟಾದ ಹೊರತು ಎಲ್ಲಿ ಹೋದರೂ ಮನಸ್ಸಿಗೆ ಸಮಾಧಾನವು ಸಿಗುವದಿಲ್ಲ. ಸಜ್ಜನರ ಸಹವಾಸದಿಂದ ಭಗವತ್‌ಸ್ವರೂಪವನ್ನು ತಿಳಿದುಕೊಂಡು ಅದನ್ನು ನಡೆವಳಿಕೆಯಲ್ಲಿ ತರುವವರೇ ಧನ್ಯರು. ಸಜ್ಜನರು ಈ ಮಹತ್ ಕಾರ್ಯವನ್ನು ನೆರವೇರಿಸುವದಕ್ಕಾಗಿ ಅಂದರೆ ಪ್ರಾಣಿಗಳಿಗೆ ಭಗವತ್‌ಸ್ವರೂಪವನ್ನು ತಿಳಿಸುವದಕ್ಕಾಗಿ ಹುಟ್ಟಿಬಂದಿರುತ್ತಾರೆ. ನಿಜವಾಗಿ ಸಜ್ಜನರಿಗೆ ಶರಣಾಗತರಾದವರಿಗೆ ಇದರ ಹೊರತು ಇನ್ಯಾತರ ಅಪೇಕ್ಷೆಯೂ ಇರುವದಿಲ್ಲ. ಈಗ ನಿಮ್ಮ ತಾಯಿ ಸತ್ತದ್ದಕ್ಕೆ ನಿಮಗೆ ವ್ಯಸನವಾಗಿದೆ. ಇನ್ನು ಮುಂದೆ ನೀವು ಸತ್ತರೆ, ನಿಮ್ಮ ಮಕ್ಕಳಿಗೆ ವ್ಯಸನವಾಗುವದು. ಹೀಗೆಯೇ ಈ ವ್ಯಸನ ಪರಂಪರೆಯು ಎಲ್ಲಿಯವರೆಗೆ ಸತ್ಯಸ್ವರೂಪದ ಜ್ಞಾನವಾಗಿಲ್ಲವೋ ಅಲ್ಲಿಯವರೆಗೆ ಸಾಗತಕ್ಕದ್ದೇ ಸರಿ! ಆದ್ದರಿಂದ ನೀವು ನಿಮ್ಮ ಜನ್ಮವನ್ನು ಸತ್ಸಮಾಗಮದಿಂದ ಧನ್ಯವಾಗ ಮಾಡಿರಿ."

ಈ ಮೇರೆಗೆ ಮಹಾರಾಜರು ಮಾತನಾಡಿ ಒಮ್ಮೆಲೆ ಸುಮ್ಮನಾದರು. ಕೆಲ ಹೊತ್ತು ಸುಮ್ಮನಿದ್ದು, ಮತ್ತೇನೋ ಮಾತಾಡಬೇಕೆನ್ನುವಷ್ಟರಲ್ಲಿ ಯಾರೋ ಹೊಸಬರು ದರುಶನಕ್ಕೆ ಬಂದರು. ಆದ್ದರಿಂದ ಪ್ರಸ್ತುತ ಬೋಧಪ್ರಸಂಗವು ಅಷ್ಟಕ್ಕೇ ನಿಂತಿತು. ಕಾರಭಾರಿಯು ಮಹಾರಾಜರ ಭವ್ಯಮೂರ್ತಿಯನ್ನು ಧ್ಯಾನಿ

ಸುತ್ತ, ಅವರ ಅಗಾಧ ಲೀಲೆಗಳಿಗೆ ಕೌತುಕಪಡುತ್ತ ಮನೆಯ ದಾರಿ ಹಿಡಿದನು.

೨. ಒಮ್ಮೆ ಒಬ್ಬ ಪೋಸ್ಟಲ್ ಸುಪರಿಂಟೆಂಡೆಂಟಸಾಹೇಬನು ಮಹಾರಾಜರ ದರುಶನಕ್ಕೆ ಬಂದಿದ್ದನು. ಆವನು ತನ್ನ ರಜೆಯು ಅವಧಿಯು ಮುಗಿಯುವ ವರೆಗೆ ಮಹಾರಾಜರ ಬಳಿಯಲ್ಲಿದ್ದನು. ಕೆಲಸದ ಮೇಲೆ ಹೋಗಲು ಇನ್ನೊಂದು ದಿನ ಅವಧಿಯು ಉಳಿದಿರುವಾಗ ಆವನು ಮಹಾರಾಜರ ಸನ್ನಿಧಿಗೆ ಹೋಗಿ—"ಮಹಾರಾಜ, ನನ್ನ ರಜೆಯು ತೀರಿತು. ನಾನು ಕೆಲಸದ ಮೇಲೆ ಹಾಜರಾಗಬೇಕಾಗಿದೆ. ಈ ದಿನ ಮಧ್ಯಾಹ್ನದ ರೈಲುಬಂಡಿಗೆ ಹೊರಡುತ್ತೇನೆ, ಅಪ್ಪಣೆಯಾಗಬೇಕು" ಎಂದು ಕೇಳಿಕೊಂಡನು. ಆಗ ಮಹಾರಾಜರು ಥಟ್ಟನೆ "ನದಿಯು ಹೊರಚಲ್ಲಿದೆ ಹೋಗಬೇಡ" ಎಂದು ಉತ್ತರ ಕೊಟ್ಟರು. ಆ ಉತ್ತರದಿಂದ ಸಾಹೇಬನಿಗೆ ನಗೆ ಬಂದಿತು. ಆಗ ಅವನು— "ಮಹಾರಾಜ, ನದಿಯು ಹೊರಚಲ್ಲಿದರೆ, ನಾನೇಕೆ ಹೋಗಬಾರದು? ನದಿಗೂ ನನಗೂ ಸಂಬಂಧವೇನು? ನಾನೇನು ನದಿ ದಾಟಬೇಕಾಗಿದೆಯೋ? ನನಗೆ ಹೊರಡಲಪ್ಪಣೆ ಕೊಡಬೇಕು" ಎಂದು ಪುನಃ ಕೇಳಿಕೊಂಡನು. ಅದಕ್ಕೆ ಮಹಾರಾಜರು "ಸಂಬಂಧವಿದೆ" ಎಂದು ನುಡಿದು ಸುಮ್ಮನಾದರು. ಅವನೊಡನೆ ಹೆಚ್ಚು ಮಾತುಗಳನ್ನಾಡಲಿಲ್ಲ. ಸಾಹೇಬನು ಬಹಳ ಹೊತ್ತಿನ ವರೆಗೆ ಆಲೋಚಿಸಿದನು. ಆದರೆ ಅವನಿಗೆ ಅದರ ಗೂಢವು ತಿಳಿಯಲಿಲ್ಲ. ಮರುದಿನ ಅವನು ಕೆಲಸದ ಮೇಲೆ ಹಾಜರಾಗಬೇಕಾದ್ದರಿಂದ ನೌಕರಿಯ ಪರಾಧೀನತೆಯಿಂದ ಮನಸ್ಸಿನಲ್ಲಿ ಹೀಗೆ ಆಲೋಚಿಸಿದನು— "ನಾನು ಈ ದಿನ ರೈಲಿಗೆ ಹೋಗದಿದ್ದರೆ, ನಾಳಿಗೆ ಹೊತ್ತಿಗೆ ಸರಿಯಾಗಿ ಕೆಲಸದ ಮೇಲೆ ಹಾಜರಾಗಲಿಕ್ಕಾಗುವದಿಲ್ಲ. ಇದರಿಂದ ನನ್ನ ನೌಕರಿಗೆ ಹಾನಿ ಬಂದೀತು. ಮಹಾರಾಜರು ತಮ್ಮ ಸ್ವಭಾವಕ್ಕನುಸರಿಸಿ ಬೇಡವೆನ್ನುವರು. ಆದರೆ ಅವರ ಮಾತಿನಂತೆ ನಡೆದರೆ, ದೊಡ್ಡ ಹಾನಿಗೆ ಗುರಿಯಾಗುವ ಹೊತ್ತು ಬರುವದು. ಈಗ ಹೊರಟೇ ತೀರುವದು ಉಚಿತವು."

ಈ ಪ್ರಕಾರ ಯೋಚಿಸಿ, ಆ ಸಾಹೇಬನು ಮಹಾರಾಜರಿಗೆ ಮೌನದಿಂದ ಪೊಡಮಟ್ಟು, ಅಲ್ಲಿಂದ ಕಾಲ್ದೆಗೆದನು. ಮಹಾರಾಜರು ಅವನನ್ನು ನೋಡಿ, ನಕ್ಕರು ಮಾತ್ರ. ಸಾಹೇಬನು ತನಗುಚಿತವಾದ ವಾಹನವನ್ನು ಹತ್ತಿಕೊಂಡು ಸಮೀಪದಲ್ಲಿರುವ ಸ್ಟೇಶನ್ನಿಗೆ ಬಂದನು. ಆದರೆ ಮುಂದೆ ತಾಸೆರಡು ತಾಸುಗಳಲ್ಲಿ "ಕೃಷ್ಣಾನದಿಯ ಮಹಾಪೂರದಿಂದ ಪೂಲಿನ ಮೇಲೆ ಬಂಡಿಯನ್ನು ಬಿಡಲಿಕ್ಕಾಗುವದಿಲ್ಲೆಂಬ ತಂತಿಯು ಆ ಸ್ಟೇಶನ್ನಿಗೆ ಬಂದಿತು. ಆ ಸಂಗತಿಯನ್ನು ಕೇಳಿ

ಸಾಹೇಬನು ಚಕಿತನಾದನು. ಮಹಾರಾಜರ ಮಾತಿನ ಅರ್ಥವು ಆಗ ಅವನಿಗೆ ಹೊಳೆಯಿತು. ಮಾಡುತ್ತಾನೇನು? ಅವನು ತನ್ನ ಮೂರ್ಖತನಕ್ಕೆ ಬಹಳವಾಗಿ ಪಶ್ಚಾತ್ತಾಪಪಟ್ಟನು. ಬಳಿಕ ಅವನು ಆ ದಿವಸವನ್ನೆಲ್ಲ ಅಡವಿಯ ಆ ಸ್ಟೇಶನದಲ್ಲಿ ಉಪವಾಸವ್ರತದಿಂದ ಕಳೆದು, ಮರುದಿನ ಹೊತ್ತುತಪ್ಪಿಸಿ ಬಂದ ಬಂಡಿಯನ್ನೇರಿ, ತನ್ನ ಊರಿಗೆ ಹೊರಟುಹೋದನು. ಅಂದಿನಿಂದ ಅವನು ಮಹಾರಾಜರನ್ನು ದೇವರಂಶೆಯೋ ಭಾವಿಸಿದ್ದನು; ಮತ್ತು ಮೇಲಿಂದ ಮೇಲೆ ಅವರ ದರ್ಶನವನ್ನು ತಕ್ಕೊಳ್ಳುತ್ತ ಅವರ ಶಿಷ್ಯಕೋಟಿಯಲ್ಲಿ ಪ್ರವಿಷ್ಟನಾದನು.

೩. ಆಳಂದಿಯಲ್ಲಿ ನರಸಿಂಹಸರಸ್ವತಿಗಳೆಂಬ ಒಬ್ಬ ಪ್ರತಿಷ್ಠಿತಯತಿಗಳಿದ್ದರು. ಅವರು ಯೋಗಮಾರ್ಗದಲ್ಲಿ ಪ್ರವೀಣರಿದ್ದರು. ಅವರ ಯೋಗಸಾಮರ್ಥ್ಯದಿಂದ ಅವರನ್ನು ಸಿದ್ಧಿಗಳು ಆಶ್ರಯಿಸಿದ್ದವು. ಆ ಸಿದ್ಧಿಯ ಬಲದಿಂದ ಅವರು ತಮಗೆ ಶರಣು ಬಂದವರ ಕಾಮನೆಗಳನ್ನು ಪೂರ್ಣಮಾಡುತ್ತಿದ್ದರು. ಆದ್ದರಿಂದ ಯತಿಗಳ ಪ್ರಸಿದ್ಧಿಯು ಸರ್ವತ್ರದಲ್ಲಿಯೂ ಪ್ರಸರಿಸಿತು. ಸಾವಿರಾರು ಜನರು ಯತಿಗಳ ಮುಂದೆ ಕೈಕಟ್ಟಿಕೊಂಡು ನಿಲ್ಲುತ್ತಿದ್ದರು. ಬುಭುಕ್ಷಿತ ವರ್ಗವು ಅನ್ನದ ನಿಧಿಯನ್ನು ಕಂಡು ಧಾವಿಸುವಂತೆಯೂ, ಸಕ್ಕರೆಯ ಚೀಲವನ್ನು ಇರುವೆಗಳು ಆಶ್ರಯಿಸುವಂತೆಯೂ ಯತಿಗಳನ್ನು ಬಹುಜನ ಕಾಮುಕರು ಆಶ್ರಯಿಸಿದರು. ಯಾವ ಕಾಲದಲ್ಲಿಯೇ ಆಗಲಿ, ವಿಷಯ ಭೋಗವು ಮನುಷ್ಯಮಾತ್ರರಿಗೆ ಅತ್ಯಂತ ಪ್ರಿಯವಾಗಿರುವದು. ಈ ಕಲಿಯುಗದಲ್ಲಂತೂ ಅದು ವಿಶೇಷವಾಗಿರುವದು; ಅಂಥ ಪ್ರಿಯವಾದ ಭೋಗಸುಖವು ಸಿಗುತ್ತದೆಂದ ಬಳಿಕ ಸರ್ವರೂ ಆ ಕಡೆಗೆ ಧಾವಿಸುವದರಲ್ಲಿ ಆಶ್ಚರ್ಯವಿಲ್ಲ. ಆದರೆ ನಿಜವಾದ ಸಜ್ಜನರು ಈ ಅಸ್ಥಿರವಾದ ಭೋಗಸುಖವನ್ನು ತಿರಸ್ಕರಿಸುವರು. ಮತ್ತು ತಮ್ಮ ಬಳಿಗ ಶರಣು ಬಂದವರಿಗೆ ಈ ಮಾಯಾ ವ್ಯವಹಾರಗಳ ಮಿಥ್ಯಾಸ್ವರೂಪವು ತಿಳಿಯುವಂತೆ ಬೋಧಿಸುವರು. ಮನುಷ್ಯನ ಇತಿ ಕರ್ತವ್ಯತೆಯು ಜ್ಞಾನವಾಗಬೇಕಾದರೆ, ನಿಜವಾದ ಸಜ್ಜನರ ಸಂಗವೇ ಬೇಕು. ಇರಲಿ;

ನರಸಿಂಹಸರಸ್ವತಿಗಳವರ ಸಿದ್ಧಿಪ್ರಭಾವದಿಂದ ಜನರು ಆತ್ಮಸುಖವನ್ನು ಮರೆತುಬಿಟ್ಟರು. ಜನರ ಕಾಮನೆಗಳನ್ನು ಪೂರೈಸುವದರಲ್ಲಿ ಸ್ವಾಮಿಗಳಿಗೂ ಹೊತ್ತು ಸಾಲದಾಯಿತು. ಮತ್ತು ಅವರನ್ನು ಯಾಚಿಸುವದರಲ್ಲಿ ಜನರಿಗೂ ಹೊತ್ತು ಸಾಲದಾಯಿತು. ಈ ಮೇರೆಗೆ ಯತಿಗಳ ಪ್ರಸ್ಥವು ಬೆಳೆಯಲು ಜನರು ಅವರನ್ನು ಪ್ರತ್ಯಕ್ಷ ದೇವರೆಂದೇ ಭಾವಿಸಿದರು. ಯಾರಾದರೂ ತಮಗೆ ಹತ್ತು

ರೂಪಾಯಿಗಳನ್ನು ಕೊಟ್ಟರೆ, ಅವರನ್ನು ದೇವರೆಂದು ತಿಳಿಯಲಿಕ್ಕೆ ಹಿಂದುಮುಂದು ನೋಡದ ಈಗಿನ ಜನರು, ನರಸಿಂಹಸರಸ್ವತಿಗಳಂಥ ಯತಿಗಳು ಸಿದ್ಧಿಯ ಬಲದಿಂದ ಬೇಕಾದ ಆಟಗಳನ್ನು ಆಡುತ್ತಿರಲು, ಅವರನ್ನು ದೇವರೆಂದು ಭಾವಿಸದೆ ಇರುವರೇ? ಮಕ್ಕಳಿಲ್ಲದವರಿಗೆ ಮಕ್ಕಳು, ರೋಗಿಗಳಿದ್ದವರು ನಿರೋಗಿಗಳು, ಬಡವರಿದ್ದವರು ಐಶ್ವರ್ಯವಂತರು ಆಗ ತೊಡಗಿದರು. ಅಂದಬಳಿಕ ಕೇಳುವದೇನು? ಮೂರು ಲೋಕಗಳಲ್ಲಿಯೂ ನರಸಿಂಹಸರಸ್ವತಿಗಳವರ ಯಶೋದುಂದುಭಿಯು ಮೊಳಗುತ್ತದೇನೋ ಎಂಬಂತೆಭಾಸವಾಗತೊಡಗಿತು.

ಈ ರೀತಿಯಾಗಿ ಸರ್ವತೋಮುಖದಿಂದ ಬಹುಮಾನವು ದೊರೆಯಹತ್ತಲು, ಸ್ವಾಮಿಗಳವರ ಅಹಂಭಾವವು ಕುಡಿಯಿಟ್ಟಿತು. ಯಾವನು ಇನ್ನೂ ಜ್ಞಾನಿಯಾಗಿಲ್ಲವೋ ಮತ್ತು ಯಾವಾತನಿಗೆ ಪರಬ್ರಹ್ಮಸ್ವರೂಪದ ರಹಸ್ಯವು ತಿಳಿದಿಲ್ಲವೋ, ಆ ಮನುಷ್ಯನು ಷಡ್ವಿಕಾರಗಳ ಎಳತಕ್ಕೆ ಸಿಗತಕ್ಕವನೇ ಸರಿ. ಅದರಂತೆ ಪ್ರಸ್ತುತದ ಯತಿಗಳಾದರೂ ಆ ವಿಕಾರಗಳ ಬಲಿಗೆ ಬಿದ್ದರು. ಅವರು ತಮ್ಮಲ್ಲಿದ್ದ ಶಕ್ತಿಯಿಂದ ತಾವೇ ಮೋಹಿತರಾಗಿ, ಜಗತ್ತಿನಲ್ಲಿ ತಮಗಿಂತಲೂ ಶ್ರೇಷ್ಠರು ಇನ್ನಾರೂ ಇರುವದಿಲ್ಲೆಂದು ಭಾವಿಸತೊಡಗಿದರು. ಅನುಷ್ಠಾನ ಹಾಗು ಯೋಗಸಾಧನಗಳಿಂದ ಸಿದ್ಧಿಯನ್ನು ಸಂಪಾದಿಸಿದವರ ಸ್ಥಿತಿಯು ಹ್ಯಾಗಿರುತ್ತದೆಂದು ಈ ಯತಿಗಳನ್ನು ನೋಡಿದರೆ ಒಡೆದು ಕಾಣತೊಡಗಿತು. ಹೀಗಿರಲು, ಒಂದು ದಿನ ಯತಿಗಳು ನಮ್ಮ ಚರಿತ್ರನಾಯಕರ ದರುಶನಕ್ಕೆ ಬಂದರು. ಆಗ ಆ ಯತಿಗಳ ವೈಭವವು ಹೇಳಲಶಕ್ಯವಾಗಿತ್ತು. ಅವರನ್ನು ನೂರಾರು ಜನ ಶಿಷ್ಯರು ಓಲೈಸುತ್ತಿದ್ದರು. ಎಷ್ಟೋ ಜನರು ಅವರ ಮೇಣೆಯನ್ನು ಹೊರಲು ಹಾತೊರೆಯುತ್ತಿದ್ದರು. ಎಷ್ಟೋ ಜನರು ಅವರಿಗೆ ಬೀಸಣಿಕೆಗಳಿಂದ ಗಾಳಿಯನ್ನು ಹಾಕುತ್ತಿದ್ದರು. ಎಷ್ಟೋ ಜನರು ಮುಗಿಬೀಳುವ ಜನರನ್ನು ಹಿಂದಕ್ಕೆ ಸರಿಸಿ ದಾರಿಯನ್ನು ಮಾಡುತ್ತಿದ್ದರು. ಕೆಲವರು ಅವರ ನಾಮ ಗರ್ಜನೆಯನ್ನು ಮಾಡುತ್ತ ಅವರ ಜಯಘೋಷಗಳಿಂದ ದಿಗ್‌ತಟಗಳನ್ನು ತುಂಬಿಸುತ್ತಿದ್ದರು. ಈ ಮೇರೆಗೆ ಬಹು ಜನ ಪರಿವೃತರಾದ ಯತಿಗಳು ಮಂಗಲವಾದ್ಯಗಳ ಘೋಷದೊಡನೆಅಕ್ಕಲಕೋಟೆಯನ್ನು ಪ್ರವೇಶಿಸಿ, ಮಹಾರಾಜರಿದ್ದ ಮನೆಯನ್ನು ಹೊಕ್ಕರು.

ಆಗ ಮಹಾರಾಜರು ದಿಗಂಬರ ಸ್ಥಿತಿಯಿಂದ ಒಂದು ಹುಲ್ಲು ಚಾಪೆಯ ಮೇಲೆ ಕುಳಿತುಕೊಂಡಿದ್ದರು. ಬಳಿಯಲ್ಲಿ ಲೌಕಿಕಾಡಂಬರದ ಯಾವ ಪದಾರ್ಥಗಳೂ ಇದ್ದಿಲ್ಲ. ಇಬ್ಬರು ಮೂವರು ಶಿಷ್ಯರು ಮಾತ್ರ ಅವರ ಪ್ರಸನ್ನ ಮುಖ

ವನ್ನು ನೋಡುತ್ತ ಮೌನದಿಂದ ಕುಳಿತುಕೊಂಡಿದ್ದರು. ಇಂಥ ಸ್ಥಿತಿಯಲ್ಲಿ ಮೇಲೆ ಹೇಳಿದಂತೆ ಯತಿಗಳು ಬರಲು, ಮಹಾರಾಜರು ಅವರನ್ನು ಕಂಡಕೂಡಲೆ "ಏನೋ ನೀನು ಸೂಳೆಯನ್ನು ಬಿಡುತ್ತೀಯೋ ಇಲ್ಲವೋ" ಎಂದು ಪ್ರಶ್ನಮಾಡಿದರು. ಮಹಾರಾಜರ ಈ ಪ್ರಶ್ನೆಯಿಂದ ಯತಿಗಳು ಬೆದರಿದರು. ಆಗ ಅವರಲ್ಲಿ ಪಶ್ಚಾತ್ತಾಪವುಂಟಾಯಿತು. ಕೂಡಲೆ ಅವರು ಮಹಾರಾಜರಿಗೆ ಅಭಿವಂದಿಸಿ, "ಮಹಾರಾಜ, ಬಿಡುವ ಪ್ರಯತ್ನದಲ್ಲಿದ್ದೇನೆ; ಅದಕ್ಕೆ ತಮ್ಮ ಅನುಗ್ರಹವೇ ಬೇಕು" ಎಂದು ನುಡಿದರು. ಯತಿಗಳ ಗರ್ವವು ಒಂದೇ ಪ್ರಶ್ನೆಗೆ ಇಳಿದದ್ದನ್ನು ನೋಡಿ, ಮಹಾರಾಜರು ಸಮಾಧಾನಪಟ್ಟರು. ಬಳಿಕ ಅವರು ತಮ್ಮ ಶಿಷ್ಯರಿಂದ ಬೇರೆ ಆಸನವನ್ನು ತರಿಸಿ ಅದರ ಮೇಲೆ ಯತಿಗಳಿಗೆ ಕೂಡ್ರ ಹೇಳಿದರು. ಯತಿಗಳಾದರೂ ದೀನಭಾವದಿಂದ ಮಹಾರಾಜರ ಬಳಿಯಲ್ಲಿ ಕುಳಿತುಕೊಂಡರು. ಮಹಾರಾಜರ ಸಾತ್ವಿಕ ತೇಜಸ್ಸನ್ನೂ ಅವರ ನಿರಭಿಮಾನ ವೃತ್ತಿಯನ್ನೂ ಅವರ ವಿಷಯ ವಿರಕ್ತತೆಯನ್ನೂ ಕಂಡು ಯತಿಗಳು ಮನಸ್ಸಿನಲ್ಲಿಯೇ ಹಣ್ಣಾದರು, ಅವರಿಗೆ ತಮ್ಮ ವೃತ್ತಿಯು ತಿರಸ್ಕರಣೀಯವಾಗಿ ತೋರಿತು. ತಾನು ಇಷ್ಟು ಲೋಕಪೂಜ್ಯನಾಗಿದ್ದರೂ ವ್ಯರ್ಥವೆಂಬ ತಿಳುವಳಿಕೆಯು ಅವರ ಹೃದಯದಲ್ಲಿ ಸ್ಪಷ್ಟವಾಗಿ ಮೂಡಿತು. ಆ ಕೂಡಲೆ ಅವರು ಮಹಾರಾಜರ ಚರಣಗಳನ್ನು ಗಟ್ಟಿಯಾಗಿಹಿಡಿದು—"ಮಹಾರಾಜ, ನಾನು ಅಜ್ಞಾನಿಯು; ನನಗೆ ಏನೂ ತಿಳಿಯುವದಿಲ್ಲ. ನಾನು ಕೇವಲ ಪತಿತನಿದ್ದೇನೆ; ಆದರೆ ಪತಿತಪಾವನರಾದ ನಿಮ್ಮ ಅಡಿದಾವರೆಗಳ ದರುಶನವು ನನಗೆ ಇಂದು ಲಭಿಸಿದ್ದರಿಂದ ನಾನು ಧನ್ಯನಾದೆನು. ನನ್ನನ್ನು ಹಾದಿಗೆ ಹಚ್ಚುವ ಭಾರವು ತಮ್ಮನ್ನೇ ಕೂಡಿದೆ" ಎಂದು ಪ್ರಾರ್ಥಿಸಿದರು.

ಯತಿಗಳು ಹೀಗೆ ಪ್ರಾರ್ಥಿಸುತ್ತಿರಲು, ಇತ್ತ ನೆರೆದ ಜನರು ಮನಸ್ಸಿಗೆ ಬಂದಹಾಗೆ ಕಲ್ಪನೆಗಳನ್ನು ಮಾಡತೊಡಗಿದರು. ಮಹಾರಾಜರು ಯತಿಗಳಿಗೆ "ಸೂಳೆಯನ್ನು ಬಿಡುವದಿಲ್ಲವೇ" ಎಂದು ಕೇಳಿದ್ದನ್ನು ಜನರು ಅಪಾರ್ಥವಾಗಿ ಮಾಡಿಕೊಂಡು ನರಸಿಂಹ-ಸರಸ್ವತಿಗಳವರಿಗೆ ದೋಷಕೊಡಹತ್ತಿದರು. ಮೊದಲು ಯಾರು ಯತಿಗಳನ್ನು ದೇವರೆಂದು ಭಜಿಸುತ್ತಿದ್ದರೋ ಅವರೇ ಈಗ ಯತಿಗಳನ್ನು ದೂಷಿತ ದೃಷ್ಟಿಯಿಂದ ನೋಡತೊಡಗಿದರು. ಯತಿಗಳ ಶಿಷ್ಯರು ನಾಚಿಕೊಂಡರು. ಜನರು ತಮ್ಮ ತಮ್ಮೊಳಗೇ ಕದ್ದು-ಕದ್ದು ಏನೇನೋ ಮಾತಾಡತೊಡಗಿದರು. ಈ ಸ್ಥಿತಿಯಲ್ಲಿ ಕೆಲವು ನಿಮಿಷಗಳು ಕಳೆಯಲು, ಮಹಾರಾಜರು ಜನರ ದುರ್ಭಾವನೆಯನ್ನು ತಿಳಿದೋ ಎಂಬಂತೆ ಯತಿಗಳನ್ನು ಕುರಿತು ಸುರಸವಾಗಿ ಬೋಧಿಸತೊಡಗಿದರು.

ಆಗ ಅವರು ಹೇಳಿದ್ದೇನಂದರೆ—"ಯತಿಗಳೇ, ನೀವು ದೊಡ್ಡವರಿರುವಿರಿ; ನಿಮ್ಮ ಅಧಿಕಾರವು ದೊಡ್ಡದಿರುವದು. ಆದ್ದರಿಂದಲೇ ನೀವು ಬಂದಕೂಡಲೆ ಸೂಳೆಯನ್ನು ಬಿಡುವದಿಲ್ಲವೇ ಎಂದು ಪ್ರಶ್ನೆ ಮಾಡಿದ್ದಕ್ಕೆ ಅದರ ಗರ್ಭಿತಾರ್ಥವನ್ನು ಸರಿಯಾಗಿ ತಿಳಿದುಕೊಂಡಿರಿ. ಆದರೆ ನಿಮ್ಮ ಪರಿವಾರವು ಮಾತ್ರ ಅದರ ಅರ್ಥವನ್ನು ಸರಿಯಾಗಿ ತಿಳಕೊಂಡಿಲ್ಲವೆಂಬಂತೆ ಕಾಣುತ್ತದೆ, ಸಜ್ಜನರು ಸಿದ್ಧಿಗಳ ಉಪಭೋಗವನ್ನು ತಕ್ಕೊಳ್ಳುವದಿಲ್ಲ. ನೀವು ಹಾಗೆ ಮಾಡದ್ದರಿಂದ ನಿಮ್ಮನ್ನು ಈ ರೀತಿಯಾಗಿ ಕೇಳಬೇಕಾಯಿತು. ಲೌಕಿಕದಲ್ಲಿ ತುಚ್ಛವಾದ ಅಂದರೆ ಹೀನತೆಯನ್ನು ಕೊಡುವ ಸೂಳೆಯರ ಸಂಗದಿಂದ ಹ್ಯಾಗೆ ಲೌಕಿಕರ ಗೌರವಕ್ಕೆ ಕೊರತೆ ಒರುವದೋ ಹಾಗೆ ಪಾರಮಾರ್ಥಿಕರು ಸಿದ್ಧಿಗಳನ್ನು ಪಯೋಗಿಸಿಕೊಳ್ಳುತ್ತ ಅವುಗಳಲ್ಲಿಯೇ ಲೋಲುಪರಾದರೆ ಅವರ ಸತ್ವವು ಹೊರಟು ಹೋಗುವದು; ಆದ್ದರಿಂದ ನಿಮ್ಮಂಥವರು ಹೀಗೆ ಸಿದ್ಧಿಗಳ ಬೆನ್ನ ಹತ್ತಿ ಕುಣಿದಾಡಬಾರದು ಅವು ಪಾರಮಾರ್ಥಿಗಳಿಗೆ ಅಂಜಿಕೊಂಡು ದೂರದಲ್ಲಿಯೇ ಇರಬೇಕೇ ಹೊರತು ಅವುಗಳ ಸಂಪರ್ಕವು ನಿಜವಾದ ಪಾರಮಾರ್ಥಿಗಳಿಗೆ ತಕ್ಕದ್ದಲ್ಲ. ಈ ಸಿದ್ಧಿಗಳು ಜ್ಞಾನಮಾರ್ಗಕ್ಕೆ ಬಂಧೆಯನ್ನು ತರುವವು."

ಈ ಮೇರೆಗೆ ಮಹಾರಾಜರು ಮಾತನಾಡಿ ಯತಿಗಳೊಡನೆ ಏಕಾಂತ ಮಂದಿರಕ್ಕೆ ಹೊರಟು ಹೋದರು. ಅಲ್ಲಿ ಆ ಮಹಾತ್ಮರು ಯತಿಗಳಿಗೆ ಏನು ಉಪದೇಶಿಸಿದರೆಂಬದು ಅವರಿಗೇ ಗೊತ್ತಲ್ಲದೆ ಅನ್ಯರಿಗೆ ತಿಳಿಯದು. ಬಳಿಕ ಯತಿಗಳು ಹೊರಗೆ ಬಂದರು; ಅವರ ಬೆನ್ನ ಹಿಂದಿನಿಂದ ಮಹಾರಾಜರೂ ಬಂದರು. ಯತಿಗಳ ಮುಖದಲ್ಲಿ ಉಲ್ಲಸಿತ ಭಾವವು ವ್ಯಕ್ತವಾಗುತ್ತಿತ್ತು. ಅನಂತರ ಯತಿಗಳು ಮಹಾರಾಜರನ್ನು ನಮಸ್ಕರಿಸಿ ಪರಿವಾರದೊಡನೆ ಬಂದ ದಾರಿಯಿಂದ ಹೊರಟು ಹೋದರು. ಮಹಾರಾಜರ ಸದುಪದೇಶದಿಂದ ಅಲ್ಲಿ ನೆರೆದವರಲ್ಲಿ ಯತಿಗಳ ವಿಷಯಕವಾಗಿ ಉತ್ಪನ್ನವಾಗಿದ್ದ ಸಂಶಯವು ನಾಶವಾಯಿತು. ಸಾಧುಗಳ ಲಕ್ಷಣವನ್ನೂ ಸಿದ್ಧಿಯ ಸಂಪಾದಕರ ಲಕ್ಷಣಗಳನ್ನೂ ತಿಳಿದು ಜನರು ತುಂಬಾ ಸಂತೋಷಪಟ್ಟರು.

ಇತ್ತ ಯತಿಗಳು ಆಳಂದಿಯನ್ನು ಮುಟ್ಟಿದನಂತರ ಸಿದ್ಧಿಯ ಆಡಂಬರವನ್ನು ಬಿಟ್ಟು ವಿಠ್ಠಲನ ನಾಮ ಗಾಯನದಲ್ಲಿ ಮಗ್ನರಾದರು. ಮತ್ತು ಬ್ರಹ್ಮ ಚಿಂತನದಲ್ಲಿ ಕಾಲ ಕಳೆಯಹತ್ತಿ ಸ್ವಲ್ಪ ದಿವಸಗಳಲ್ಲಿಯೇ ಈ ನಿಸ್ಸಾರವಾದ ಜಗತ್ತಿನಲ್ಲಿ ಸಾರವಾವುದೆಂಬದನ್ನು ಅನುಭವದಿಂದ ಗುರ್ತಿಸಿದರು. ಆ ಬಳಿಕ ಅವರು ತಮ್ಮ ಬಳಿಗೆ ಬಂದವರಿಗೆ ಜ್ಞಾನೋಪದೇಶವನ್ನು ಮಾಡಹತ್ತಿದರಲ್ಲದೆ ಹಾಳು

ವ್ಯಾಮೋಹವನ್ನು ಬೆಳೆಸುವ ವಿಷಯಕಾಮನೆಗಳನ್ನು ಪೂರ್ಣಪಡಿಸುವ ಭರಕ್ಕೆ ಬೀಳಲಿಲ್ಲ.

ಪ್ರಿಯ ವಾಚಕರೇ, ನೋಡಿದಿರಾ, ಸಜ್ಜನರ ಪ್ರಭಾವವನ್ನು! ಲೋಕದಲ್ಲಿ ನಿಜವಾದ ಸಜ್ಜನರಿಗೆ ರಾಜ್ಯವು ಬೇಕಾಗಿಲ್ಲ, ಲಕ್ಷ್ಮಿಯು ಬೇಕಾಗಿಲ್ಲ, ಕೀರ್ತಿಯು ಬೇಕಾಗಿಲ್ಲ; ಗೌರವವು ಬೇಕಾಗಿಲ್ಲ; ಪ್ರತ್ಯಕ್ಷ ಅಷ್ಟಸಿದ್ಧಿಗಳೂ ಬೇಕಾಗಿಲ್ಲ. ಅವರಿಗೆ ಬೇಕಾಗಿದ್ದರೆ ಮಾಯಾವ್ಯವಹಾರಗಳಿಂದ ಪ್ರಾಣಿಗಳನ್ನು ಉದ್ಧಾರಮಾಡುವದೊಂದೇ ಬೇಕಾಗಿರುತ್ತದೆಂದು ಹೇಳಲಾಗುವದು. ಇದೇ ಸಜ್ಜನರ ಮುಖ್ಯ ಲಕ್ಷಣವು; ಈ ಲಕ್ಷಣವು ಮಹಾರಾಜರಲ್ಲಿ ಎಷ್ಟರಮಟ್ಟಿಗೆ ಒಡೆದು ಕಾಣುತ್ತಿತ್ತೆಂಬದನ್ನು ಬರೆದು ತಿಳಿಸುವ ಕಾರಣವಿಲ್ಲ, ಚಾಣಾಕ್ಷರಾದ ನಮ್ಮ ವಾಚಕರು ಅವರ ಲೀಲಾ ಪ್ರಸಂಗಗಳಿಂದ ಸಹಜವಾಗಿ ಗುರ್ತಿಸಿಕೊಳ್ಳಬಹುದು.

## ೮ನೆಯ ಪ್ರಕರಣ.

### ಕಾಮ್ಯಭಕ್ತಿಯ ಮೀಮಾಂಸೆ.

ಬಡೋದಾ ನಗರಿಯಲ್ಲಿ “ವಾಮನಬುವಾ” ಎಂಬ ಒಬ್ಬ ಭಕ್ತನು ಮಹಾರಾಜರಿಗೆ ಅತ್ಯಂತ ಪ್ರಿಯನಿದ್ದನು. ಅವನ ಅಧಿಕಾರವು ದೊಡ್ಡದಿತ್ತು. ಜ್ಞಾನ ವೈರಾಗ್ಯಗಳು ಅವನನ್ನು ಆಶ್ರಯಿಸಲು ಸಮಯವನ್ನು ಕಾಯುತ್ತಿದ್ದವು. ಹೀಗಿರಲು, ಒಮ್ಮೆ ಬುವಾನಿಗೆ ವ್ಯಾಧಿಯು ಪ್ರಾಪ್ತವಾಯಿತು. ಆ ವ್ಯಾಧಿಯಿಂದ ಅವನು ಹೈರಾಣಾದನು. ಚಿತ್ತವು ವ್ಯಗ್ರವಾಯಿತು; ಶರೀರವ್ಯಥೆಯನ್ನು ತಾಳಲಾರದೆ ಅವನು ಮಹಾರಾಜರಿಗೆ ಒಂದು ಪತ್ರವನ್ನು ಬರೆದನು. ೧೫-೨೦ ದಿವಸಗಳಾದರೂ ಪತ್ರಕ್ಕೆ ಮಹಾರಾಜರಿಂದ ಪ್ರತ್ಯುತ್ತರ ಬಾರದ್ದರಿಂದ ಬುವಾನು ಮತ್ತಿಷ್ಟು ದುಃಖಕ್ಕೀಡಾದನು. ಆಗ ಅವನು ತನ್ನ ಮನಸ್ಸಿನಲ್ಲಿ ಯೋಚಿಸಿದ್ದೇನಂದರೆ—“ಮಹಾರಾಜರು ನನ್ನಮೇಲೆ ಅನುಗ್ರಹ ಮಾಡಿ ನನ್ನ ವ್ಯಾಧಿಯ ಉಪಶಮನವನ್ನು ಮಾಡಿಯಾರೆಂದು ಭಾವಿಸಿದ್ದೆನು; ಈ ನನ್ನ ಭಾವನೆಯು ವ್ಯರ್ಥವೆಂದು ತೋರುತ್ತದೆ. ಯಾಕಂದರೆ ಪತ್ರ ಬರೆದು ೧೫-೨೦ ದಿವಸಗಳಾದರೂ

ಮಹಾರಾಜರು ಕಣ್ಣು ಮುಚ್ಚಿಕೊಂಡುಬಿಟ್ಟಿರುವರು ಉಪಾಯವಿಲ್ಲ. ಇನ್ನು ಈ ಶರೀರವ್ಯಥೆಯನ್ನು ಹೀಗೆಯೇ ಎಲ್ಲಿಯವರೆಗೆ ಸಹಿಸಬೇಕು? ನನಗಂತೂ ಅಸಹ್ಯವಾಯಿತು. ಆದ್ದರಿಂದ ಜಲಸಮಾಧಿಯನ್ನು ಹೊಂದಿಬಿಡುವದು ಯೋಗ್ಯವಾಗಿ ತೋರುತ್ತದೆ.''

ಈ ಪ್ರಕಾರ ಬುವಾನು ಆಲೋಚಿಸಿ ಶಕೆ ೧೭೯೮ರ ವೈಶಾಖಶುದ್ಧ ೧೪ಯ ದಿವಸ ಮಧ್ಯರಾತ್ರಿಯಲ್ಲಿ ಮನೆಯನ್ನು ಬಿಟ್ಟನು; ಅವನು ಶರೀರದಮೇಲಿನ ಆಶೆ ತೊರೆದು ಆ ಊರ ಹೊರಗಿರುವ ಸುರಸಾಗರವೆಂಬ ದೊಡ್ಡ ಕೆರೆಗೆ ಹೋದನು. ಇನ್ನು ಅವನು ನೀರಿನಲ್ಲಿ ಹಾರಿಕೊಳ್ಳತಕ್ಕವನು; ಅಷ್ಟರಲ್ಲಿ ಯಾರೋ ಹಿಂದಿನಿಂದ ತೆಕ್ಕೆಬಿದ್ದು ಅವನನ್ನು ಹಿಡಿದರು; ಬುವಾನ ಮೈಕೂದಲುಗಳು ನೆಟ್ಟಗಾದವು; ಎದೆಯು ಧಸ್ಸೆಂದಿತು. ಆಗ ಅವನು ಹೊರಳಿ ನೋಡಲು ಸಾಕ್ಷಾತ್ ಗುರುಮಹಾರಾಜರು ಅವನ ದೃಷ್ಟಿಗೆ ಬಿದ್ದರು. ಈ ಅಪೂರ್ವ ಯೋಗದಿಂದ ಬುವಾನಲ್ಲಿ ಸಾನಂದಾಶ್ಚರ್ಯಗಳು ಏಕ ಕಾಲಕ್ಕೆ ಉದ್ಭವಿಸಿದವು. ಅವನು ಗುರುಚರಣಗಳನ್ನು ಗಟ್ಟಿಯಾಗಿ ಹಿಡಿದು ಕ್ಷಮೆ ಬೇಡಿಕೊಳ್ಳಲಾರಂಭಿಸಿದನು; ಆಗ ಮಹಾರಾಜರು ಅವನನ್ನು ಕುರಿತು ನುಡಿದರೇನಂದರೆ—''ಮೂರ್ಖ, ಇದೇನು ಅಲ್ಲದ ಕೆಲಸಕ್ಕೆ ಉದ್ಯುಕ್ತನಾಗಿರುವೆ? ನಿನ್ನಂಥ ಅಧಿಕಾರ ಸಂಪನ್ನನು ಹೀಗೆ ಆಚರಿಸುವದಕ್ಕೆ ಇಚ್ಛಿಸುವದೆಂದರೆ ಒಂದು ಬಗೆಯಿಂದ ನಮಗೆ ಆಶ್ಚರ್ಯವಾಗುತ್ತದೆ. ಇಂಥ ಕೆಲಸವನ್ನು ಮೂರ್ಖರೂ, ಅಜ್ಞಾನಿಗಳೂ, ಸಹನಶಕ್ತಿ ಇಲ್ಲದ ಸ್ತ್ರೀಯರೂ ಮಾಡುವರು. ನಿನ್ನಂಥ ವಿವೇಕಸಂಪನ್ನನು ಮಾಡಬಹುದೇ? ಇದರಿಂದ ನಿನಗಿನ್ನೂ ವೈರಾಗ್ಯದ ರಹಸ್ಯವು ತಿಳಿದಿಲ್ಲೆಂದು ಅನ್ನಬೇಕಾಗುತ್ತದೆ. ಮೊದಲು ನಿನಗೆ ಕಾಮ್ಯ ಭಕ್ತಿಯ ವಿಷಯವಾಗಿ ಹೇಳುತ್ತೇನೆ ಕೇಳು.

ಲೋಕದಲ್ಲಿ ಜನರು ಬಹುತರವಾಗಿ ಕಾಮನಾ ಪರರಾಗಿಯೇ ದೇವತಾ ಉಪಾಸನೆಯನ್ನಾಗಲಿ, ಸಜ್ಜನರ ಸೇವೆಯನ್ನಾಗಲಿ ಮಾಡುವರು; ಇದು ಕುರುಡಗಣ್ಣಿನಲ್ಲಿ ಮೆಳ್ಳಗಣ್ಣು ಶ್ರೇಷ್ಠವೆಂದು ಹೇಳುವಹಾಗೆ ದೇವಲಂಡತನಕ್ಕಿಂತ ಒಳಿತೆಂದು ಹೇಳಿದರೂ ಇದೇ ಶಾಶ್ವತ ಸುಖಕ್ಕೆ ಸಾಧನವೆಂದು ಹೇಳಲಿಕ್ಕಾಗುವದಿಲ್ಲ. ಆದ್ದರಿಂದ ಕಾಮ್ಯ ಭಕ್ತಿಯು ಮಂದಾಧಿಕಾರಿಗಳಿಗೆ ಮಾತ್ರ ಉಪಯುಕ್ತವಿರುತ್ತದೆ. ಆದ್ದರಿಂದ ನೀನು ನಿನ್ನ ವ್ಯಾಧಿಯ ನಿವಾರಣೆಗೋಸ್ಕರ ನಮಗೆ ಪ್ರಾರ್ಥಿಸಿದ್ದು ಗೌಣವಿರುತ್ತದೆ. ಪ್ರಾರಬ್ಧಕರ್ಮದಂತೆ ಶರೀರಕ್ಕೆ ಸುಖ-ದುಃಖಗಳು ಒದಗುತ್ತಿರುತ್ತವೆ. ವಿವೇಕಿಯಾದವನು ಬಂದದ್ದಕ್ಕೆ ಎದೆಗೊಟ್ಟು ಗಟ್ಟಿಮನಸ್ಸಿನಿಂದ

ಅದನ್ನು ಅನುಭವಿಸಿಯೇ ತೀರಬೇಕು. ಸಂಚಿತವು ಭೋಗದ ವಿನಹಾ ಸರಿದು ಹೋಗುವದಿಲ್ಲ; ಆದ್ದರಿಂದ ಪ್ರಾಜ್ಞರು ಪ್ರಾರಬ್ಧಕ್ಕೆ ಪ್ರತೀಕಾರ ಮಾಡಹೋಗುವದಿಲ್ಲ. ನೀನು ಶರೀರದ ಮೇಲಿನ ಮೋಹವನ್ನು ಬಿಟ್ಟು ಕೆರೆ ಮುಣುಗಲಿಕ್ಕೆ ಬಂದೆನೆಂದು ಅನ್ನಬಹುದು. ಇದು ನಿನ್ನ ಅಜ್ಞಾನವು. ಹಾಗೆ ನೀನು ನಿಜವಾಗಿ ನಿರ್ಮೋಹನಾಗಿದ್ದರೆ ವ್ಯಥೆಯನ್ನು ಸಹಿಸಿಕೊಂಡು ನಿಶ್ಚಲಮನಸ್ಸಿನಿಂದ ಇರುತ್ತಿದ್ದೆ. ದುಃಖಭೋಗಕ್ಕೆ ಹೆದರಿ ನೀನು ನಮ್ಮನ್ನು ಪ್ರಾರ್ಥಿಸಿದೆಯಾದ್ದರಿಂದ ನಿನ್ನಲ್ಲಿ ಶರೀರಾಭಿಮಾನವು ಉಳಿಯಿತೆಂತಲೇ ತಿಳಿಯಬೇಕಾಗುತ್ತದೆ. ಹೀಗೆ ಶರೀರಾಭಿಮಾನವನ್ನು ಉಳಿಸಿಕೊಂಡು ಮಾಡುವ ಭಕ್ತಿಯು ತಾರಕವಾಗಲಾರದು. ದುಃಶಾಸನನು ದ್ರೌಪದಿಯ ಸೀರೆಯನ್ನು ಸೆಳೆಯುವಾಗ್ಗೆ ಆ ಮಹಾಸತಿಯು ಎಡಗೈಯಿಂದ ಸೀರೆಯ ನೀರಿಗೆಗಳ ಗಂಟನ್ನು ಗಟ್ಟಿಯಾಗಿ ಹಿಡಿದುಕೊಂಡು ಬಲಗೈಯೆತ್ತಿ ಪರಮಾತ್ಮನನ್ನು ಕರೆಯುತ್ತಿದ್ದಳು. ಆಗ ಅವಳ ಮನಸ್ಸಿನಲ್ಲಿ "ಈ ಗಂಟು ನನ್ನ ಮರ್ಯಾದೆಯನ್ನು ಸಂರಕ್ಷಣ ಮಾಡುತ್ತದೆ; ಇದು ಬಿಚ್ಚಿ ಹೋದರೆ ನನ್ನ ಮಾನಭಂಗವಾಗುವದು" ಎಂಬ ವಿಚಾರಗಳು ಬಂದು ಅವಳು ಆ ಗಂಟನ್ನು ಹೆಚ್ಚು ಆಸ್ಥೆಯಿಂದ ಸಂರಕ್ಷಿಸುತ್ತಿದ್ದಳು. ಹೀಗೆ ಅವಳು ಎಲ್ಲಿಯವರೆಗೆ ಗಂಟನ್ನು ನಂಬಿಕೊಂಡಿದ್ದಳೋ ಅರ್ಥಾತ್ ದೇಹಾಭಿಮಾನವನ್ನು ಧರಿಸಿದ್ದಳೋ ಅಲ್ಲಿಯ ವರೆಗೆ ಪರಮಾತ್ಮನ ಪ್ರಾಪ್ತಿಯಾಗಲಿಲ್ಲ. ಕಡೆಗೆ ಅವಳು ದೇಹಾಭಿಮಾನವನ್ನು ಬಿಟ್ಟು ಅರ್ಥಾತ್ ಗಂಟನ್ನು ಬಿಟ್ಟು ಎರಡೂ ಕೈಗಳಿಂದ ಪರಮಾತ್ಮನನ್ನು ಭಜಿಸಿದ್ದರಿಂದ ಆ ಕ್ಷಣದಲ್ಲಿ ಪರಮಾತ್ಮನು ಪ್ರಕಟನಾಗಿ ಆ ನೀರಿಗೆಗಳು ಕಳಚುವಷ್ಟರಲ್ಲಿ ಆಕೆಗೆ ಅಕ್ಷಯ್ಯವಸ್ತ್ರದಾನವನ್ನು ಮಾಡಿದನು. ಇದರಿಂದ ಬೋಧವಾಗುವದೇನಂದರೆ— ದೇಹಾಭಿಮಾನವಿಲ್ಲದೆ ಪರಮಾತ್ಮನನ್ನು ಭಜಿಸುವದೇ ಅನನ್ಯಭಕ್ತಿಯು; ಅದೇ ಶ್ರೇಷ್ಠವಾದದ್ದು; ಇನ್ನು ಕಾಮ್ಯಭಕ್ತಿಯ ಗೌಣತ್ವವನ್ನು ಕೇಳು. ಕಾಮ್ಯಭಕ್ತಿಯು ಉಪಾಧಿಯೋಗದಿಂದ ಉಂಟಾಗಿರುತ್ತದೆ. ಯಾವ ಉಪಾಧಿಯಿಂದ ಭಕ್ತಿಯುಂಟಾಗಿರುತ್ತದೆಯೋ ಆ ಉಪಾಧಿಯು ತಪ್ಪಲು ಅದರಿಂದುಂಟಾದ ಭಕ್ತಿಯೂ ನಾಮಶೇಷವಾಗುವದು. ಒಂದು ವೇಳೆ ಆ ಉಪಾಧಿಯ ಮೇಲೂ ಪ್ರೇಮವು ಕಡಿಮೆಯಾದರೂ ಅದರ ಮೂಲಕ ಉಂಟಾಗಿರುವ ಭಕ್ತಿಯು ಹೇಳಹೆಸವಿಲ್ಲದೆ ಹೋಗುವದು. ಒಮ್ಮೆ ಒಬ್ಬ ದೇಶಪಾಂಡೆಯೆಂಬ ಅಡ್ಡ ಹೆಸರಿನ ಗೃಹಸ್ಥನು ನನ್ನ ಬಳಿಗೆ ಬಂದನು. ಅವನು ಸಂತತಿಯ ಇಚ್ಛೆಯಿಂದ ಬಂದದ್ದರಿಂದ ದೈವಯೋಗದಿಂದ ಅವನಿಗೆ ಸಂತತಿಯಾಯಿತು. ಆದರೆ ಈ ಸಂತತಿಯು ಉಪಾ

ಧಿಯು ಅವನಲ್ಲಿ ನಮ್ಮ ವಿಷಯವಾಗಿ ಭಕ್ತಿಯನ್ನುಂಟುಮಾಡಿತು. ಮುಂದೆ ವಿಧಿವಶಾತ್ ಅವನ ಆ ಸಂತತಿಯು ವಿಯೋಗವನ್ನು ಹೊಂದಿತು. ಯಾವ ಸಂತತಿಯ ಯೋಗದಿಂದ ಅವನು ನನ್ನಲ್ಲಿ ಭಕ್ತಿಯನ್ನು ತಾಳಿದ್ದನೋ ಆ ಸಂತತಿಯೇ ಮುಳುಗಿದ ಮೇಲೆ ಅದರ ಜೊತೆಗೆ ಅವನ ಭಕ್ತಿಯೂ ಮುಣುಗಿತು. ಆದ್ದರಿಂದ ಇಂಥವರಿಗೆ ಭಕ್ತರೆಂದು ಕರೆಯಬಹುದೇ? ಕೆಲಸ ತೀರುವವರೆಗೆ ಯಾವನೊಬ್ಬನ ಆಶ್ರಯ ಮಾಡಿ ಕೆಲಸ ತೀರಿದ ಬಳಿಕ ಹೊಳೆಯ ದಾಟಿದ ಬಳಿಕ ಅಂಬಿಗರ ಮಿಂಡರಾಗುವ ಲಂಡರಂತೆ ಕಾಮುಕ ಭಕ್ತರ ಸ್ಥಿತಿಯಿರುತ್ತದೆ. ಈ ಬಗೆಯ ಕಾಮನಾಪರ ಭಕ್ತರು ಬಹು ಜನರು ಬಂದು ಹೋಗಿರುವರು. ಜಾರಿಣೀ ಸ್ತ್ರೀಗೂ ವಿಟಪುರುಷನಿಗೂ ಇರುವ ಸಂಬಂಧದಷ್ಟು ಸಂಬಂಧವು ಇಂಥ ಭಕ್ತರಿಗೂ ದೇವರಿಗೂ ಇರುವದು.

ಒಂದು ವೇಳೆ ಈ ಕಾಮನಾಪರ ಭಕ್ತಿಯನ್ನು ನಿಷ್ಕಾಮದಲ್ಲಿ ಪರ್ಯವಸಾನಪಡಿಸಲಿಕ್ಕೆ ಬರುತ್ತದೆ. ಹ್ಯಾಗೆಂದರೆ,—ದೇವರಲ್ಲಿ ಅಥವಾ ಸಜ್ಜನರಲ್ಲಿ ವಿಶ್ವಾಸ ಹುಟ್ಟಲಿಕ್ಕೆ ನೊದಮೊದಲು ಕಾಮ್ಯಭಕ್ತಿಯು ಕಾರಣವಾಯಿತೆಂದು ತಿಳಿಯೋಣ; ಒಮ್ಮೆ ಸಜ್ಜನರ ದೈವೀಪ್ರಭಾವವು ಅನುಭವಕ್ಕೆ ಬಂದಬಳಿಕ ಹಗಲೆಲ್ಲ ಅವರ ಬಳಿಯಲ್ಲಿ ವಿಷಯಸುಖಗಳನ್ನು ಕೇಳುತ್ತ ಕೂಡ್ರಬಾರದು. ಅವರಲ್ಲಿ ವಿಶ್ವಾಸಕೂಡ್ರಲಿಕ್ಕೆ ಕಾರಣವಾದ ಉಪಾಧಿಯನ್ನು ಮರೆತು ಬಿಟ್ಟು, ವಿಶ್ವಾಸವೊಂದನ್ನೇ ಸ್ಮರಣೆಯಲ್ಲಿಟ್ಟುಕೊಂಡು ನಡೆದರೆ, ಆ ವಿಶ್ವಾಸವೇ ನಿಷ್ಕಾಮಭಕ್ತಿಯಲ್ಲಿ ಸಮಾವೇಶವಾಗುತ್ತದೆ. ಹೀಗೆ ಮಾಡದೆ ಕಡೆತನಕ ಕಾಮನಾಪರಭಕ್ತಿಯಲ್ಲಿ ಕಾಲಕಳೆದರೆ, ಅದರಿಂದ ಪ್ರಯೋಜನವಾಗುವದಿಲ್ಲ.

ಮನುಷ್ಯನು ನಿಷ್ಕಾಮಭಕ್ತಿಯನ್ನು ಆಚರಿಸಿದರೆ, ಸಹಜವಾಗಿ ಭಗವತ್ಕೃಪೆಯು ಅವನ ಮೇಲೆ ಉಂಟಾಗಿ ಅವನ ಬಯಕೆಗಳು ಸ್ವಾಭಾವಿಕವಾಗಿ ಕೈಗೂಡುವವು. ನಿಷ್ಕಾಮಭಕ್ತಿಯ ಭಾರವು ಭಗವಂತನ ಮೇಲೆ ಬಹಳ ಬೀಳುತ್ತದೆ. ಒಡೆಯನ ಸೇವೆಯನ್ನು ಪ್ರತಿಫಲ(ಕೂಲಿ) ತಕ್ಕೊಂಡು ಮಾಡುವದಕ್ಕೂ, ಪ್ರತಿಫಲವಿಲ್ಲದೆ ಮಾಡುವದಕ್ಕೂ ಅಂತರವಿರುವಷ್ಟು ಕಾಮ್ಯಭಕ್ತಿ-ನಿಷ್ಕಾಮಭಕ್ತಿಗಳಲ್ಲಿ ಅಂತರವಿರುತ್ತದೆ. ಆದ್ದರಿಂದ ಭಗವತ್ಸೇವೆಯನ್ನು ಮಾಡಬೇಕಾದರೆ ಮನಸ್ಸಿನಲ್ಲಿ ಯಾವ ಕಾಮನೆಯನ್ನೂ ತರಕೂಡದು. ಯಾಕೆಂದರೆ, ಆ ಕಾಮನೆಯ ಪರಿಪೂರ್ತತೆಗೋಸ್ಕರ ಭಗವತ್ಸೇವೆಯ ಪುಣ್ಯವನ್ನು ವಿಕ್ರಯಿಸಿದ ಹಾಗಾಗುವದು. ಆದ್ದರಿಂದ ಭಗವಂತನ ನಿಷ್ಕಾಮಪ್ರೇಮಕ್ಕೆ ಪಾತ್ರರಾಗಬೇಕೆನ್ನುವವರು, ಈ ಕೂಲಿ

ವ್ಯವಹಾರವನ್ನು ಹೋಲುವ ಕಾಮ್ಯಭಕ್ತಿಯನ್ನು ಮಾಡಬಾರದು.

ಯಾವನು ಭಗವಂತನಲ್ಲಿ ಅಥವಾ ಸಜ್ಜನರಲ್ಲಿ ಅವಿಭಕ್ತನಾಗಿ ಅಂದರೆ ಬೇರೆಯಿರುವೆನೆಂಬ ಭಾವನೆಯಿಲ್ಲದೆ ನಡೆಯುವನೋ ಅವನೇ ನಿಜವಾದ ಭಕ್ತನು. 'ಭಕ್ತ' ಎಂಬ ಶಬ್ದದ ಅರ್ಥವು ಇದನ್ನೇ ಬೋಧಿಸುತ್ತದೆ. ಇದೇ ಭಕ್ತಿಯ ರಹಸ್ಯವು! ಇದು ಮನದಟ್ಟಾದ ಮಾನದಿಂದ ಮನುಷ್ಯನ ವೃತ್ತಿಯಲ್ಲಿ ಹೆಚ್ಚುಕಡಿಮೆಯಾಗುತ್ತಹೋಗುತ್ತದೆ. ಕಡೆಗೆ ಅವನು ಸ್ಥಿರಮನಸ್ಕನಾಗಿ ಬೇಕಾದಂಥ ಪ್ರಸಂಗಗಳನ್ನಾದರೂ ಸಹಿಸಿಕೊಳ್ಳುವನು. ಅವನ ಸಹನಶೀಲತೆಯ ಪ್ರಭಾವದಿಂದ ಯಾವ ದುಃಖಗಳೂ ಅವನನ್ನು ಮುಟ್ಟಲಾರವು!!

ಈ ಮೇರೆಗೆ ನುಡಿದು ಮಹಾರಾಜರು ಅಲ್ಲಿಯೇ ಅದೃಶ್ಯರಾದರು. ವಾಮನಬುವಾನು ಶ್ರೀಗುರುಗಳ ಮುಖದಿಂದ ಭಕ್ತಿಯ ವಿವರಣೆಯನ್ನು ಕೇಳಿ, ಸಂತುಷ್ಟನಾದನು. ತಾನು ಮಹಾರಾಜರಿಗೆ ಬೇಡಿಕೊಂಡದ್ದು ತಪ್ಪಾಯಿತೆಂದು ಭಾವಿಸಿದನು. ಬಳಿಕ ಅವನು ದೇಹತ್ಯಾಗ ಮಾಡಬೇಕೆಂಬ ತನ್ನ ಕ್ಷುದ್ರ ವಿಚಾರಕ್ಕೆ ನಾಚಿಕೊಂಡು ಮನೆಗೆ ಹೋಗಿ ಗುರುಚರಣಗಳನ್ನು ಸ್ಮರಿಸುತ್ತ ಮಲಗಿಕೊಂಡನು. ಮರುದಿನ ನಾಲ್ಕುತಾಸು ಹೊತ್ತು ಏರಿದಾಗ ಅವನಿಗೆ ಮಹಾರಾಜರಿಂದ ಒಂದು ಪತ್ರ ಬಂದಿತು. ಅದರಲ್ಲಿ 'ನಿನಗೆ ಬೇಗನೆ ಗುಣವಾಗುವದು' ಎಂಬದಿಷ್ಟೇ ಸಂಗತಿಯು ಬರೆಯಲ್ಪಟ್ಟಿತ್ತು.

ಮುಂದೆ ಮಹಾರಾಜರ ಅಭಿವಚನದಂತೆ ಅವನ ರೋಗವು ಕ್ರಮೇಣ ಕಡಿಮೆಯಾಗುತ್ತಾಗುತ್ತ ಸ್ವಲ್ಪದಿವಸಗಳಲ್ಲಿ ನಿಶ್ಶೇಷವಾಯಿತು. ಈ ಹಾತಿಗೆ ಕೆಲವು ದಿವಸಗಳು ಗತಿಸುತ್ತಿರಲು. ಒಂದು ದಿನ ಸ್ವಪ್ನದಲ್ಲಿ ಆತನಿಗೆ ಮಹಾರಾಜರು 'ನೀನು ಅಕ್ಕಲಕೋಟೆಗೆ ಬರಬೇಕು' ಎಂದು ಅಪ್ಪಣೆ ಮಾಡಿದರು. ಕೂಡಲೆ ಆ ಭಕ್ತಶ್ರೇಷ್ಠನು ಅಕ್ಕಲಕೋಟೆಗೆ ಒಂದು ಮಹಾರಾಜರ ಸನ್ನಿಧಿಯನ್ನು ಸೇರಿದನು. ಕೆಲವು ದಿವಸಗಳ ವರೆಗೆ ಆತನು ಅವರ ಸೇವೆಯನ್ನು ಮಾಡುತ್ತಿರಲು, ನಿಷ್ಕಾಮ ಭಕ್ತಿಯ ಲಕ್ಷಣವು ಅವನ ಅನುಭವಕ್ಕೆ ಬಂದಿತು. ಗುರುಕೃಪೆಯಿಂದ ಅವನು ಬ್ರಹ್ಮನಿಷ್ಠನಾದನು.

ವಾಮನಬುವಾನು ಶ್ರೀಗುರು ಸನ್ನಿಧಿಯಲ್ಲಿರುವಾಗ ಒಬ್ಬ ಪಂಡಿತನು ಕುಟುಂಬಸಮೇತನಾಗಿ ಶ್ರೀಗುರು ದರ್ಶನಕ್ಕೆ ಬಂದನು. ಅವನಿಗೆ ನಾಲ್ಕುವರುಷದ ಒಬ್ಬ ಮಗನಿದ್ದನು. ಆ ಹುಡುಗನ ಜನ್ಮಕುಂಡಲಿಯಿಂದ ಅವನು ಅಲ್ಪಾಯುವಿರುವನು, ಎಂಬ ಸಂಗತಿಯನ್ನು ತಿಳಿದು [illegible] ಪಂಡಿತನು ಗಾಬರಿ

ಯಾಗಿ, ಮಹಾಪುರುಷರ ಸೇವೆಯಿಂದ ಮಗನ ಆಯುಸ್ಸನ್ನು ಹೆಚ್ಚಿಸಿಕೊಳ್ಳಬೇಕೆಂದು ಕಾಶಿಯಿಂದ ಬಂದಿದ್ದನು. ಸರ್ವಜ್ಞರಾದ ಮಹಾರಾಜರು ಅವನ ಇಂಗಿತವನ್ನು ತಿಳಿದು, "ಇಂದಿಗೆ ಏಳನೆಯ ದಿನ ನಿನ್ನೊಡನೆ ಮಾತನಾಡಬೇಕಾಗಿದೆ" ಎಂದು ನುಡಿದರು. ಅವರ ಈ ಮಾತಿನ ಕಾರಣವು ತಿಳಿಯದ್ದರಿಂದ ಶಾಸ್ತ್ರಿಯು ಗೊಂದಲದಲ್ಲಿ ಬಿದ್ದನು. ಆಗುತ್ತಾಗುತ್ತ ಏಳನೆಯ ದಿವಸವು ಪ್ರಾಪ್ತವಾಯಿತು. ಶಾಸ್ತ್ರಿಯ ಮಗನು ನಿರ್ನಿಮಿತ್ತವಾಗಿ ಕಣ್ಣುಬೆಳ್ಳಗೆ ಮಾಡಿ ಮೃತ್ಯುವನ್ನು ಎದುರುನೋಡತೊಡಗಿದನು. ತಾನು ಯಾವ ಉದ್ದೇಶದಿಂದ ಇಲ್ಲಿಗೆ ಬಂದಿದ್ದನೋ, ಆ ಉದ್ದೇಶವೇ ಈಗ ನಿರ್ಮೂಲವಾಗುವ ಹೊತ್ತು ಬಂದದ್ದರಿಂದ ಶಾಸ್ತ್ರಿಯು ಅತ್ಯಂತ ದುಃಖಿಕ್ಕೊಳಗಾದನು. ಆಗ ಮಹಾರಾಜರು ಅವನನ್ನು ಕರೆದು—'ಪೇಟೆಯಲ್ಲಿ ಎಳ್ಳು ಕೊಂಡುಕೊಂಡು ಬಾ' ಎಂದು ಹೇಳಿದರು. ಆ ಕೂಡಲೆ ಶಾಸ್ತ್ರಿಯು ಗಾಬರಿಗೆಟ್ಟು ಓಡುತ್ತ ಹೋಗಿ ಒಂದು ಆಣೆಯ ಎಳ್ಳನ್ನು ಕೊಂಡುಕೊಂಡು ಬಂದನು. ಬಳಿಕ ಮಹಾರಾಜರು ನಕ್ಕು ಆ ಎಳ್ಳಿನಲ್ಲಿ ಎರಡು ಬೆರಳಿಗೆ ಬರುವಷ್ಟು ಎಳ್ಳನ್ನು ತಕ್ಕೊಂಡು ಅದರಲ್ಲಿ ಸಕ್ಕರೆಯನ್ನು ಕೂಡಿಸಿ ಆ ಮೃತಬಾಲಕನ ಬಾಯಿಯಲ್ಲಿ ಹಾಕಿದರು. ಕೂಡಲೆ ಬಾಲಕನು ಚೇತರಿಸಿಕೊಂಡೆದ್ದು ಕುಳಿತನು. ಆಗ ಶಾಸ್ತ್ರಿಗೆ ಆದ ಆನಂದವನ್ನು ಬಣ್ಣಿಸಲಾಸಲ್ಲ. ನೆರೆದವರೆಲ್ಲರಿಗೂ ಸಾನಂದಾಶ್ಚರ್ಯವಾಯಿತು. ಬಳಿಕ ಮಹಾರಾಜರು ಪಂಡಿತನನ್ನು ಕುರಿತು—ಪಂಡಿತರೇ, ನೀವು ಇಷ್ಟರ ಸಲುವಾಗಿ ಕಾಶಿಯಿಂದ ಇಲ್ಲಿಗೆ ಬಂದಿದ್ದಿರಲ್ಲವೇ? ಎಂದು ನುಡಿದರು. ಮಹಾರಾಜರ ಈ ಅದ್ಭುತ ಶಕ್ತಿಯನ್ನು ಕಣ್ಣಾರೆ ಕಂಡ ಆ ಪಂಡಿತನಿಗೆ ಅವರ ಮುಂದೆ ಮಾತಾಡಲಿಕ್ಕೆ ಶಕ್ತಿಯೇ ಸಾಲದಾಯಿತು. ಅವನು ಮೌನದಿಂದ ಮಹಾರಾಜರಲ್ಲಿ ಭಕ್ತಿ-ವಿಶ್ವಾಸಗಳನ್ನು ತಾಳಿ ಅವರನ್ನೇ ನಿರೀಕ್ಷಿಸುತ್ತ ನಿಂತಿರಲು ಆತನಿಗೆ ಆ ಮಹಾತ್ಮರು ಭಕ್ತಿಯ ಲಕ್ಷಣಗಳನ್ನು ಹೇಳಿದರು. ಪಂಡಿತನು ವಿವೇಕಸಂಪನ್ನನಾದ್ದರಿಂದ ಅವನಿಗೆ ಕಾಮ್ಯಭಕ್ತಿಯ ಗೌಣತ್ವವು ತತ್ಕಾಲದಲ್ಲಿ ಹೊಳೆಯಿತು. ಅವನು ಮಹಾತ್ಮರನ್ನು ಕುರಿತು—"ಮಹಾತ್ಮರೇ, ನಾವು ಅಜ್ಞಾನಿಗಳು ನಮಗೆ ಭಕ್ತಿಯ ವಿಚಾರವೇ ತಿಳಿದಿಲ್ಲ. ಲೌಕಿಕ ಸುಖಕ್ಕೆ ಆಶೆ ಮಾಡಿ ಆ ಸುಖ ಸಿಗಬೇಕೆಂಬ ಹಂಬಲದಿಂದ ನಿಮ್ಮಂಥ ಸಜ್ಜನರ ಸನ್ನಿಧಿಗೆ ಬರುತ್ತೇವಲ್ಲದೆ ಬೇರಿಲ್ಲ; ಈಗ ನೀವು ಬೋಧಿಸಿದ ಕಾಮ್ಯಭಕ್ತಿಯ ವಿಷಯವು ನನ್ನಲ್ಲಿ ವಿವೇಕವನ್ನು ಹುಟ್ಟಿಸಿರುತ್ತದೆ. ಈ ಬೋಧದ ಯೋಗದಿಂದ ನನ್ನಲ್ಲಿ ನಿಷ್ಕಾಮಭಕ್ತಿಯು ಅಂಕುರಿಸಿತು. ನನ್ನ ಜನ್ಮವು ನಿಜವಾಗಿಯೂ ಸಾರ್ಥ

ಕವಾಯಿತು, ಎಂದು ನುಡಿದನು. ಆ ದಿನದ ನಿರೂಪಣವನ್ನು ಕೇಳಿದವರೆಲ್ಲರೂ ಮುಂದೆ ಕಾಮ್ಯಭಕ್ತಿಯ ಉಸಾಬರಿಗೇ ಹೋಗಲಿಲ್ಲ.

ಪ್ರಿಯವಾಚಕರೇ, ಮಹಾರಾಜರ ಈ ಮೇಲಿನ ಸದುಪದೇಶದಿಂದ ನಿಮಗೆ ಕಾಮ್ಯಭಕ್ತಿಯು ಹ್ಯಾಗೆ ಗೌಣವೆಂಬದು ಹೊಳೆದಿರಬಹುದು. ಈಗ ನಾವು ಆಚರಿಸುವ ಭಕ್ತಿಯೆಲ್ಲ ಈ ಗೌಣ ಅಂದರೆ ಕಾಮ್ಯಭಕ್ತಿಯಲ್ಲಿಯೇ ಸಮಾವೇಶವಾಗುತ್ತದೆ. ನಮಗೆ ಪುತ್ರೋತ್ಸವವಾದರೆ, ಸತ್ಯನಾರಾಯಣನ ಪೂಜೆಯನ್ನು ಮಾಡುತ್ತೇನೆ. ಅಥವಾ ಇಂಥ ದೇವರಿಗೆ ಇಂಥ ಅಲಂಕಾರವನ್ನು ಮಾಡಿಸುತ್ತೇವೆ. ಇಲ್ಲವೆ ದಿಂಡುರುಳಿಕೆಯನ್ನು ಹಾಕುತ್ತೇವೆ ಎಂದು ಬೇಡಿಕೊಳ್ಳುವದು ಕಾಮ್ಯಭಕ್ತಿಯಾಗಿದೆ. ಹೀಗೆ ವಿಷಯ ಸುಖಹೇತುಕವಾಗಿ ಈಶ್ವರಸೇವೆಯಿರಬಾರದೆಂದೇ ಸಜ್ಜನರ ಅಭಿಪ್ರಾಯವಿರುತ್ತದೆ. ಪುರಾಣಗಳಾದರೂ ಈ ಕಾಮ್ಯಭಕ್ತಿಯನ್ನು ಕಡಿಮೆ ತರಗತಿಯಲ್ಲಿ ಎಣಿಸಿರುತ್ತವೆ. ಆದ್ದರಿಂದ ನಮ್ಮ ಕರ್ತವ್ಯವೆಂದು ಭಗವತ್ಸೇವೆಯನ್ನು ಮಾಡಬೇಕಲ್ಲದೆ ಯಾವದಾದರೊಂದು ಫಲಪ್ರಾಪ್ತಿಗಾಗಿ ಮಾಡಬಾರದು. ಶ್ರೀಕೃಷ್ಣಪರಮಾತ್ಮನಾದರೂ ಭಗವದ್ಗೀತೆಯ ಮುಖಾಂತರ ನಿಷ್ಕಾಮಭಕ್ತರನ್ನೇ ಕೊಂಡಾಡಿರುತ್ತಾನೆ. ವ್ಯವಹಾರದಲ್ಲಿ ಕೂಡಾ ಈ ಮಾತು ಹ್ಯಾಗೆ ಸರ್ವಸಮ್ಮತವಾಗುತ್ತದೆಂಬದನ್ನು ಪ್ರಸ್ತುತದ ಚರಿತ್ರನಾಯಕರು ತಮ್ಮ ಬೋಧದಲ್ಲಿ ವಿಶದಪಡಿಸಿರುತ್ತಾರೆ. ದೊಡ್ಡವರ ಈ ಬೋಧವನ್ನು ನೆನಪಿನಲ್ಲಿಟ್ಟುಕೊಂಡು ನಡೆಯುವದೇ ನಮಗೆ ಕಲ್ಯಾಣದ ದಾರಿಯು; ಹೀಗೆ ಮಾಡದೆ ದೇಹಾಭಿಮಾನಕ್ಕೆ ಬಿದ್ದು ಕಾಮನಾಪರಿಪೂರ್ತತೆಗಾಗಿ ದೇವರಿಗಾಗಲಿ, ಸಜ್ಜನರಿಗಾಗಲಿ ದುಂಬಾಲಬೀಳುವದು ನಿಜವಾದ ಕಲ್ಯಾಣಕ್ಕೆ ಕಾರಣವಾಗಲಾರದು. ಇದು ಐಹಿಕಕ್ಕೆ ಸಂಬಂಧಿಸಿದ್ದರಿಂದ ನಶ್ವರವೆಂತಲೇ ಭಾವಿಸಬೇಕೆಂದು ಪ್ರತ್ಯೇಕವಾಗಿ ಹೇಳುವ ಕಾರಣವಿಲ್ಲ.

## ೯ ನೆಯ ಪ್ರಕರಣ.

### ಕಾಮುಕಭಕ್ತರ ಸುಳಿದಾಟ.

ಹಿಂದಿನ ಪ್ರಕರಣದಲ್ಲಿ ಮಹಾರಾಜರ ಮುಖದಿಂದ ಹೊರಟ ಕಾಮ್ಯಭಕ್ತಿಯ ಲಕ್ಷಣಗಳನ್ನು ಹೇಳಲಾಯಿತು. ಪ್ರಸ್ತುತಪ್ರಕರಣದಲ್ಲಿ ಆ ಮಹಾತ್ಮರ ಬಳಿಯಲ್ಲಿ ಕಾಮುಕ ಭಕ್ತರ ಸುಳಿದಾಟವು ಹ್ಯಾಗೆ ಹೆಚ್ಚಿತೆಂಬದನ್ನು ವಾಚಕರಿಗೆ ತಿಳಿಸುವೆವು.

ಮಹಾರಾಜರ ಬಳಿಯಲ್ಲಿ ಎಷ್ಟೋ ಜನರು ಕಾಯುಮವಾಗಿ ಸೇವೆಗೆ ನಿಂತು ಕೊಂಡಿದ್ದರು. ಅವರಲ್ಲಿ ಪಾರಮಾರ್ಥಿಕ ಬುದ್ಧಿಯುಳ್ಳವರ ಸಂಖ್ಯೆಯು ಕೈಬೆರಳಿನಿಂದ ಎಣಿಸುವಷ್ಟಿತ್ತು. ಉಳಿದವರು ಸಾಂಸಾರಿಕ ಸುಖ ಸಂಪಾದನೆಗಾಗಿ ಮಹಾರಾಜರನ್ನು ಸೇವಿಸುತ್ತಿದ್ದರು. ಮಹಾರಾಜರಾದರೂ ಲೋಕೋದ್ಧಾರಕ್ಕಾಗಿ ಜನರಿಂದ ಸೇವೆಯನ್ನು ಕೈಕೊಳ್ಳುತ್ತಿದ್ದರು. ಲೋಕಪಾವನವಾದ ಭಾಗೀರಥಿಯು ಭೂತಲದಲ್ಲಿ ಪ್ರವಹಿಸುತ್ತಿರಲು ಅದರ ಪವಿತ್ರ ಜಲವನ್ನು ಕೆಲವರು ಕೊಡದಲ್ಲಿ ತುಂಬಿಕೊಳ್ಳುವರು, ಕೆಲವರು ತಂಬಿಗೆಗಳಲ್ಲಿ ತುಂಬಿಕೊಳ್ಳುವರು, ಕೆಲವರು ಸಣ್ಣಸಣ್ಣ ಪಾತ್ರೆಗಳಲ್ಲಿ ತುಂಬಿಕೊಳ್ಳುವರು, ಅದರಂತೆ ಸಜ್ಜನರು ಹುಟ್ಟಿ ಬಂದಾಗ ಕೆಲವರು ಅಖಂಡ ಸುಖವನ್ನು ಹೊಂದುವರು; ಕೆಲವರು ಅಧಿಕಾರಾನುಗುಣವಾಗಿ ಕ್ಷಣಿಕ ಐಹಿಕಸುಖವನ್ನು ಹೊಂದುವರು. ಸಜ್ಜನರಾದರೂ ವಾತ್ಸಲ್ಯದಿಂದ ಅವರಿಗೆ ಭಗವದ್ಭಕ್ತಿಯ ಅಭಿರುಚಿಯನ್ನು ಹಚ್ಚುವದಕ್ಕಾಗಿ ಅವರವರ ಸ್ವಭಾವದಂತೆ ವರ್ತಿಸುವರು. ಆದ್ದರಿಂದ ಸಜ್ಜನರ ಬಳಿಯಲ್ಲಿ ಲೋಕಸಮೂಹವು ಕೂಡುವದು. ಅದರಂತೆ ಪ್ರಸ್ತುತ ಮಹಾರಾಜರ ಬಳಿಯಲ್ಲಿಯೂ ಜನಸಮುದಾಯವು ವಿಶೇಷವಾಗಿತ್ತು. ಇದಲ್ಲದೆ ಪರಸ್ಥಳಗಳಲ್ಲಿದ್ದ ಎಷ್ಟೋ ಜನ ಭಕ್ತರು ತಮಗೆ ಸಂಕಟ ಬಂದಕೂಡಲೆ ಮಹಾರಾಜರ ಬಳಿಗೆ ಬಂದು ಸಂಕಟ ನಿವಾರಣೋಪಾಯಗಳನ್ನು ಕೇಳಿಕೊಂಡು ನಿರ್ಭಯದಿಂದ ಊರಿಗೆ ಹೋಗುತ್ತಿದ್ದರು. ಕೆಲವರು ಮಹಾರಾಜರ ಬಳಿಯಲ್ಲಿದ್ದ ತಮ್ಮ ಆಪ್ತೇಷ್ಟರಿಗೆ ಪತ್ರಬರೆದು ಅವರ ಮುಖಾಂತರವಾಗಿ ತಮ್ಮ ಐಹಿಕ ಕಲ್ಯಾಣವನ್ನು ಮಾಡಿಕೊಳ್ಳುತ್ತಿದ್ದರು.

ಸೊಲ್ಲಾಪುರದಲ್ಲಿ ದಾಮುಲೆ ಎಂಬೊಬ್ಬ ಗೃಹಸ್ಥನು ಮಹಾರಾಜರಲ್ಲಿ ವಿಶ್ವಾಸವುಳ್ಳವನಾಗಿದ್ದನು. ಹೀಗಿರಲು ಆತನಿಗೆ ಶರೀರಧರ್ಮದಂತೆ ಮೂಲವ್ಯಾಧಿಯು ಉಂಟಾಯಿತು. ಬರಬರುತ್ತ ಆ ವ್ಯಾಧಿಯ ಬಾಧೆಯು ಸಹಿಸಲಶಕ್ಯವಾಯಿತು. ನಾಮಾಂಕಿತ ವೈದ್ಯರಾದರು, ಡಾಕ್ಟರುಗಳಾದರು, ಯಾರು ಔಷಧ ಕೊಟ್ಟರೂ ಅವನ ಮೂಲವ್ಯಾಧಿಯು ಉಪಶಮನವನ್ನು ಹೊಂದಲಿಲ್ಲ. ಆದ್ದರಿಂದ ಅವನು ಔಷಧಕ್ಕೆ ಬೇಸತ್ತು ಮಹಾರಾಜರಿಗೆ ಶರಣು ಹೋಗುವದನ್ನು ನಿಶ್ಚಯಿಸಿ ಅವರ ಬಳಿಯಲ್ಲಿದ್ದ ತನ್ನೊಬ್ಬ ಆಪ್ತನಿಗೆ ಒಂದು ಪತ್ರವನ್ನು ಬರೆದನು. ಆ ಆಪ್ತನು ಪತ್ರವನ್ನು ಮಹಾರಾಜರಿಗೆ ತೋರಿಸಿ ಉಪಾಯವನ್ನು ಹೇಳಬೇಕೆಂದು ಪ್ರಾರ್ಥಿಸಿದನು. ಮಹಾರಾಜರು ಆತನ ಪ್ರಾರ್ಥನೆಯನ್ನು ಕೇಳಿ ಸದಯಾಂತಃಕರುಣಿಗಳಾಗಿ ನುಡಿದರೇನಂದರೆ—"ಮೂಲವ್ಯಾಧಿಯಿಂದ ತ್ರಸ್ತನಾದ ಅವನು ಶ್ರೀ ದತ್ತಸ್ಮರಣೆಮಾಡಿ ಪ್ರತಿನಿತ್ಯ ಗೋಮೂತ್ರವನ್ನು ಕುಡಿಯಬೇಕು ಅಂದರೆ ಕೆಲವು ದಿನಗಳಲ್ಲಿ ಅವನಿಗೆ ಗುಣವಾಗುವದು."

ಈ ಮೇರೆಗೆ ಮಹಾರಾಜರು ಅಮೃತ ಸದೃಶವಾದ ಮಾತುಗಳನ್ನಾಡಲು ಆ ಆಪ್ತನು ಸಂತೋಷಬಟ್ಟು ದಾಮುಲೆನಿಗೆ ಪತ್ರವನ್ನು ಬರೆದನು. ಅವನು ಅದರಂತೆ ಮಾಡಲು ಸ್ವಲ್ಪ ದಿನಗಳಲ್ಲಿಯೇ ಅವನ ಮೂಲವ್ಯಾಧಿಯ ಬಾಧೆಯು ನಿಂತು ಹೋಯಿತು. ಆಗ ಸಮಸ್ತರಿಗೂ ದೊಡ್ಡವರ ಕೃಪಾದೃಷ್ಟಿಯೇ ಔಷಧವೆಂಬದು ನಂಬಿಕೆಯಾಯಿತು;

ಬಹುತರ ಮಹಾರಾಜರ ಬಳಿಗೆ ಬಂದ ಪ್ರತಿಯೊಬ್ಬ ಮನುಷ್ಯನು ಕಲ್ಯಾಣ ಹೊಂದದೆ ಹೋಗುತ್ತಿರಲಿಲ್ಲ. ಯಾಕಂದರೆ, ಆ ಮಹಾತ್ಮರ ಅಂತಃಕರಣವೇ ಅಷ್ಟು ಉದಾರವಾಗಿತ್ತು. ಸಜ್ಜನರ ವಶದಲ್ಲಿ ಪ್ರತ್ಯಕ್ಷ ಪರಮಾತ್ಮನೇ ಇರುವನೆಂಬದನ್ನು ಅವರು ಜಗತ್ತಿನ ನಿದರ್ಶನಕ್ಕೆ ತಂದುಕೊಡಬೇಕಾಗಿತ್ತು. ಆದ್ದರಿಂದ ಬೇಡಿಕೊಳ್ಳುವವರ ಸದ್ಭಾವನೆಯನ್ನು ಪರೀಕ್ಷಿಸಿ, ಅವರಿಗೆ ಮಹಾರಾಜರು ಫಲಗಳನ್ನು ಕೊಡುತ್ತಿದ್ದರು. ಸದ್ಭಾವನೆಯಿಲ್ಲದೆ ಮಾತ್ರ ಯಾರಿಗೂ ಫಲ ಸಿಗುತ್ತಿರಲಿಲ್ಲ. ಅಸದ್ಭಾವನೆಯುವರು ತಮ್ಮ ಅಕಲ್ಯಾಣವನ್ನು ಮಾತ್ರ ಮಾಡಿಕೊಳ್ಳುತ್ತಿದ್ದರು. ಮಹಾರಾಜರು ಸಿಟ್ಟಿನವರಿದ್ದರೂ ಯಾರಿಗೂ ಶಾಪವಾಣಿಯನ್ನುಚ್ಚರಿಸುತ್ತಿದ್ದಿಲ್ಲ. ಅವರು ಪಾಪಿಷ್ಠರನ್ನು ಬೈಯುತ್ತಿದ್ದರೂ ಅವರ ಮೇಲೆ ಅನುಗ್ರಹವನ್ನೇ ಮಾಡುತ್ತಿದ್ದರು. ಆದ್ದರಿಂದ ಮಹಾರಾಜರ ಈ ವಾತ್ಸಲ್ಯಕ್ಕಾಗಿ ಬಹು ಜನರು ಅವರನ್ನು ಆಶ್ರಯಿಸಿದ್ದರು.

ಅಗ್ನಿಯನ್ನು ತಿಳಿದು ಮುಟ್ಟಿದರೂ ಅದು ತನ್ನ ಕಾರ್ಯವನ್ನು ಮಾಡುತ್ತದೆ. ತಿಳಿಯದೆ ಮುಟ್ಟಿದರೂ ಅದು ತನ್ನ ಕಾರ್ಯವನ್ನು ಮಾಡುತ್ತದೆ. ಅದರಂತೆ ಸಜ್ಜನರ ಬಳಿಯಲ್ಲಿ ಅವರ ಮಹಾತ್ಮ್ಯೆಯನ್ನು ತಿಳಿದೇ ಆಗಲಿ, ತಿಳಿಯದೇ ಆಗಲಿ ವಾಸಿಸಿದರೂ ಅದು ಫಲವನ್ನು ಕೊಡದೆ ಇರುವದಿಲ್ಲ. ಸನ್ ೧೮೫೭ನೇ ಇಸವಿಯಲ್ಲಿ ಆದ ನರಗುಂದ ಬಂಡಾಯವು ಇತಿಹಾಸ ಪ್ರಸಿದ್ಧವಿದೆಯಷ್ಟೇ; ಆ ಕಾಲಕ್ಕೆ ಜಮಖಂಡಿಯ ಸಂಸ್ಥಾನಿಕರಾದ ಶ್ರೀಮಂತ ಅಪ್ಪಾಸಾಹೇಬರೆಂಬವರು ಬಂಡಿನಲ್ಲಿ ಕೂಡಿಕೊಂಡಿರುವರೆಂಬ ಆರೋಪವುಂಟಾದ್ದರಿಂದ ಬ್ರಿಟಿಶಸರಕಾರದವರು ಶ್ರೀಮಂತರನ್ನು ಕೈದಿನಲ್ಲಿಟ್ಟಿದ್ದರು. ಅವರ ಸಂಸ್ಥಾನದಲ್ಲಿ ದೊಡ್ಡ ಹುದ್ದೆಯ ಮೇಲಿದ್ದ ಗೋಪಾಳರಾವ ಜೋಸಿ ಎಂಬ ಗೃಹಸ್ಥನು ಅಕ್ಕಲಕೋಟೆಯ ನಿವಾಸಿಯಿದ್ದನು. ಅವನು ಮನೆತನದ ಕೆಲಸಕ್ಕಾಗಿ ಆಗ ರಜೆ ಪಡೆಕೊಂಡು ಊರಿಗೆ ಬಂದಿದ್ದು, ತಮ್ಮ ಶ್ರೀಮಂತರ ಮೇಲೆ ಬಂದ ಆಪತ್ತನ್ನು ಜನರ ಮುಂದೆ ಹೇಳುತ್ತಿದ್ದನು. ಹೀಗಿರಲು ಒಂದು ದಿನ ಗೋಪಾಳರಾಯನು ಮಹಾರಾಜರ ದರುಶನಕ್ಕೆ ಹೋದಾಗ ಒಬ್ಬ ಗೃಹಸ್ಥನ ಮುಂದೆ ಆ ಸಂಗತಿಯನ್ನು ಹೇಳುತ್ತಿದ್ದನು. ಮಹಾರಾಜರಿಗೂ 'ಗೋಪಾಳರಾಯನಿಗೂ ನಡುವೆ ಬಹಳ ಅಂತರವಿತ್ತು. ಆದರೂ ಮಹಾರಾಜರು ಗೋಪಾಳರಾಯನ ಮಾತುಗಳನ್ನು ಕೇಳಿ, ಒಮ್ಮೆಲೆ ಜಮಖಂಡಿಯ ಕಡೆಗೆ ಮೋರೆ ತಿರುವಿ, 'ಬಾ, ಜಮಖಂಡೀಕರನೇ, ಬಾ' ಎಂದು ಕೂಗಿದರು. ಆಗ ಜನರೆಲ್ಲರೂ ಆಶ್ಚರ್ಯಚಕಿತರಾದರು. ಮತ್ತು ಜಮಖಂಡೀಕರರು ಬಿಡುಗಡೆ ಹೊಂದುವರು, ಎಂದು ಅನ್ನತೊಡಗಿದರು. ಮುಂದೆ ಸ್ವಲ್ಪ ದಿವಸಗಳಲ್ಲಿಯೇ ಜಮಖಂಡೀಕರರು ದೋಷಮುಕ್ತರಾದರು. ಈ ಸಂಗತಿಯಿಂದ ಗೋಪಾಳರಾಯನು ಮಹಾರಾಜರಲ್ಲಿ ಅತ್ಯಂತ ವಿಶ್ವಾಸವನ್ನು ತಾಳಿದನು.

ಭೀಮರಾಯನೆಂಬೊಬ್ಬ ಕರ್ನಾಟಕ ಗೃಹಸ್ಥನಿಗೆ ತಲೆಯ ಮೇಲೆ ಬಹು ದೊಡ್ಡದಾದ ಒಂದು ವಾಳವಿತ್ತು. ಅವನನ್ನು ಕಂಡು ಜನರು ಎರಡು ತಲೆಯವನೆಂದು ಚೇಷ್ಟೆಮಾಡುತ್ತಿದ್ದರು. ಹೀಗಿರಲು ಅವನು ಜನರ ನಿಂದೆಗೆ ಬೇಸತ್ತು ಮಹಾರಾಜರ ಸೇವೆಯಿಂದ ವಾಳವನ್ನು ಕಳಕೊಳ್ಳಬೇಕೆಂದು ಅಕ್ಕಲಕೋಟೆಗೆ ಹೋದನು. ಎಲ್ಲಿಯಾದರೂ ಪರರ ವ್ಯಂಗಗಳನ್ನು ಕಂಡು ನಗುವ ಜನರು ಇದ್ದೇ ಇರುವರಷ್ಟೇ; ಅದರಂತೆ ಅಕ್ಕಲಕೋಟೆಯಲ್ಲಿಯೂ ಅತನಿಗೆ ಹಾಸ್ಯಮಾಡುವ ಜನರು ಕೂಡಿದರು. ಮಹಾರಾಜರ ಸೇವಕರಲ್ಲಿದ್ದ ಎಷ್ಟೋ ಜನರು ಸಹ ಭೀಮರಾಯನನ್ನು ನೋಡಿ ಚೇಷ್ಟೆ ಮಾಡತೊಡಗಿದರು. ಒಂದು ದಿನ ಅತನು ಮುಂಜಾನೆ

ಒಂದು ತಂಬಿಗೆಯಲ್ಲಿ ಹೂ ತುಂಬಿಕೊಂಡು ಬರಲು ಮಹಾರಾಜರ ಬಳಿಯಲ್ಲಿದ್ದ ಸೇವಕರಲ್ಲಿ ಎಷ್ಟೋ ಜನರು ನಕ್ಕರು. ಅದನ್ನು ಕಂಡು ಮಹಾರಾಜರೂ ನಕ್ಕರು. ಆಗ ಭೀಮರಾಯನಿಗೆ ತುಂಬಾ ಅಸಮಾಧಾನವಾಯಿತು. ಅವನು ತಂಬಿಗೆಯನ್ನು ದೇವರ ಮನೆಯಲ್ಲಿಟ್ಟು ಮಹಾರಾಜರ ಬಳಿಗೆ ಬಂದು ನಮಸ್ಕರಿಸಿ ನುಡಿದನೇನಂದರೆ—"ಸ್ವಾಮಿ, ನಿಮ್ಮಂಥವರು ಹೀಗೆ ನಗಬಹುದೇ? ನನ್ನ ಮೇಲೆ ತಾವು ದಯ ಮಾಡುವದನ್ನು ಬಿಟ್ಟು ಹೀಗೆ ಚೇಷ್ಟೆ ಮಾಡುವದು ಸರಿಯಾಗುವದೇ?"

ಭೀಮರಾಯನ ಈ ಮಾತು ಕೇಳಿ ಮಹಾರಾಜರು ಮತ್ತಿಷ್ಟು ನಕ್ಕರು. ಆಗ ಆತನು ನಿರುಪಾಯನಾಗಿ ಮೋರೆಯೊಣಗಿಸಿಕೊಂಡು ಒಂದು ಮೂಲೆಯಲ್ಲಿ ಹೋಗಿ ಕುಳಿತನು. ಅವನಿಗೆ ತನ್ನ ದುರ್ದೈವದ ವಿಷಯವಾಗಿ ಬಹಳ ವ್ಯಸನವುಂಟಾಯಿತು. ಅವನು ಆದಿವಸ ಊಟಮಾಡಲಿಲ್ಲ. ಮಂದಿಯ ಕೂಡ ಮಾತನಾಡಲಿಲ್ಲ. ಆ ಇಡೀದಿವಸ ಅವನು ಮೂಲಿಯಿಂದ ಕದಲಲಿಲ್ಲ. ಮರುದಿನ ಬೆಳಗಾಯಿತು. ನೋಡುತ್ತಾನೆ, ತನ್ನ ತಲೆಯು ಹಗುರಾಗಿದೆ; ತಲೆಯ ಮೇಲಿನ ವಾಳವು ಒಡೆದು ಅದರೊಳಗಿನ ದುರ್ಮಾಂಸವು ಹೊರಬಿದ್ದಿತ್ತು. ಭೀಮರಾಯನಿಗೆ ತುಂಬಾ ಸಂತೋಷವಾಯಿತು; ಮಹಾರಾಜರು ನಿನ್ನೆಯದಿನ ಚೇಷ್ಟೆಮಾಡಿ ಬಡವನ ಮೇಲೆ ಅನುಗ್ರಹ ಮಾಡಿದರೆಂದು ಕುಣಿದಾಡಿದನು. ಬಳಿಕ ಅವನು ಮಹಾರಾಜರ ಬಳಿಗೆ ಓಡುತ್ತ ಹೋಗಿ ನಮಸ್ಕರಿಸಿ ನಿಂತನು. ಅವನನ್ನು ನೋಡಿ ಮಹಾರಾಜರು—ತಮ್ಮಾ, ನಿನ್ನ ಇಚ್ಛೆಯು ಕೈಗೂಡಿದಂತಾಯಿತೇ ಹ್ಯಾಗೆ? ನಿನ್ನೆಯದಿನ ಉಪವಾಸ ಬಿದ್ದುಕೊಂಡೆಯಲ್ಲಪ್ಪಾ! ದೇಹವು ಅಶಾಶ್ವತವಿದ್ದು, ಅದಕ್ಕಾಗುವ ಮಾನ ಮರ್ಯಾದೆಗಳು ಅಶಾಶ್ವತಗಳಲ್ಲವೇ? ಎಂದಾದರೊಂದುದಿನ ನಾಶವಾಗುವ ಈ ದೇಹವು ಸುಂದರವಾಗಿರಬೇಕೆಂದು ನಮ್ಮ ಸೇವೆಯನ್ನು ಮಾಡಬಂದಿರುವೆಯಲ್ಲ? ನಿನಗೇನು ಮೂರ್ಖನೆನ್ನಬೇಕೋ? ಏನೆನ್ನಬೇಕು? ಹುಚ್ಚಾ, ವಾಳವನ್ನು ಕಳಕೊಳ್ಳುವದಕ್ಕೆ ಸೇವೆಯನ್ನು ಮಾಡುವದಕ್ಕಿಂತ ಜನ್ಮಮರಣಗಳನ್ನು ನೀಗುವದಕ್ಕೆ ಪ್ರಯತ್ನ ಮಾಡಿದ್ದರೆ ನಿನ್ನ ಸಮಾನ ಜಾಣಪುರುಷನು ಅದಾವನಿರುತ್ತಿದ್ದನು? ಒಳ್ಳೇದು ಇರಲಿ; ನಿನ್ನ ಪ್ರಾರಬ್ಧವು; ಇನ್ನು ಮುಂದೇನಾಗಬೇಕಾಗಿದೆ, ಈ ತಲೆಹುಣ್ಣಿಗೆ ಔಷಧಿಯನ್ನು ಹಚ್ಚು ಎಂದುನುಡಿದು ತಮ್ಮ ಚರಣತೀರ್ಥವನ್ನು ಕೊಟ್ಟರು. ಆತೀರ್ಥದಿಂದ ಮುಂದೆ ಸ್ವಲ್ಪ ದಿವಸಗಳಲ್ಲಿಯೇ ಅವನತಲೆಯ ವಾಳವು ಪೂರ್ಣವಾಗಿ ವಾಸಿಯಾಯಿತು. ಬಳಿಕಅವನು ತನ್ನ ಸ್ವಗ್ರಾಮಕ್ಕೆ ಬಂದು ಸುಖದಿಂದ ವಾಸಿಸಿದನು.

ಈ ರೀತಿಯಾಗಿ ಮಹಾರಾಜರು ಹಲವು ರೀತಿಯಿಂದ ಶರಣಾಗತರ ಬಯಕೆಗಳನ್ನು ಪೂರೈಸುತ್ತಿದ್ದದರಿಂದ ಸೇವಕ ವರ್ಗದಲ್ಲಿ ಪ್ರವಿಷ್ಟರಾಗುವ ಜನರಿಗೇನು ಕೊರತೆ? ದುಷ್ಕಾಲದಲ್ಲಿ ಅನ್ನದಾನ ಮಾಡುವವನ ನೆರೆಯಲ್ಲಿ ಜನರು ಸೇರಿಕೊಳ್ಳುವ ಹಾಗೆ ಮಹಾರಾಜರಲ್ಲಿ ದಟ್ಟ ವಸ್ತಿಯಾಯಿತು. ಜನರು ಬರಿಯ ಸ್ವಾರ್ಥಪರಾಯಣರೇ ಹೊರತು ನಿಜವಾದ ಪಾರಮಾರ್ಥಿಗಳು ಇಲ್ಲವೆಂದು ಮಹಾರಾಜರು ಮೇಲಿಂದ ಮೇಲೆ ಅನ್ನುತ್ತಿದ್ದರು. ಯಾಕಂದರೆ ಜನರ ಠಕ್ಕತನ, ಡಾಂಭಿಕಾಚರಣೆಗಳು ಅವರ ನಿದರ್ಶನಕ್ಕೆ ಆಗಾಗ್ಗೆ ಬರುತ್ತಿದ್ದವು. ಅಂಥ ಪ್ರಸಂಗ ಬಂದಾಗ ಮಹಾರಾಜರು ಸದ್ಬೋಧವನ್ನು ಮಾಡದೆ ಬಿಡುತ್ತಿದ್ದಿಲ್ಲ. ಒಮ್ಮೆ ಒಂದು ಪ್ರಸಂಗವು ಅಕಸ್ಮಾತ್ತಾಗಿ ಒದಗಿತು. ಮಹಾರಾಜರು ಅಕ್ಕಲಕೋಟೆಯ ಸಂಸ್ಥಾನಿಕರಲ್ಲಿ ಹೋಗಿದ್ದರು. ಅವರು ಮಹಾರಾಜರನ್ನು ದೇವರ ಮನೆಯಲ್ಲಿ ತೂಗಮಣೆಯ ಮೇಲೆ ಕುಳ್ಳಿರಿಸಿ, ಅವರೊಡನೆ ಏನೇನೋ ಮಾತನಾಡುತ್ತಿದ್ದರು. ಆಗ ಸಂಸ್ಥಾನಿಕರ ಪುರೋಹಿತನು ದೇವರ ಪೂಜೆಯನ್ನು ಮಾಡುತ್ತಿದ್ದನು. ಅವನು ಒಳ್ಳೇ ಅಧೀತಬ್ರಾಹ್ಮಣನಿದ್ದು, ಸಂಸ್ಥಾನಿಕರ ಮನೆಯಲ್ಲಿ ದಿನಾಲು ಪುರಾಣವನ್ನು ಹೇಳುತ್ತಿದ್ದನು. ಅವನ ಪುರಾಣವು ಬಹು ಸರಸವಾಗುತ್ತದೆಂಬ ಖ್ಯಾತಿಯು ಜನರಲ್ಲೆಲ್ಲ ಪ್ರಸಾರವಾಗಿತ್ತು! ಇರಲಿ, ಅವನು ಗಂಧವನ್ನು ತೇಯುತ್ತಿರಲು ಒಂದು ಇಲಿಯು ಮೆಲ್ಲನೆ ದೇವರ ಚೌಕಿಯ ಹತ್ತಿರ ಬಂದು ಅಲ್ಲಿಟ್ಟ ತುಪ್ಪದ ಬತ್ತಿಯನ್ನು ತಿನ್ನಲಾರಂಭಿಸಿತು. ಗಂಧವನ್ನು ತೇಯುವ ಪುರೋಹಿತನು ಅಲ್ಲಿಯೇ ಸಮೀಪದಲ್ಲಿದ್ದು, ಇಲಿಯ ಈ ಕೃತಿಯನ್ನು ಕಂಡು ಸಿಟ್ಟುಬೆಂಕಿಯಾದನು. ಆ ಸಿಟ್ಟಿನ ಭರದಲ್ಲಿ ಅವನು ಕೈಯೊಳಗಿನ ಗಂಧದ ಕೊರಡನ್ನು ಆ ಇಲಿಯ ಮೇಲೆ ಅಪ್ಪಳಿಸಿದನು. ಆ ಬಡಪ್ರಾಣಿಯು ಓಡಿಹೋಗುವ ಅವಕಾಶವನ್ನು ಕಾಣದೆ ಅಲ್ಲಿಯೇ ಸತ್ತುಬಿದ್ದಿತು. ಬ್ರಾಹ್ಮಣನ ಈ ಕೃತಿಯನ್ನು ಮಹಾರಾಜರು ನೋಡಿದರು. ಕೂಡಲೆ ಅವರು ಆತನನ್ನು ಕರೆದು.—"ಏನಯ್ಯಾ, ನೀನು ಯಾವ ಕೆಲಸಕ್ಕಾಗಿ ಕುಳಿತುಕೊಂಡಿರುವೆಯೆಂಬುದು ನಿನ್ನ ಧ್ಯಾನದಲ್ಲಿದೆಯೋ? ಹಾಗೆ ನೀನು ಸ್ಮೃತಿಯ ಮೇಲಿದ್ದರೆ, ಇಂಥ ಅಘೋರ ಕೆಲಸವನ್ನು ಮಾಡುತ್ತಿರಲಿಲ್ಲ. ನೀನು ಪುರಾಣ ಹೇಳುತ್ತೀ, ಪುಣ್ಯಕಥೆಗಳನ್ನು ಹೇಳುತ್ತೀ; ಜನರಿಂದ ಪಂಡಿತನೆಂದು ಅನಿಸಿಕೊಳ್ಳುತ್ತೀ; ಆದರೆ, ಇದೆಲ್ಲ ನಿರರ್ಥಕವೆಂದು ತೋರುತ್ತದೆ. ಯಾಕಂದರೆ, ನಿನಗೆ ಸ್ವಲ್ಪಾದರೂ ಜ್ಞಾನವಿದ್ದಂತೆ ಕಾಣುವದಿಲ್ಲ. ಇಂಥ ನೀನು ಜನರನ್ನು ಪುರಾಣ-ಪುಣ್ಯಕಥೆಗಳಿಂದ ಹ್ಯಾಗೆ ಪಾವನರನ್ನಾಗಮಾಡುವೆ? ನಿನ್ನ ಬಾಯಿಂದ ಧರ್ಮ

ಶ್ರವಣ ಮಾಡುವವರೇ ಮೂರ್ಖರೆಂಬಂತೆ ತೋರುತ್ತದೆ. ಪಾಪಿಷ್ಠರ ಬಾಯಿಂದ ಧರ್ಮಶ್ರವಣ ಮಾಡಬಾರದು. ಯಾರು ಪರಿಶುದ್ಧ ಹೃದಯರಾಗಿರುವರೋ, ಅವರೇ ಬೋಧಕ್ಕೆ ಯೋಗ್ಯರು. ಅವರ ಹೃದಯದಿಂದ ಹೊರಟ ವಾಣಿಯು ಲೋಕಪಾವನಮಾಡುವದು. ಹೀಗಿದ್ದು ನಿನ್ನಂಥ ಅಧಮನು ಉಪದೇಶಕನಾಗಲಿಕ್ಕೆ ಅಯೋಗ್ಯನೇ ಸರಿ. ಈ ಬಡಪ್ರಾಣಿಯನ್ನು ಒಂದೇ ಹೊಡತಕ್ಕೆ ಕೊಂದು ಬಿಟ್ಟಿ, ಇದರಿಂದ ನಿನ್ನಲ್ಲಿ ಭೂತದಯವಿಲ್ಲೆಂದು ಸ್ಪಷ್ಟವಾಗುತ್ತದೆ. ಇದೊಂದು ಇಲಿಯನ್ನು ನೀನು ಕೊಂದ ಮಾತ್ರದಿಂದ ಜಗತ್ತಿನೊಳಗಿನ ಇಲಿಗಳ ಮೂಲವನ್ನೇ ಕಡಿದ ಹಾಗಾಯಿತೇನು? ಹಾಗೇನೂ ಇಲ್ಲವಷ್ಟೇ? ನಿನ್ನ ತುಪ್ಪದ ಬತ್ತಿಯನ್ನು ಕಾಯ್ದುಕೊಳ್ಳುವದಿಷ್ಟೇ ನಿನ್ನಕೆಲಸವು; ಇಲಿಯನ್ನು ಕೊಲ್ಲುವದು ನಿನ್ನ ಕೆಲಸ ವಲ್ಲ. ಇದರಲ್ಲಿ ನೀನು ಎಷ್ಟು ದೊಡ್ಡ ತಪ್ಪು ಮಾಡಿದೆಯೆಂಬದನ್ನು ಕೇಳು; ನೀನು ದೇವರಪೂಜೆಗಾಗಿ ಮಡಿಯಿಂದ ಕುಳಿತಿರುವಿಯಷ್ಟೇ? ಈಗ ನೀನು ಸಿಟ್ಟಿಗೆದ್ದುದರಿಂದ ಮೈಲಿಗೆಯಾದೆ; ಯಾಕೆಂದರೆ ಕ್ರೋಧವು ಚಾಂಡಾಲಸ್ವರೂಪವಿರುತ್ತದೆ. ಕ್ರೋಧವು ಇಲ್ಲದಿದ್ದರೆ ಈ ಇಲಿಯಕೊಲೆಯು ನಿನ್ನಿಂದ ಸಂಭವಿಸುತ್ತಿರಲಿಲ್ಲ. ಇದರಿಂದ ನಿನಗೆ ದೇವರನ್ನು ಮುಟ್ಟಲಿಕ್ಕೆ ಕೂಡಾ ಅಧಿಕಾರವಿಲ್ಲ.''

ಈ ಮೇರೆಗೆ ಮಹಾರಾಜರು ಮಾತನಾಡಲು ಪುರೋಹಿತನು ಗದಗದನೆ ನಡುಗಿದನು. ಕೃತಕರ್ಮಕ್ಕೆ ಪಶ್ಚಾತ್ತಾಪವಾಗುವದರ ಬದಲು ತನಗೆ ಮಹಾರಾಜರು ಎಲ್ಲಿ ಶಾಪವ ಕೊಡುವರೋ ಎಂಬ ಸ್ವಾರ್ಥಪರಾಯಣವಾದ ಅಂಜಿಕೆಯನ್ನು ತಾಳಿದನು. ಅವನು ಈ ಚಿಂತೆಯಿಂದ ಮೌನದಿಂದ ನಿಂತುಕೊಂಡಿರಲು ಮಹಾರಾಜರು ಆ ಸತ್ತ ಇಲಿಯನ್ನು ತಕ್ಕೊಂಡು ಅದನ್ನು ನಾಲ್ಕಾರುಸಾರೆ ಗಿಮಿ ಗಿಮಿ ತಿರುಗಿಸಿ ಕೆಳಗೆ ಚಲ್ಲಿದರು. ಕೂಡಲೆ ಇಲಿಯು ಜೀವತಿರುಗಿ ಓಡಿಹೋಗಿ ಬಿಲದಲ್ಲಿ ಸೇರಿಕೊಂಡಿತು. ಮಹಾರಾಜರ ಈ ಅದ್ಭುತ ಕೃತಿಯನ್ನು ನೋಡಿ ಮಾಲೋಜಿರಾಯರು (ಅಕ್ಕಲಕೋಟೀಸಂಸ್ಥಾನಿಕ) ದಂಗಾದರು. ಮತ್ತು ಸಾಕ್ಷಾತ್ ದತ್ತಾತ್ರಯನೇ ಈ ಅವಧೂತರ ರೂಪದಿಂದ ಅವತರಿಸಿರುವನೆಂದು ನಂಬಿದರು. ಪುರೋಹಿತನಂತೂ ಮಹಾರಾಜರ ಚರಣಗಳಮೇಲೆ ಬಿದ್ದು, ತನ್ನ ಅಪರಾಧವನ್ನು ಕ್ಷಮಿಸಬೇಕೆಂದು ಬೇಡಿಕೊಳ್ಳಲಾರಂಭಿಸಿದನು. ಆಗ ದಯಾಳುಗಳಾದ ಮಹಾರಾಜರು:—ಪುರೋಹಿತನೇ, ನಿನಗೆ ಪಾಪ ತಗಲಬಾರದೆಂದೇ ಇಲಿಯನ್ನು ಬದುಕಿಸಿದೆನು. ಇನ್ನು ಮೇಲೆ ಹೀಗೆ ಮಾಡಬೇಡ; ಭೂತದಯಾ ಪರನಾಗಿ ನಡೆ ಎಂದು ಹೇಳಿದರು. ಮಹಾರಾಜರಲ್ಲಿ ಇಂಥ ಅದ್ಭುತ ಸಾಮರ್ಥ್ಯವಿರುವದೆಂದು ಸುತ್ತಲೂ

ಹಬ್ಬಲು ಕಾಮುಕ ಭಕ್ತರು ಅವರ ಬಳಿಯಲ್ಲಿ ದಿನದಿನಕ್ಕೆ ಹೆಚ್ಚು ಹೆಚ್ಚಾಗಿ ಸೇರ ತೊಡಗಿದರು.

---

## ೧೦ ನೆಯ ಪ್ರಕರಣ.

## ಗುರುವೇ ಪರಶಿವನು.

ಮನುಷ್ಯಾಕೃತಿಯಿಂದ ತೋರುವ ಸಜ್ಜನರು ಈಶ್ವರನ ಸಗುಣರೂಪಿಗಳೆಂಬದನ್ನು ಬಹು ಜನರು ತಿಳಿಯುವದಿಲ್ಲ. ಹಿಂದಕ್ಕೆ ಆದ ರಾಮ-ಕೃಷ್ಣಾದಿ ಅವತಾರಗಳನ್ನಾದರೂ ಆ ಕಾಲದಲ್ಲಿ ಬಹು ಜನರು ನಂಬಲಿಲ್ಲ. ಶ್ರೀರಾಮ ಹಾಗು ಶ್ರೀ ಕೃಷ್ಣ ಮೊದಲಾದವರನ್ನು ಸಾಮಾನ್ಯ ಮನುಷ್ಯರೆಂದೇ ಭಾವಿಸಿದ್ದರು. ಅದರಂತೆ ಈಗಿನ ಕಾಲದಲ್ಲಾದರೂ ಮಹಾತ್ಮರ ಅವತಾರಗಳು ಹೇರಳವಾಗಿ ಆಗುತ್ತವೆ. ಆ ಎಲ್ಲ ಅವತಾರಗಳನ್ನು ಸದ್ಭಕ್ತರ ವಿನಹ ಅನ್ಯರು ಎಂದೂ ತಿಳಿಯಲಾರರು. ಸದ್ಭಕ್ತರಿಗೋಸ್ಕರ ಸಜ್ಜನರು ದೇವರಾಗಿ ತೋರುವರು; ಉಳಿದವರಿಗೆ ಮನುಷ್ಯರಾಗಿ ತೋರುವರು. ಇದರಂತೆ ಮಹಾರಾಜರ ಕಾಲದಲ್ಲಿಯೂ ಒಂದು ಪ್ರಸಂಗವು ಒದಗಿತು. ಅದನ್ನು ನಮ್ಮ ವಾಚಕರಿಗೋಸ್ಕರ ಇದರಡಿಯಲ್ಲಿ ಕೊಡುವೆವು.

ಪುಣೆಯಲ್ಲಿ ನಂದರಾಮನೆಂಬ ಒಬ್ಬ ಸಾವುಕಾರನಿದ್ದನು, ಅವನಿಗೆ ಮೂತ್ರಕೃಛ್ರವೆಂಬ ರೋಗವು ಉಂಟಾದ್ದರಿಂದ ಅವನು ಹಲವು ಔಷಧೋಪಚಾರಗಳನ್ನು ಮಾಡಿಸಿ ದಣಿದನು. ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿದನು; ಏನಾದರೂ ಅವನ ರೋಗವು ಹಿಮ್ಮೆಟ್ಟಲಿಲ್ಲ; ಅವನು ತೀರ ಕ್ಷೀಣನಾಗಿ ಹಾಸಿಗೆಯನ್ನು ಹಿಡಿದನು. ಅವನು ಮನಸ್ಸಿನಲ್ಲಿ ಸರ್ವದಾ ತಳಮಳಿಸಲಾರಂಭಿಸಿದನು. ''ನಾನು ಇಂದಿನವರೆಗೆ ಅನಂತವಾಗಿ ದಾನ ಧರ್ಮಗಳನ್ನು ಮಾಡಿದೆನು. ದೇವಸ್ಥಾನಾದಿಗಳನ್ನು ಕಟ್ಟಿಸಿದೆನು; ವ್ರತೋಪವಾಸಗಳನ್ನು ಮಾಡಿದೆನು. ಯಾವ ಸತ್ಕಾರ್ಯದ ಪುಣ್ಯವಾದರೂ ಈ ಕಾಲಕ್ಕೆ ನನಗೆ ಅನುಕೂಲಿಸಲಿಲ್ಲ. ನನ್ನ ಪ್ರಾಕ್ಕರ್ಮವು ಬಲವತ್ತರವಿರುವದು'' ಎಂದು ಅವನು ಚಿಂತಿಸತೊಡಗಿದನು. ಅವನ

ಚಿಂತೆಗೆ ಮಿತಿಯೇ ಉಳಿಯಲಿಲ್ಲ. ಹೀಗಿರಲು ಒಂದು ದಿನ ಒಬ್ಬ ಬ್ರಾಹ್ಮಣನು ಅವನ ಬಳಿಗೆ ಬಂದನು. ನಂದರಾಮನು ಭಾವಿಕನಿದ್ದುದರಿಂದ ಆ ಬ್ರಾಹ್ಮಣನಿಗೆ ತನ್ನ ರೋಗ ನಿವಾರಣೆಗಾಗಿ ಉಪಾಯವನ್ನು ಹೇಳಬೇಕೆಂದು ಪ್ರಾರ್ಥಿಸಿದನು. ಅದಕ್ಕೆ ಬ್ರಾಹ್ಮಣನು ನುಡಿದನೇನಂದರೆ,—

ನಂದರಾಮನೇ, ನೀನು ಭಾವಿಕನಿರುತ್ತೀ; ಇಂದಿನ ವರೆಗೆ ನಿನ್ನಿಂದ ಅನಂತ ಪುಣ್ಯಕಾರ್ಯಗಳು ಒದಗಿರುತ್ತವೆ; ಆದರೂ ನೀನು ಇದು ವರೆಗೆ ಯಾವ ಸಜ್ಜನರಿಗೂ ಶರಣು ಹೋಗಿರುವದಿಲ್ಲ. ನಿನ್ನ ರೋಗವು ಸಜ್ಜನರ ಕೃಪೆಯಿಲ್ಲದೆ ಹೋಗಲಾರದು. ಯಾಕಂದರೆ, ಸಜ್ಜನರು ಪ್ರಾರಬ್ಧವನ್ನು ಕೂಡಾ ದಹಿಸಿಬಿಡುವರು; ಅವರ ಕೃಪಾದೃಷ್ಟಿಯಿಂದ ಸಾಧ್ಯವಾಗದ್ದು, ಭೂತಲದಲ್ಲಿ ಯಾವದೂ ಇರುವದಿಲ್ಲ. ಆದ್ದರಿಂದ ನೀನು ಮಹಾತ್ಮರಾದ ಸಜ್ಜನರಿಗೆ ಶರಣುಹೋಗು''

ನಂದರಾಮ:—ಬ್ರಾಹ್ಮಣನೇ, ಅಂಥ ಮಹಾತ್ಮರು ಈಗಿನ ಕಾಲದಲ್ಲಿ ಯಾರಿರುವರು?

ಬ್ರಾಹ್ಮಣ:—ಅಕ್ಕಲಕೋಟೆಯಲ್ಲಿ ಒಬ್ಬ ಯತಿಶ್ರೇಷ್ಠರಿರುವರು; ಅವರ ಕೃಪೆಯಾದರೆ ನಿನ್ನ ರೋಗವು ಅರಗಳಿಗೆಯಲ್ಲಿ ಹೋಗಬಹುದಾಗಿದೆ. ಆದ್ದರಿಂದ ಆ ಮಹಾತ್ಮರನ್ನೇ ಮನಸ್ಸಿನಲ್ಲಿ ಧ್ಯಾನಿಸುತ್ತ ಅವರ ಬಳಿಗೆ ಹೋಗು.

ಬ್ರಾಹ್ಮಣನ ಈ ಮಾತಿನಂತೆ ನಂದರಾಮನು ಅಕ್ಕಲಕೋಟೆಗೆ ಬಂದನು. ಅವನು ಅಸಹ್ಯವಾದ ರೋಗದಿಂದ ಪೀಡಿತನಾದ್ದರಿಂದ ಅವನಿಗೆ ರೋಗದ ಬಾಧೆಯು ಕಡಿಮೆಯಾದರೆ ಸಾಕಾಗಿತ್ತು. ಅವನು ಮಹಾರಾಜರನ್ನು ಕಂಡು ಭಕ್ತಿಯಿಂದ ನಮಸ್ಕರಿಸಿದನು. ಮಹಾರಾಜರ ಕೃಪಾದೃಷ್ಟಿಯು ಬಿದ್ದಕೂಡಲೇ ಅವನ ವ್ಯಥೆಯು ಕಡಿ ಕಡಿಮೆಯಾಗಲಾರಂಭಿಸಿ ಏಳು ದಿನಗಳಲ್ಲಿ ಪೂರ್ಣವಾಗಿ ವಾಸಿಯಾಯಿತು. ಯಾವ ಔಷಧೋಪಚಾರವೂ ಇಲ್ಲದೆ ಕೇವಲ ಮಹಾರಾಜರ ದರುಶನದಿಂದ ಇಂಥ ಅಸಾಧ್ಯ ರೋಗವು ಹೋದದ್ದಕ್ಕೆ ನಂದರಾಮನಿಗಾದ ಸಂತೋಷವನ್ನು ವರ್ಣಿಸಲೇ ತೀರದು. ಅವನು ಮಹಾರಾಜರ ಪ್ರೀತ್ಯರ್ಥವಾಗಿ ಬ್ರಾಹ್ಮಣ ಸಂತರ್ಪಣೆಯನ್ನು ಮಾಡಿಸಿದನು. ಅವನ ಭಕ್ತಿಗೆ ಮಹಾರಾಜರೂ ಸಂತೋಷಪಟ್ಟರು.

ನಂದರಾಮನು ಮಹಾರಾಜರಲ್ಲಿ ಅತ್ಯಂತ ಶ್ರದ್ಧೆಯನ್ನು ತಾಳಿದ್ದರೂ ಮನುಷ್ಯ ಸ್ವಭಾವಕ್ಕನುಸರಿಸಿ ವ್ರತ ಉಪವಾಸಗಳನ್ನು ಮಾಡಬೇಕೆಂಬ ಹುಚ್ಚು ಹೋಗಿದ್ದಿಲ್ಲ. ಅವನು ಸೋಮವಾರವ್ರತವನ್ನು ಮಾಡುತ್ತಿದ್ದನು. ರೋಗಗ್ರಸ್ತ

ನಾದಾಗ ಆ ವ್ರತವು ಉಪಾಯವಿಲ್ಲದೆ ನಿಂತುಹೋಗಿತ್ತು. ಈಗ ಮೈಯಲ್ಲಿ ಚೈತನ್ಯವುಂಟಾದ್ದರಿಂದ ಪುನಃ ವ್ರತವನ್ನು ನಡಿಸಬೇಕೆಂದು ಯೋಚಿಸಿದನು. ಪ್ರತ್ಯಕ್ಷ ಮಹಾರಾಜರನ್ನೇ ಕಂಡ ಬಳಿಕ ಇನ್ನೇತರ ಸಲುವಾಗಿ ವ್ರತೋಪಾಸನೆಗಳು ಎಂಬ ಅರಿವು ಅವನಿಗೆ ಆಗಲಿಲ್ಲ. ಪಾಪ! ಸಜ್ಜನರ ಮಹಿಮೆಯು ಅವನಿಗೆ ಹ್ಯಾಗೆ ಗೊತ್ತಾಗಬೇಕು? ಅವನು ಸೋಮವಾರ ದಿವಸ ಸಂಜೆಯ ಮುಂದೆ ಸ್ನಾನ ಮಾಡಿ ಈಶ್ವರ ದರುಶನಕ್ಕೆ ಹೋಗಬೇಕೆಂದು ಮಲ್ಲಿಕಾರ್ಜುನನ ಗುಡಿಗೆ ಹೊರಟನು. ನಂದರಾಮನನ್ನು ಪರೀಕ್ಷಿಸಬೇಕೆಂದು ಮಹಾರಾಜರು ಮಲ್ಲಿಕಾರ್ಜುನನ ಗುಡಿಯ ಕಟ್ಟೆಯ ಮೇಲೆಯೇ ಕುಳಿತಿದ್ದರು. ಆದರೂ ಮಹಾರಾಜರ ಈ ಕೃತಿಯು ಅವನಿಗೆ ತಿಳಿಯದೆ ಹೋಯಿತು. ಅವನು ನೆಟ್ಟಗೆ ಗುಡಿಯೊಳಗೆ ಹೋದನು. ಅಲ್ಲಿ ಅವನಿಗೆ ಶಿವಲಿಂಗವೇ ಕಂಡು ಬರಲಿಲ್ಲ. ಆಗ ಆತನು ಆಶ್ಚರ್ಯಚಕಿತನಾಗಿ ಎಲ! ಇದೇನು? ಈ ಗುಡಿಯಲ್ಲಿ ಈಶ್ವರಸ್ಥಾಪನೆಯನ್ನೇ ಮಾಡಿಲ್ಲವೋ ಅಥವಾ ನಾನು ಅಪಾತ್ರನೆಂದು ದೇವರು ನನಗೆ ದರುಶನಕೊಡಲೊಲ್ಲನೋ? ಇದರ ಚಮತ್ಕಾರವೇನು? ಎಂದು ಅಂದುಕೊಂಡನು. ಬಳಿಕ ಕೆಲಹೊತ್ತಿನಮೇಲೆ ಆತನಿಗೆ ಶಿವಲಿಂಗವಿರುವ ಸ್ಥಳದಲ್ಲಿ ಮಹಾರಾಜರು ಕುಳಿತದ್ದು ಕಂಡುಬಂದಿತು. ಕೂಡಲೆ ಅವನು ಆನಂದದಿಂದ ಗುಡಿಯೊಳಕ್ಕೆ ಹೋಗಲು ಮಹಾರಾಜರು ಅದೃಶ್ಯರಾದರು. ಶಿವಲಿಂಗವು ದೃಷ್ಟಿಗೆ ಬಿತ್ತು. ಈ ಎಲ್ಲ ಚಮತ್ಕಾರಗಳಿಂದ ಅವನ ಮನಸ್ಸು ಅತ್ಯಂತ ಆಶ್ಚರ್ಯಮಗ್ನವಾಯಿತು. ಅವನು ವಿಚಾರಮಾಡತೊಡಗಿದನು. ವಿಚಾರಾಂತ್ಯದಲ್ಲಿ ಅವನಿಗೆ ತಿಳಿದು ಬಂದದ್ದೇನಂದರೆ—"ಮಹಾರಾಜರೇ ಸಾಕ್ಷಾತ್ ಈಶ್ವರಾಂಶರಾಗಿದ್ದು ನಾನು ಅವರನ್ನು ಬಿಟ್ಟು ದೇವದರುಶನಕ್ಕೆ ಬಂದದ್ದು ತಪ್ಪಾಯಿತು. ನನ್ನನ್ನು ಎಚ್ಚರಗೊಳಿಸುವದಕ್ಕಾಗಿಯೇ ಮಹಾರಾಜರು ಈ ಬಗೆಯ ಚಮತ್ಕಾರವನ್ನು ವ್ಯಕ್ತಪಡಿಸಿದಂತೆ ತೋರುತ್ತದೆ. ಬರಿಯ ನನ್ನನ್ನಷ್ಟೇ ಯಾಕೆ? ಲೋಕದೊಳಗಿನ ಗುರುಭಕ್ತರನ್ನೆಲ್ಲ ಈ ಕೃತಿಯಿಂದ ಎಚ್ಚರಗೊಳಿಸಿದ ಹಾಗಾಯಿತು. ಯಾಕಂದರೆ, ಸಾಮಾನ್ಯ ಜನರಿಗೆ ಗುರುಧರ್ಮವು ತಿಳಿಯುವದಿಲ್ಲ. "ಗುರುಬ್ರಹ್ಮಾ-ಗುರುರ್ವಿಷ್ಣು ಗುರುದೇವ ಮಹೇಶ್ವರಃ" ಎಂದು ಬಾಯಿಂದ ಹೇಳುವರು ಮಾತ್ರ; ಈ ಪ್ರಕಾರ ಅವರ ನಿಶ್ಚಯವು ಇರುವದಿಲ್ಲ. ಗುರುಭಕ್ತರಾದ ನಾವು ಗುರುವಿನ ಹೊರತು ಪುಣ್ಯಸಾಧನೆಯ ಅನ್ಯಮಾರ್ಗಗಳನ್ನು ಕೈಕೊಳ್ಳಲಾಗದು. ಪತಿವ್ರತೆಯರಾದ ಸ್ತ್ರೀಯರಿಗೆ ಹ್ಯಾಗೆ ಪತಿಯ ಹೊರತು ಅನ್ಯದೇವರಿಲ್ಲವೋ ಹಾಗೆ ಗುರುಭಕ್ತರಾದವರಿಗೆ ಗುರುವಿನ ಹೊರತು ಅನ್ಯದೇವರಿಲ್ಲ.

ನಮ್ಮ ಎಲ್ಲ ವ್ಯವಹಾರಗಳು ಶ್ರೀ ಗುರುಮೂರ್ತಿಯ ಪ್ರೀತ್ಯರ್ಥವಾಗಿಯೇ ಇರಬೇಕು. ನಾನು ಧರ್ಮತಪ್ಪಿ ನಡೆದೆನು. ಮಹಾರಾಜರೇ ನನ್ನ ದೈವತವೆಂದು ನಂಬಿದ್ದರೂ ಸೋಮವಾರ ವ್ರತವನ್ನು ಮಾಡಬೇಕೆಂಬ ಬುದ್ಧಿಯು ನನಗೆ ಯಾಕೆ ಹುಟ್ಟಿತೋ ಏನೋ! ನನ್ನ ಗುರುಭಕ್ತಿಯಲ್ಲಿ ಹೀಗೆ ವ್ಯಭಿಚಾರ ಉಂಟಾಗಬಾರದೆಂದೇ ಸಮರ್ಥರಾದ ನನ್ನ ಗುರುಗಳು ಈ ಲೀಲೆಯನ್ನು ನನಗೆ ತೋರಿಸಿದರು. ನಾನು ಇತಃಪರ ಮಹಾರಾಜರ ಹೊರತು ಇನ್ನಾವ ವ್ರತೋಪಾಸನೆಗಳನ್ನೂ ಮಾಡಲಿಕ್ಕಿಲ್ಲ.''

ಈ ಪ್ರಕಾರ ವಿಚಾರಮಾಡುತ್ತ ನಂದರಾಮನು ಗುರುಗೃಹಕ್ಕೆ ಬಂದನು. ಅವನು ಬರುವಷ್ಟರಲ್ಲಿ ಮಹಾರಾಜರು ಮನೆಯಲ್ಲಿದ್ದಿಲ್ಲ. ನಂದರಾಮನು ಬಂದವನೇ ಮಹಾರಾಜರನ್ನು ಹುಡುಕತೊಡಗಿದನು. ಅವನು ಅವರ ಕೋಣೆಯಲ್ಲಿ ನೋಡಲು ಅಲ್ಲಿ ಅವನಿಗೆ ಶಿವಲಿಂಗವು ಕಂಡಿತಲ್ಲದೆ ಮಹಾರಾಜರು ಕಾಣಲಿಲ್ಲ. ಹೊರಗೆ ಬಂದನು. ಅಲ್ಲಿಯೂ ಶಿವಲಿಂಗವೇ, ಅವನು ಗುರುಗಳನ್ನು ಕಾಣದೆ ಬೆಪ್ಪನಾಗಿ ನಿಂತನು. ಅಷ್ಟರಲ್ಲಿ ಮಹಾರಾಜರು ಯಾವ ಕಡೆಯಿಂದಲೊ ಮನೆಯೊಳಕ್ಕೆ ಬಂದರು. ನಂದರಾಮನು ತುಂಬಾ ಸಂತೋಷಪಟ್ಟನು; ಮತ್ತು ಪ್ರೇಮಭರದಿಂದ ಗುರುಗಳ ಚರಣಕ್ಕೆರಗಲು, ಮಹಾರಾಜರು ಆತನನ್ನು ಹಿಡಿದೆತ್ತಿ ಭಕ್ತೋತ್ತಮಾ; ಅನಂತಜನ್ಮಗಳ ಪುಣ್ಯವು ನಿನ್ನ ಪದರಿನಲ್ಲಿದ್ದದರಿಂದಲೇ ನೀನು ಇಂದಿನ ಭಗವಲ್ಲೀಲೆಗಳನ್ನು ಕಣ್ಣಾರೆ ಕಂಡಿರುತ್ತೀ; ಶ್ರೀಸಾಂಬನು ಗುರುಭಕ್ತರ ಭಕ್ತಿಯು ಗುರುಗಳಲ್ಲಿಯೇ ಸ್ಥಿರವಾಗಿ ನಿಲ್ಲಲೆಂದು ಈ ಆಟವನ್ನು ನಿನಗೆ ತೋರಿಸಿರುತ್ತಾನೆ. ಇದನ್ನು ನೀನು ನೆನಪಿನಲ್ಲಿಡು; ಈಶ್ವರನ ಸಗುಣರೂಪದ ಗುರ್ತು ಜನರಿಗೆ ಆಗದ್ದರಿಂದಲೇ ಅವರು ನಿನ್ನಂತೆ ಮೋಸಹೋಗುತ್ತಾರೆ. ಶ್ರೀರಾಮ-ಶ್ರೀ ಕೃಷ್ಣ ಮೊದಲಾದವರನ್ನು ಭಕ್ತರೇ ದೇವರೆಂದು ಕರೆದರು; ಮತ್ತು ಅವರೇ ದೇವರೆಂದು ಪೂಜಿಸಿದರು. ಅಂತೆಯೇ ಈಗ ನಾವು ಶ್ರೀರಾಮ ಮೊದಲಾದವರನ್ನು ದೇವರೆಂದು ಪೂಜಿಸುವೆವು. ಇದಕ್ಕೆ ಶ್ರೀರಾಮಾದಿಗಳನ್ನು ದೇವರೆಂದು ತಿಳಿದ ಭಕ್ತರೇ ಕಾರಣರು. ಆ ಮಹನೀಯರ ಉಪಕಾರವನ್ನು ನಾವು ಸ್ಮರಿಸತಕ್ಕದ್ದು. ಇದರಂತೆ ಈಗಿನ ಕಾಲದಲ್ಲಿ ಈಶ್ವರನ ಸಗುಣಾವತಾರವನ್ನು ಯಾರು ಕಂಡುಹಿಡಿಯುವರೋ ಮತ್ತು ಯಾರು ಆ ಅವತಾರವನ್ನು ತ್ರಿಕರಣಪೂರ್ವಕವಾಗಿ ಭಜಿಸುವರೋ ಅವರೇ ಧನ್ಯರು; ಅವರಿಂದಲೇ ಆ ಸಗುಣಮೂರ್ತಿಯು ಪ್ರಕಟವಾಯಿತೆಂದು ತಿಳಿಯಬೇಕು. ನಿನಗೆ ಇಷ್ಟೊಂದು ರಹಸ್ಯವನ್ನು ತಿಳಿಸಿಕೊಡಲಿಕ್ಕೆ ಕಾರಣವಿಷ್ಟೇ;

ನಿನ್ನಲ್ಲಿ ಗುರುವಿನ ಹೊರತು ಅನ್ಯ ಉಪಾಸನೆಯು ಬರಬಾರದೆಂಬದೇ ನಮ್ಮ ಆಶಯುವಿರುವದು. ನೀನು ಯಾವ ರೂಪವನ್ನು ಕಂಡಿರುವೆಯೋ ಆ ರೂಪವನ್ನೇ ಭಜಿಸಬೇಕು; ಮತ್ತು ಆ ರೂಪದ ನಾಮವನ್ನೇ ಗಾನಮಾಡಬೇಕು; ಹಾಗು ಆ ರೂಪದ ಕೃತಿಗಳನ್ನೇ ಅನುಕರಿಸಬೇಕು. ಇದೇ ನಿಜವಾದ ಉಪಾಸನೆಯ ಮಾರ್ಗವು. ಇದಕ್ಕೇ ಗುರುಸಾಂಪ್ರದಾಯ ಧರ್ಮವೆಂದು ಕರೆಯುವರು. ಲೋಕದಲ್ಲಿ ಈಶ್ವರನ ಅನಂತ ಸಗುಣಾವತಾರಗಳಾಗಿರುವವು. ಒಂದೊಂದು ಅವತಾರಕ್ಕೆ ಒಂದೊಂದು ನಾಮವು ಇದ್ದೇ ಇರುವದು. ಈ ನಾಮಗಳು ಗುರುಭಕ್ತರಿಗೆ ಪ್ರಯೋಜನವಿಲ್ಲ. ಯಾರು ಗುರುಭಕ್ತರಾಗಿಲ್ಲವೋ ಯಾರಿಗೆ ಸಗುಣ ರೂಪಧರನಾದ ಸದ್ಗುರುವು ಸಿಕ್ಕಿರುವದಿಲ್ಲವೋ ಅಂಥವರು ಮಾತ್ರ ಹಲವು ನಾಮಗಳನ್ನು ಬಡಬಡಿಸುತ್ತ ಮನಬಂದಂತೆ ಹಂಬಲಿಸಬಹುದು. ಸುದೈವದಿಂದ ಸದ್ಗುರು ಲಾಭವನ್ನು ಹೊಂದಿದವರು ತಮ್ಮ ಗುರುವಿನಲ್ಲಿ ನಿಶ್ಚಯವಿಲ್ಲದೆ ಹೀಗೆ ಹಂಬಲಿಸುವದು ಶುದ್ಧ ತಪ್ಪಾಗುವದು.''

ಈ ರೀತಿಯಾಗಿ ಮಹಾರಾಜರು ಉಪಾಸನಾಧರ್ಮವನ್ನು ತಿಳಿಸಿಕೊಡಲು, ನಂದರಾಮನು ಅತ್ಯಂತ ಸಮಾಧಾನವನ್ನು ತಾಳಿದನು; ಮತ್ತು ಗುರುಚರಣಗಳಲ್ಲಿ ನಿಷ್ಠೆಯುಳ್ಳವನಾಗಿ ಜನ್ಮದ ಸಾರ್ಥಕ್ಯವನ್ನು ಮಾಡಿಕೊಂಡನು. ಅವನು ತನ್ನ ನಿಷ್ಠೆಯಿಂದ ಗುರುವೇ ಪರಶಿವನೆಂಬದನ್ನು ಜಗತ್ತಿಗೆ ತೋರಿಸಿಕೊಟ್ಟನು.

---

## ೧೧ ನೆಯ ಪ್ರಕರಣ.

### ದೇವದೃಷ್ಟಾಂತ.

ಮಮದಾಬಾದ ವೆಂಬ ಗ್ರಾಮದಲ್ಲಿ ಗೋವಿಂದಸಂತನೆಂಬೊಬ್ಬ ಗೃಹಸ್ಥನಿದ್ದನು. ಅವನು ತನ್ನ ಹೊಟ್ಟೆಶೂಲೆಯ ನಿವಾರಣಾರ್ಥವಾಗಿ ಗಾಣಗಾಪುರಕ್ಕೆ ಹೋಗಿ ಶ್ರೀ ದತ್ತಸೇವೆಯನ್ನು ಮಾಡತೊಡಗಿದನು. ಅವನಂತೆ ಇನ್ನೊಬ್ಬ ಗೃಹಸ್ಥನು ತನ್ನ ಕುಷ್ಠರೋಗ ನಿವಾರಣಾರ್ಥವಾಗಿ ಬಹು ದಿವಸಗಳಿಂದ ಸೇವೆ ಮಾಡು

ತ್ತಿದ್ದನು. ಆದರೂ ಅವನಿಗೆ ಶ್ರೀ ದತ್ತನಿಂದ ಅಪ್ಪಣೆಯು ಸಿಕ್ಕಿದ್ದಿಲ್ಲ. ಗೋವಿಂದ ಪಂತನು ಆ ಕುಷ್ಠ ರೋಗಿಯ ಜೊತೆಯಲ್ಲಿ ಸೇರಿ ದಿನಾಲು ಮಧುಕರಿಯ ಅನ್ನ ದಿಂದ ಪ್ರಾಣ ರಕ್ಷಣೆ ಮಾಡಿಕೊಳ್ಳುತ್ತ ಶ್ರೀ ಗುರುಚರಿತ್ರೆಯ ಪಾರಾಯಣ ವನ್ನು ಮಾಡತೊಡಗಿದನು. ತಿಂಗಳಾಯಿತು, ಎರಡು ತಿಂಗಳಾದವು, ಆಗುತ್ತಾ ಗುತ್ತ ಆರು ತಿಂಗಳುಗಳು ಕ್ರಮಿಸಿದವು. ಆದರೂ ಗೋವಿಂದಪಂತನಿಗೆ ಏನೂ ಆಜ್ಞೆಯಾಗಲಿಲ್ಲ. ಅವನ ಹೊಟ್ಟೆಶೂಲೆಯು ಅತ್ಯಧಿಕವಾಗಿ ಸರ್ವದಾ ಬಾಧೆಪಡಿ ಸತೊಡಗಿತು. ಒಂದು ದಿನ ಆತನು ಅತ್ಯಂತ ಪೀಡಿತನಾಗಲು ಶ್ರೀ ದತ್ತನನ್ನು ಪ್ರಾರ್ಥಿಸಿದನೇನಂದರೆ—ದತ್ತಾ ಕರುಣಾಳುವೇ, ನೀನು ಮಹಾತ್ಮನೆಂದೂ ದಯಾ ರಾಶಿಯೆಂದೂ ನಿನ್ನ ಬಳಿಗೆ ಶರಣು ಬಂದೆನು. ಈಗ ಆರು ತಿಂಗಳುಗಳ ವರೆಗೆ ನಿನ್ನ ಸೇವೆ ಮಾಡಿದರೂ ನಿನ್ನ ಮನಸ್ಸು ಕರಗಲಿಲ್ಲ. ಈ ದೀನನ ರೋಗ ನಿವಾರಣೆಯನ್ನು ಮಾಡಲಿಲ್ಲ. ಭಕ್ತ ವತ್ಸಲನೇ ಶರಣಾಗತರನ್ನು ನೀನು ಹೀಗೆ ಉಪೇಕ್ಷಿಸಬಹುದೇ? ನನ್ನ ರೋಗ ನಿವಾರಣೆಯು ನಿನ್ನಿಂದ ಆಗುತ್ತಿದ್ದರೆ ಮಾಡು; ಇಲ್ಲದಿದ್ದರೆ ಆಗುವದಿಲ್ಲೆಂದು ಹೇಳು. ನಾನು ಆತ್ಮಹತ್ಯೆ ಮಾಡಿಕೊಂಡು ನಿನ್ನ ಅಪಕೀರ್ತಿಯನ್ನು ಲೋಕದಲ್ಲಿ ಪ್ರಸಿದ್ಧಗೊಳಿಸುತ್ತೇನೆ.''

ಈ ಮೇರೆಗೆ ಗೋವಿಂದಪಂತನು ದತ್ತನನ್ನು ಕುರಿತು ಮಾತನಾಡಿ ಮಲಗಿ ಕೊಂಡನು. ಅಂದಿನ ರಾತ್ರಿಯಲ್ಲಿ ಅವನ ಸ್ವಪ್ನದಲ್ಲಿ ಶ್ರೀ ದತ್ತಾವಧೂತರು ಅವ ನನ್ನು ಕುರಿತು—''ಎಲೈ ಗೃಹಸ್ಥನೇ, ಏಳು ಏಳು. ನಮ್ಮ ಅಪಖ್ಯಾತಿಯನ್ನು ಮಾಡಬೇಕೆನ್ನುವ ನಿನಗೆ ಮೊದಲು ಅಪ್ಪಣೆ ಕೊಟ್ಟು ಕಳಿಸಬೇಕಾಗಿದೆ. ನೀನು ನಮ್ಮ ಮಹಿಮೆಯನ್ನು ಕೇಳಿ ಇಲ್ಲಿಗೆ ಬಂದಿರುವಿಯಷ್ಟೇ; ಆದರೆ ಈಗ ನಾವು ಇಲ್ಲಿರುವದಿಲ್ಲ. ಅಕ್ಕಲಕೋಟೆಯಲ್ಲಿ ವಾಸ ಮಾಡಿರುತ್ತೇವೆ. ಅಕ್ಕಲಕೋಟೆಯು ನಿಮ್ಮ ಊರಿಗೆ ಸಮೀಪವಿದ್ದು, ಇಷ್ಟು ದೂರ ಯಾಕೆ ಬಂದೆ? ನಿನಗೆ ಕಲ್ಯಾಣ ವಾಗಬೇಕೆಂಬ ಇಚ್ಛೆಯಿದ್ದರೆ ತಡಮಾಡದೆ ಅಕ್ಕಲಕೋಟೆಗೆ ಹೊರಡು; ಅಲ್ಲಿ ನಮ್ಮ ದರುಶನ ತಕ್ಕೊಂಡು ಸುಖಿಯಾಗು; ಹಂಡಿತನದಿಂದ ಇಲ್ಲಿಯೇ ಕುಳಿತು ಕೊಂಡರೆ ಯಾವ ಪ್ರಯೋಜನವನ್ನೂ ಹೊಂದಲಾರೆ'' ಎಂದು ಹೇಳಿದನು. ಮತ್ತು ಅದೃಶ್ಯನಾದನು.

ಈ ಪ್ರಕಾರ ಸ್ವಪ್ನದೃಷ್ಟಾಂತವಾಗಿ ದತ್ತಾವಧೂತರು ಕಾಣದಂತಾಗಲು ಗೋವಿಂದಪಂತನು ಎಚ್ಚತ್ತನು. ಸ್ವಪ್ನಸಂಗತಿಯು ಅವನ ಸ್ಮರಣೆಯಲ್ಲಿ ಚನ್ನಾ ಗಿದ್ದು ದತ್ತಾವಧೂತರ ಭವ್ಯಧ್ಯಾನವು ಅವನ ಕಣ್ಣಮುಂದೆ ಕಟ್ಟಿದಹಾಗಾಗಿತ್ತು;

ಆ ಮೂರ್ತಿಯ ಪ್ರಶಾಂತ ತೇಜಸ್ಸನ್ನು ನೆನಿಸಿ ಗೋವಿಂದ ಪಂತನಿಗೆ ತುಂಬಾ ಸಂತೋಷವಾಯಿತು. ಬೆಳಗಾಗುವವರೆಗೆ ಆತನು ಹಾಸಿಗೆಯ ಮೇಲೆ ದತ್ತಸ್ಮರಣೆ ಮಾಡುತ್ತ ಎದ್ದು ಕುಳಿತನು. ಬೆಳ್ಳಗೆ ಬೆಳಗಾಯಿತು; ಆತನು ಎದ್ದು ಮುಖ ಪ್ರಕ್ಷಾಲನಾದಿ ವಿಧಿಗಳನ್ನು ತೀರಿಸಿ ಕೊಳ್ಳುತ್ತಿರಲು, ಆತನಿಗೆ ಕುಷ್ಠರೋಗಿಯ ಭೆಟ್ಟಿಯಾಯಿತು. ಅವನಿಗೂ ರಾತ್ರಿಯಲ್ಲಿ ಅಕ್ಕಲಕೋಟೆಗೆ ಹೋಗಲು ದೃಷ್ಟಾಂತವಾಗಿತ್ತು. ಆದ್ದರಿಂದ ಅವನು ಅಕ್ಕಲಕೋಟೆಯು ಎಲ್ಲಿರುವದೆಂದು ಯೋಚಿಸುತ್ತಿದ್ದನು. ಈ ಉಭಯತರು ಕೂಡಿದ ಬಳಿಕ ತಮತಮಗಾದ ದೃಷ್ಟಾಂತವನ್ನು ಪರಸ್ಪರರ ಮುಂದೆ ಹೇಳಿದರು. ಬಳಿಕ ಕುಷ್ಠ ರೋಗಿಯು ಗೋವಿಂದ ಪಂತನನ್ನು ಕುರಿತು —ಪಂಡಿತನೇ, ಅಕ್ಕಲಕೋಟೆಯು ಎಲ್ಲಿರುವದು? ಅಲ್ಲಿ ಸಾಕ್ಷಾತ್ ದತ್ತಾತ್ರೇಯನೇ ಇರುವನಂತಲ್ಲ! ಅಲ್ಲಿಗೆ ಹ್ಯಾಗೆ ಹೋಗೋಣ! ನೀನು ಅಕ್ಕಲಕೋಟೆಯನ್ನು ಎಂದಾದರೂ ನೋಡಿರುವಿಯಾ? ಎಂದು ಕೇಳಿದನು ಆದಕ್ಕೆ—

ಗೋವಿಂದಪಂತನು—ಅಕ್ಕಲಕೋಟೆಯು ನಮ್ಮ ಊರಿನ ಸಮೀಪದಲ್ಲಿರುವದು. ಸಾವಿರಾರು ಸಾರೆ ಅದನ್ನು ನೋಡಿದ್ದೇನೆ.

ಕುಷ್ಠರೋಗಿ—ಹಾಗಾದರೆ ಬಹಳ ಒಳ್ಳೇ ಕೆಲಸವಾಯಿತಲ್ಲ! ಇನ್ನೊಂದು ಮಾತು ಏನಂದರೆ—ಪಂಡಿತನೆ, ನಿಮ್ಮ ಊರಬಳಿಯಲ್ಲಿರುವ ಇಂಥ ಮಹಾತ್ಮರನ್ನು ಬಿಟ್ಟು ನೀನು ಇಲ್ಲಿಯವರೆಗೇಕೆ ಬಂದೆ? ಆ ಮಹನೀಯರನ್ನು ನೀನು ಕಂಡಿರುವೆಯಾ?

ಗೋವಿಂದಪಂತ—ಅಕ್ಕಲಕೋಟೆಯಲ್ಲಿ ಒಬ್ಬ ಸನ್ಯಾಸಿಗಳಿರುವರು, ಅವರು ವಿಧಿನಿಷೇಧವಿಲ್ಲದೆ ಬೇಕಾದಲ್ಲಿ ಉಣ್ಣುವರು, ತಿನ್ನುವರು, ಅವರಿಗೆ ಸಾವಿರಾರು ಜನರು ನಡಕೊಳ್ಳುವರು. ನಾನು ಮಾತ್ರ ಇದು ವರೆಗೂ ಅವರ ಭೆಟ್ಟಿಗೆ ಹೋಗಿಲ್ಲ. ಯಾಕಂದರೆ ನನಗೆ ಅವರ ಆಚರಣೆಯು ಸೇರುವದಿಲ್ಲ. ಅವರು ಮಹಾತ್ಮರೆಂದು ಯಾರಾದರೂ ನನ್ನ ಮುಂದೆ ಹೇಳಬಂದರೆ ಅವರನ್ನು ನಾನು ಬೈದು ಕಳಿಸುತ್ತಿದ್ದೆನು. ಆದರೆ ಇನ್ನು ಮುಂದೆ ಅವರಿಗೇ ನಾನು ಶರಣು ಹೋಗಬೇಕಾಯಿತು. ಶ್ರೀ ದತ್ತಾವಧೂತರೇ ಹೇಳಿದ ಬಳಿಕ ಆ ಯತಿಗಳು ನಿಜವಾಗಿಯೂ ಮಹಾತ್ಮರಿರಬಹುದು. ನಾವು ಅಜ್ಞಾನಿಗಳು ನಮಗೆ ಮಹಾತ್ಮರ ಕೃತಿಗಳು ತಿಳಿಯುವದಿಲ್ಲ. ಅವರನ್ನು ಇದುವರೆಗೆ ನಿಂದಿಸುತ್ತಿದ್ದದ್ದಕ್ಕೆ ನನಗೆ ತುಂಬಾ ಪಶ್ಚಾತ್ತಾಪವಾಗಿದೆ. ನಾಳೆಗೆ ಇಲ್ಲಿಯ ಅನುಷ್ಠಾನವನ್ನು ಮುಗಿಸಿಕೊಂಡು ಹೊರಡೋಣ,

ಈ ಪ್ರಕಾರ ಸಂಭಾಷಣವಾದ ಬಳಿಕ ಅವರಿಬ್ಬರು ಸ್ನಾನಮಾಡಿ ತಮ್ಮ ನಿತ್ಯಾಚರಣೆಗಳನ್ನು ತೀರಿಸಿಕೊಂಡರು. ಮತ್ತು ಆ ದಿವಸ ತಮ್ಮ

ಶಕ್ತ್ಯನುಸಾರ ಬ್ರಾಹ್ಮಣ ಸಂತರ್ಪಣೆಯನ್ನು ಮಾಡಿ ಮರುದಿನ ಅವರು ಅಲ್ಲಿಂದ ಹೊರಟರು. ಪಯಣದ ಮೇಲೆ ಪಯಣ ಮಾಡುತ್ತ ಅಕ್ಕಲಕೋಟೆಗೆ ಬಂದು ಮುಟ್ಟಿದರು. ಅವರು ನೆಟ್ಟಗೆ ಮಹಾರಾಜರ ಮಂದಿರಕ್ಕೆ ಹೋದರು. ಆಗ ಮಹಾರಾಜರು ಸಣ್ಣ ಹುಡುಗರನ್ನು ಕೂಡಿಸಿಕೊಂಡು ಅವರೊಡನೆ ಆಟವಾಡುತ್ತ ಕುಳಿತುಕೊಂಡಿದ್ದರು. ಗೋವಿಂದಪಂತನೂ ಆ ಕುಷ್ಠ ರೋಗಿಯೂ ಮಹಾರಾಜರಿಗೆ ದಂಡವತ್ ನಮಸ್ಕಾರ ಮಾಡಿದರು. ಅವರನ್ನು ನೋಡಿ ಮಹಾರಾಜರು ನೀವು ಯಾರು? ಎಂದು ಪ್ರಶ್ನೆ ಮಾಡಿ ಉತ್ತರ ಕ್ಷಣದಲ್ಲಿ-ನೀವಲ್ಲವೇ? ನಮ್ಮನ್ನು ನಿಂದಿಸುವವರು? ಗೋವಿಂದಪಂತರೇ ಭ್ರಷ್ಟರಾದ ನಮ್ಮ ಬಳಿಗೆ ನಿಮ್ಮಂಥ ಸದಾಚಾರಿಗಳಿಗೆ ಬರುವದಕ್ಕೆ ಕಾರಣವೇನಾಯಿತು? ಎಂದು ನುಡಿದರು. ಗೋವಿಂದಪಂತನು ಅತ್ಯಂತ ಲಜ್ಜಿತನಾದನು. ಅವನಿಗೆ ಮಾತನಾಡಲಿಕ್ಕೆ ಬಾಯಿ ಬಾರದಾಯಿತು. ಅವನು ಪಶ್ಚಾತ್ತಾಪಯುಕ್ತನಾಗಿ ಅಧೋಮುಖದಿಂದ ನಿಂತುಕೊಂಡಿರಲು, ಮಹಾರಾಜರು ಅವನನ್ನು ಕುರಿತು—ಯಾಕೆ ಪಂತರೇ, ಸುಮ್ಮನೆ ಹೀಗೆ ನಿಂತರೆ ಹ್ಯಾಗೆ? ನೀವು ಬಾಯಿಬಿಚ್ಚಿ ಹೇಳದಿದ್ದರೆ ನೀವು ಬಂದಕಾರಣವು ನಮಗೆ ಹ್ಯಾಗೆ ತಿಳಿಯಬೇಕು? ನಾವೇನು? ಸರ್ವಜ್ಞರೇ, ಅಥವಾ ದೇವರೇ; ಗಾಣಗಾಪುರದಲ್ಲಿ ಶ್ರೀ ದತ್ತಾವಧೂತರು ಹೇಳಿದಂತೆ ನಮಗೆ ಹೇಳಲಿಕ್ಕೆ ಬಂದೀತೇ? ಎನಲು ಗೋವಿಂದಪಂತನು ಪಶ್ಚಾತ್ತಾಪದಿಂದ ನುಡಿದನೇನಂದರೆ—ಮಹಾ ಸ್ವಾಮಿಗಳೇ, ತಾವೇ ಸಾಕ್ಷಾತ್ ಶ್ರೀ ದತ್ತಾವಧೂತರಿದ್ದು, ಹೀಗೆ ಮಾತನಾಡಿ ನಮ್ಮನ್ನು ವಂಚಿಸುವಿರಿ! ನಾನು ಹೇಳಿಕೇಳಿ ಅಜ್ಞಾನಿಯು; ನನಗೆ ನಿಮ್ಮ ಮಹಾತ್ಮೆಯು ಇದುವರೆಗೂ ತಿಳಿಯಲಿಲ್ಲ, ನಿಮ್ಮನ್ನು ಹಲವು ವಿಧವಾಗಿ ನಿಂದಿಸಿದೆನೇ ಹೊರತು ನಿಮ್ಮ ಬಳಿಗೆ ಬಂದು ಕೃತಾರ್ಥನಾಗಲಿಲ್ಲ. ಅಜ್ಞಾನದಿಂದ ನಿಮ್ಮನ್ನು ತಿರಸ್ಕರಿಸಿ ಗಾಣಗಾಪುರಕ್ಕೆ ಹೋದೆನು; ಅಲ್ಲಿ ಶ್ರೀ ದತ್ತಾತ್ರೇಯರು "ನಾನು ಅಕ್ಕಲಕೋಟೆಯಲ್ಲಿರುವೆನೆಂದು" ದೃಷ್ಟಾಂತದಲ್ಲಿ ಹೇಳಿದರು. ಆಗ ನನಗೆ ತಮ್ಮನ್ನು ನಿಂದಿಸಿದ್ದಕ್ಕೆ ಪಶ್ಚಾತ್ತಾಪವಾಯಿತು. ತಾವೇ ಸಾಕ್ಷಾತ್ ಶ್ರೀ ದತ್ತಾವಧೂತರಿರುತ್ತೀರಿ ಇದರಲ್ಲಿ ನನಗೆ ತಿಲಮಾತ್ರವಾದರೂ ಸಂದೇಹವುಳಿದಿರುವದಿಲ್ಲ; ತಾವು ನನಗೆ ಅನುಗ್ರಹ ಮಾಡಿದರೂ ಸಂತೋಷವು; ನಿಗ್ರಹ ಮಾಡಿದರೂ ಸಂತೋಷವು."

ಈ ಪ್ರಕಾರ ಗೋವಿಂದಪಂತನು ಮಾತನಾಡಲು ಅವನ ನಿಶ್ಚಯವನ್ನು ತಿಳಿದು ಮಹಾರಾಜರಿಗೆ ಬಹಳ ಸಂತೋಷವಾಯಿತು, ಆಗ ಅವರು ಅವನಿಗೆ ಒಂದು ಉಪಾಯವನ್ನು ಹೇಳಿದರು, ಅದು ಏನಂದರೆ—"ಪಂತನೇ, ನೀನು ಕಲ್ಯಾ

ಣವನ್ನಿಚ್ಛಿಸುತ್ತಿದ್ದರೆ ಏಳು ದಿನಗಳವರೆಗೆ ಗೋಮೂತ್ರ ಹಾಗು ಗೋಮಯಗಳನ್ನು ಕಲಿಸಿ ಸೇವಿಸುತ್ತ ಹೋಗು! ಇದರಂತೆ ಈ ಕುಷ್ಠರೋಗಿಯೂ ಮಾಡಲಿ; ಅಂದರೆ ನಿಮ್ಮಿಬ್ಬರ ಬಯಕೆಗಳು ಕೈಗೂಡುವವು. ಗೋಮಾತೆಯ ಯೋಗ್ಯತೆಯು ಬಹು ದೊಡ್ಡದಿರುವದು.''

ಮಹಾರಾಜರ ಅಪ್ಪಣೆಯಂತೆ ಆ ಉಭಯ ರೋಗಿಗಳು ಪ್ರತಿನಿತ್ಯ ಗೋಮೂತ್ರ-ಗೋಮಯಗಳನ್ನು ಸೇವಿಸತೊಡಗಿದರು. ಹೀಗೆ ಏಳು ದಿವಸಗಳ ವರೆಗೆ ಮಾಡಲು ಅವರ ರೋಗವು ಹೇಳ ಹೆಸರಿಲ್ಲದೆ ಹೋಯಿತು. ಕುಷ್ಠರೋಗಿಯು ಸುವರ್ಣದಂತೆ ಕಾಂತಿಯುಕ್ತನಾದನು; ಗೋವಿಂದ ಪಂತನು ನಿರಾಮಯನಾದನು. ಆಗ ಅವರು ಮಹಾಜರ ಸನ್ನಿಧಿಯನ್ನು ಸೇರಿ ವಿನಯದಿಂದ ಕುಳಿತುಕೊಂಡರು. ಅವರಲ್ಲಿ ಮಹಾರಾಜರ ವಿಷಯವಾಗಿ ಅತ್ಯಂತ ಪ್ರೇಮವು ತುಂಬಿಕೊಂಡಿತ್ತು. ಯಾವ ಗೋವಿಂದಪಂತನು ಇದುವರೆಗೆ ಮಹಾರಾಜರನ್ನು ತಿರಸ್ಕರಿಸುತ್ತಿದ್ದನೋ ಆ ಗೋವಿಂದಪಂತನು ಈಗ ಅವರ ದಾಸಾನು ದಾಸನಾಗಿ ಕುಳಿತುಕೊಂಡಿದ್ದನು, ಹಲವುಜನ ಭಕ್ತರು ಮಹಾರಾಜರ ಪ್ರಸನ್ನ ಮುಖಮುದ್ರೆಯನ್ನು ನೋಡುತ್ತ ಕುಳಿತಿದ್ದರು. ಆಗ ಮಹಾರಾಜರು ಎಲ್ಲರನ್ನು ಕುರಿತು ನುಡಿದರೇನಂದರೆ—''ಭೂಲೋಕದಲ್ಲಿ ಆಕಳವು ಪರಮ ಪೂಜ್ಯವಿರುವದು, ಹೀಗಿದ್ದು ಅದರ ಹಿಂಸೆಯು ಬಹಳವಾಗಿ ಆಗ ತೊಡಗಿರುವದು. ಇದರಿಂದ ನಿಮ್ಮ ಅಕಲ್ಯಾಣವಾಗುವದು, ನೋಡಿರಿ! ಗೋಮೂತ್ರ-ಗೋಮಯಗಳ ಸೇವನೆಯಿಂದ ಈ ಉಭಯತರ ಭಯಂಕರ ರೋಗಗಳು ಉಪಶಮನವನ್ನು ಹೊಂದಿದವು. ಅಂತೇ ಪಂಚಗವ್ಯ ಸೇವನೆಯಿಂದ ಮನುಷ್ಯನಲ್ಲಿ ಪವಿತ್ರತೆಯುಂಟಾಗುವದೆಂದು ಧರ್ಮಶಾಸ್ತ್ರಕಾರರು ಬರೆದಿಟ್ಟಿರುವರು. ಆದರಿಂದ ಅವನಿಗೆ ಇಹ ಪರಗಳೆರಡರಲ್ಲಿಯೂ ಸೌಖ್ಯವಾಗುವದು. ಗೋರಸದ ಅಭಾವವಾದದ್ದರಿಂದಲೇ ಈಗಿನ ಕಾಲದಲ್ಲಿ ಪ್ರಾಣಿಗಳಿಗೆ ವಿವಿಧ ರೋಗಗಳು ಗಂಟುಬೀಳುತ್ತವೆ. ಇದನ್ನು ನೀವು ಲಕ್ಷ್ಯದಲ್ಲಿಡಿರಿ. ಯಾರು ದಿನಾಲು ಗೋರಸ ಪಾನಮಾಡುವರೋ ಮತ್ತು ಪಂಚಗವ್ಯ ಸೇವನೆ ಮಾಡುವರೋ ಅವರು ತೇಜಸ್ವಿಗಳಾಗುವರು. ನಿರಾಮಯರಾಗುವರು. ಆಸುರೀ ಭಾವದಿಂದ ವಿಮುಕ್ತರಾಗುವರು. ಇದಕ್ಕೆ ವಿರುದ್ಧವಾಗಿ ನಡೆದವರು ಕಷ್ಟಭೋಗಿಗಳಾಗುವರು.''

ಹೀಗೆ ಮಹಾರಾಜರು ಮಾತನಾಡಲು ಅಲ್ಲಿ ಕುಳಿತ ಪ್ರತಿಯೊಬ್ಬನ ಮನಸ್ಸಿನಲ್ಲಿ ಗೋಮಾತೆಯ ವಿಷಯವಾಗಿ ಪೂಜ್ಯಬುದ್ಧಿಯುತ್ಪನ್ನವಾಯಿತು. ಗೋವಿಂದ ಪಂತನೂ ಕುಷ್ಠರೋಗಿಯೂ ಗೋಮಯ ಗೋಮೂತ್ರಗಳ ಸೇವನೆಯಿಂದ ತಮ್ಮ

ಸ್ವಭಾವದಲ್ಲಾದ ಹೆಚ್ಚು-ಕಡಿಮೆಯೆನ್ನು; ಮಹಾರಾಜರ ಅಪ್ಪಣೆಯ ಮೇರೆಗೆ ಹೇಳಿದರು. ಬಳಿಕ ಮಹಾರಾಜರು ಅಲ್ಲಿಂದ ಎದ್ದು ಹೋಗಲು ಭಕ್ತಮಂಡಲಿಯು ತಮ್ಮ ತಮ್ಮ ಕಾರ್ಯಗಳಿಗಾಗಿ ಹೊರಟು ಹೋಯಿತು. ಗೋವಿಂದಪಂತನೂ ಕುಷ್ಠರೋಗಿಯೂ ಮಹಾರಾಜರಲ್ಲಿಯೇ ಸೇವೆಗೋಸ್ಕರ ನಿಂತುಕೊಂಡರು.

---

## ೧೨ ನೆಯ ಪ್ರಕರಣ.

### ಸೇವಾಧರ್ಮ.

ಯಾವದಾದರೊಂದು ಕೆಲಸಕ್ಕೆ ಪ್ರಾರಂಭಮಾಡುವದು ಸುಲಭವಿರುತ್ತದೆ. ಆದರೆ ಆ ಕೆಲಸವು ಸಿದ್ಧಿಗೆ ಹೋಗುವ ಹಾಗೆ ಮಾಡುವದು ಮಾತ್ರ ಕಠಿಣವಿರುತ್ತದೆ. ಅದರಂತೆ ಸತ್ಪುರುಷರ ಸೇವೆಯ ಸ್ಥಿತಿಯಾದರೂ ಇರುತ್ತದೆಂದು ಹೇಳಬಹುದು. ಬಹುಜನರು ಸಜ್ಜನರ ಸೇವೆಯನ್ನು ಮಾಡುವರು; ಆದರೆ ಅವರ ಸಂಪೂರ್ಣ ಕೃಪೆಗೆ ಪಾತ್ರರಾಗುವವರು ಮಾತ್ರ ವಿರಳ. ಯಾಕಂದರೆ, ಮನುಷ್ಯವೃತ್ತಿಯನ್ನು ತ್ಯಾಗಮಾಡಿ ಸಜ್ಜನರ ಸೇವೆಯಲ್ಲಿ ತೇರ್ಗಡೆಹೊಂದುವದು ಕಠಿಣವಿರುತ್ತದೆ. ಹೀಗೆ ಸಜ್ಜನರ ಸೇವೆಯಲ್ಲಿ ಒಮ್ಮೆಲೆ ತೀರ್ಗಡೆ ಹೊಂದುವದಕ್ಕಾಗದಿದ್ದರೂ ಆ ಸೇವೆಯ ಫಲವು ಅವರನ್ನು ಜನ್ಮ ಜನ್ಮಾಂತರಗಳಲ್ಲಾದರೂ ಸಜ್ಜನರ ಸೇವಕರನ್ನಾಗಿ ಮಾಡಿ ಕೊನೆಗೆ ಅವರನ್ನು ಉದ್ಧರಿಸುವದು.

ಸತ್ಪುರುಷರ ಸೇವೆಗೆ ಬರಬೇಕಾದರೆ ಮನುಷ್ಯನು ಆಶಾಪಾಶದಿಂದ ವಿಮುಕ್ತನಾಗಿರಬೇಕು. ಹಾಗಿರದಿದ್ದರೆ ಅವನು ಅವರ ಪರೀಕ್ಷೆಯಲ್ಲಿ ಪಾಸಾಗಲಾರನು. ಇದಕ್ಕೆ ಮಹಾರಾಜರ ಭಕ್ತನಾಧ ಜೋಳಪ್ಪನೇ ಸಾಕ್ಷಿಯಾಗಿದ್ದಾನೆ.

ಜೋಳಪ್ಪನು ತಪಗಟ್ಟಲೆ ಮಹಾರಾಜರನ್ನು ಸೇವಿಸಿ ಪುಣ್ಯವನ್ನು ಪದರಿನಲ್ಲಿ ಕಟ್ಟಿಕೊಂಡದ್ದರಿಂದ ಅವನನ್ನು ಧನ್ಯನೆಂದು ಕೊಂಡಾಡಿದರೂ ನಿಜವಾದ ಸೇವಾಧರ್ಮವು ಅವನ ಕೈಸೇರಲಿಲ್ಲೆಂದು ಅವನ ಚರಿತ್ರದಮೇಲಿಂದ ಹೇಳಬೇಕಾಗುತ್ತದೆ. ಯಾಕಂದರೆ ಜೋಳಪ್ಪನು ಮಹಾರಾಜರ ಸೇವೆಯಲ್ಲಿ ಆಸಕ್ತನಾಗಿರುವಾಗ ಸುಂದರಾಬಾಯಿ ಎಂಬೊಬ್ಬ ಸ್ತ್ರೀಯು ತನ್ನ ವ್ಯಾಧಿಯ ನಿವಾರಣೆಗಾಗಿ ಮಹಾರಾಜರ ಬಳಿಗೆ ಬಂದಳು. ಆಕೆಯು ಪ್ರತಿನಿತ್ಯ ಮಹಾರಾಜರ ಶುಶ್ರೂಷೆ

ಯನ್ನು ಮಾಡತೊಡಗಿದಳು. ಆಕೆಯು ಸೇವೆ ಮಾಡಹತ್ತಿದ್ದೇ ಸಾಕಾಯಿತು; ಚೋಳಪ್ಪನು ಮೆಲ್ಲಗೆ ಸೇವೆಯ ಒಂದೊಂದೇ ಅಂಗಗಳನ್ನು ಬಿಡುತ್ತ ನಡೆದನು. ಸ್ವಲ್ಪ ದಿವಸಗಳಲ್ಲಿ ಸುಂದರಾಬಾಯಿಯು ಮಹಾರಾಜರ ಎಲ್ಲ ಸೇವೆಗಳನ್ನು ತಾನೊಬ್ಬಳೇ ನಡಿಸತೊಡಗಿದಳು. ಆಗ ಒಂದು ದಿನ ಮಹಾರಾಜರು ಚೋಳಪ್ಪನನ್ನು ಕುರಿತು:—"ಚೋಳ್ಯಾ, ನೀನು ಕೈಯೊಳಗಿನ ಸೇವೆಯನ್ನು ಕಳಕೊಂಡೆ" ಎಂದು ನುಡಿದರು; ಆದರೂ ಚೋಳಪ್ಪನಿಗೆ ಗುರು ಸೇವಾಧರ್ಮವು ಲಕ್ಷ್ಯದಲ್ಲಿ ಬರಲಿಲ್ಲ; ಯಾವ ಸ್ತ್ರೀಯು ಚೋಳಪ್ಪನ ಎಲ್ಲ ಸೇವೆಯ ಬಾಬುಗಳನ್ನು ಆಕ್ರಮಿಸಿದ್ದಳೋ ಆಸ್ತ್ರೀಯು ಬಹಳ ಸಾಹಸಿಯಿದ್ದಳು. ಅವಳು ಚೋಳಪ್ಪನನ್ನು ಮಹಾರಾಜರ ಸನಿಯಕ್ಕೆ ಬರಗೊಡದಂತೆ ಮಾಡಬೇಕೆಂದು ಯೋಚಿಸಿದ್ದು ಒಂದು ದಿನ ಮಹಾರಾಜರು ಮಾಲೋಜಿರಾಯರಲ್ಲಿ ಪಾದ ಪೂಜೆಗೋಸ್ಕರ ಹೋದಾಗ ದೊರೆತ ಸಂಧಿಯನ್ನು ಆಕೆಯು ವ್ಯರ್ಥವಾಗಿ ಕಳಕೊಳ್ಳಲಿಲ್ಲ. ಯಾರೋ ಒಬ್ಬರು ಭಕ್ತರು ಮಹಾರಾಜರಿಗೆ ಒಂದು ಬೆಲೆಯುಳ್ಳ ಮುತ್ತಿನ ಹಾರವನ್ನು ಅರ್ಪಿಸಿದ್ದರು. ಅದು ಚೋಳಪ್ಪನ ವಶದಲ್ಲಿತ್ತು; ಅದನ್ನು ತರಿಸಿ ಮಹಾರಾಜರ ಕೊರಳಲ್ಲಿ ಹಾಕಿ ಪೂಜೆ ಮಾಡಬೇಕೆಂಬ ಅಂಶವನ್ನು ಸುಂದರಾಬಾಯಿಯು ಮಾಲೋಜಿರಾಯನ ಹೆಂಡತಿಗೆ ತಿಳಿಸಿದಳು. ಯಾಕಂದರೆ ಚೋಳಪ್ಪನು ಆ ಹಾರವನ್ನು ಯಾರ ಕೈಯಲ್ಲಿಯೂ ಕೊಡುವದಿಲ್ಲೆಂಬದು ಆ ಧೂರ್ತ ಸ್ತ್ರೀಗೆ ಗೊತ್ತಿತ್ತು. ಆಕೆಯು ಈ ಸೂಚನೆಯಂತೆ ಮಾಲೋಜಿಯ ಹೆಂಡತಿಯು ಚೋಳಪ್ಪನ ಬಳಿಗೆ ಹಾರವನ್ನು ಬೇಡಲು ಜವಾನದಾರನನ್ನು ಕಳಿಸಿದಳು. ಆದರೆ ಯಾವ ಕಾರಣದಿಂದಲೋ ಚೋಳಪ್ಪನು ಅದನ್ನು ಕೊಡದಾದನು, ಅದ್ದರಿಂದ ಆ ರಾಜಸತಿಯು ಸಿಟ್ಟಿಗೆದ್ದು ಗಂಡನ ಮುಂದೆ ಚೋಳಪ್ಪನ ವಿಷಯವಾಗಿ ಚಾಡಿಗಳನ್ನು ಹೇಳಿ ಅವನನ್ನು ಮಹಾರಾಜರ ಬಳಿಯಿಂದ ಹೊರಗೆ ಹಾಕಿಸಿದಳು. ಮಹಾರಾಜರು ಆಗುವ ಕೃತಿಯನ್ನೆಲ್ಲ ನೋಡುತ್ತ ಸುಮ್ಮನಿದ್ದರು. ಮುಂದೆ ಕೆಲವು ಕಾರಣಾಂತರಗಳಿಂದ ಸುಂದರಾಬಾಯಿಯು ಮಹಾರಾಜರ ಸೇವೆಯನ್ನು ಬಿಟ್ಟು ಹೊರಟು ಹೋದಳು. ಆಗ ಮಹಾರಾಜರು—"ಯಾರ ಪುಣ್ಯವು ಎಷ್ಟಿದೆಯೋ ಅಷ್ಟು ಫಲವು ಅವರಿಗೆ ಲಭಿಸುವದು ಹೆಚ್ಚಿನದು ಲಭಿಸಲಾರದು" ಎಂಬ ಉದ್ಗಾರಗಳನ್ನು ತೆಗೆದರು, ಮುಂದೆ ಮಹಾರಾಜರ ಸೇವೆಯು ಪಂಚರ ಮುಖಾಂತರವಾಗಿ ಸಾಗಿತು. ಸಂಸ್ಥಾನಿಕರ ಸಿಪಾಯಿಗಳು ಚೋಳಪ್ಪನನ್ನು ಮಹಾರಾಜರ ಬಳಿಗೆ ಸಹ ಬರಗೊಡುತ್ತಿದ್ದಿಲ್ಲ. ಒಂದು ದಿನ ಚೋಳಪ್ಪನು ಸಿಪಾಯಿಗಳ ಕಣ್ಣು ತಪ್ಪಿಸಿ ಮಹಾರಾಜರ ಬಳಿಗೆ ಬರಲು ಅವನನ್ನು

ನೋಡಿ ಮಹಾರಾಜರು—ಜೋಳ್ಯಾ, ನಿನಗೆ ಆಗ್ಗೇ ಹೇಳಲಿಲ್ಲವೇ ಸೇವೆಯನ್ನು ಕಳಕೊಳ್ಳಬೇಡವೆಂದು? ನೀನು ಕೇಳಲಿಲ್ಲ, ನೀನು ದ್ರವ್ಯದ ಆಶೆಯೊಂದನ್ನು ಬಿಡಲಿಲ್ಲ. ನಿನ್ನ ಹಣೇಬರಹವು! ಈಗ ನಮ್ಮ ಬಳಿಗೆ ಯಾಕೆ ಬರುವದಿಲ್ಲ? ಎನಲು, ಜೋಳಪ್ಪನು—ಸಿಪಾಯಿಗಳು ನನಗೆ ತ್ರಾಸಕೊಡುವರು. ಎಂದು ಹೇಳಿದನು. ಆಗ ಮಹಾರಾಜರು ಸಿಪಾಯಿಗಳನ್ನು ಕರೆಯಿಸಿ ನುಡಿದರೇನಂದರೆ—"ಮೂರ್ಖರಿರಾ, ಜೋಳಪ್ಪನಿಗೆ ಯಾಕೆ ತ್ರಾಸಕೊಡುವಿರಿ? ಸುಟ್ಟು ಬೂದಿಯಾದೀರಿ ಎಚ್ಚರಿಕೆ!"

ಈ ರೀತಿಯಾಗಿ ಮಹಾರಾಜರು ಗದ್ದರಿಸಲು, ಸಿಪಾಯಿಗಳು ಅಂಜಿ ಜೋಳಪ್ಪನ ಉಸಾಬರಿಯನ್ನು ಬಿಟ್ಟು ಬಿಟ್ಟರು. ಮುಂದೆ ಜೋಳಪ್ಪನು ಪ್ರತಿನಿತ್ಯ ಶ್ರೀ ಗುರುಗಳ ಬಳಿಗೆ ಬರತೊಡಗಿದನು. ಒಂದು ದಿನ ಏಕಾಂತದಲ್ಲಿ ಮಹಾರಾಜರು ಜೋಳಪ್ಪನನ್ನು ಕುರಿತು—"ಜೋಳಪ್ಪಾ, ನೀನು ಇಂದಿನವರೆಗೆ ನಮ್ಮ ಸೇವೆಯನ್ನು ಮಾಡಿದೆ, ನಿನಗೂ ನಿನ್ನ ಮನೆಯವರಿಗೂ ಹಲವು ರೀತಿಯಿಂದ ಕಷ್ಟಗಳನ್ನು ಕೊಟ್ಟೆನು. ಅದನ್ನು ನೀವು ಸಹನಮಾಡಿಕೊಂಡಿರಿ. ನಿನ್ನ ಮನಸ್ಸಿನಲ್ಲಿ ಶ್ರೀಮಂತನಾಗಬೇಕೆಂಬ ಬಯಕೆ ಇದ್ದದರಿಂದ ಆ ನಿನ್ನ ಬಯಕೆಯು ಕೈಗೂಡಿತು. ನೀನು ಶ್ರೀಮಂತಿಕೆಯನ್ನು ಅನುಭವಿಸುತ್ತಿರುವೆ. ಆದ್ದರಿಂದ ನಿನ್ನ ಸೇವಾಋಣವು ತೀರಿದಹಾಗಾಯಿತು. ಲೋಕದಲ್ಲಿ ಯಾರಾದರೂ ಗುರುಸೇವಕರಾಗಬೇಕೆನ್ನುತ್ತಿದ್ದರೆ ಅವರು ಮೊದಲು ನಿರಪೇಕ್ಷಿಗಳಾಗಬೇಕು. ಅಂದರೆ ಅವರ ಸೇವೆಯಭಾರವು ಸಜ್ಜನರಮೇಲೆ ಬೀಳುವದು. ಸಾಪೇಕ್ಷಿಗಳ ಸೇವಾಭಾರವು ಸಜ್ಜನರಮೇಲೆ ಬೀಳುವದಿಲ್ಲ; ಯಾಕೆಂದರೆ ಅವರ ಅಪೇಕ್ಷೆಯನ್ನು ಪೂರ್ಣಪಡಿಸಿಬಿಟ್ಟರೆ ಸಜ್ಜನರು ಋಣವಿಮುಕ್ತರಾಗುವರು. ಇದರಂತೆ ನಿನ್ನ ವಿಷಯವಾಗಿ ನಾವು ಋಣವಿಮೋಚನೆಯನ್ನು ಹೊಂದಿರುವೆವು. ಮುಂದೆ ಯಾವ ಜನ್ಮದಲ್ಲಿ ನಿನ್ನ ಉದ್ಧಾರಕಾಲಬರುವದೋ ನೋಡಬೇಕು. ಆದರೂ ನಿನಗೆ ಗುರುಸೇವಾಧರ್ಮವನ್ನು ಹೇಳುತ್ತೇನೆ ಕೇಳು, ಎಂದು ನುಡಿದು ಸೇವಾಧರ್ಮ ವಿಚಾರವನ್ನು ಹೇಳತೊಡಗಿದರು:—

"ಗುರುಸೇವಕನು ಗುರುವಿನ ಹೊರತು ಅನ್ಯದೇವತಾ ಉಪಾಸನೆಗಳನ್ನು ಮಾಡುತ್ತ ಕೂಡ್ರಬಾರದು. ಸರ್ವದಾ ಅವರ ಬಳಿಯಲ್ಲಿ ಜಾಗರೂಕನಾಗಿರಬೇಕು. ಗುರುಸೇವೆಯಲ್ಲಿ ಉಚ್ಚ-ನೀಚ ಕೆಲಸಗಳ ತಾರತಮ್ಯವನ್ನೆಣಿಸಬಾರದು. ಗುರುವು ಏಳುವಷ್ಟರಲ್ಲಿ ತಾನು ಏಳಬೇಕು. ಗುರುಗಳಿಗೆ ಸ್ನಾನಮಾಡಿಸಬೇಕು; ಅವರಿಗೇನಾದರೂ ವ್ರತನಿಯಮಗಳಿದ್ದರೆ ಅವಕ್ಕೆ ಅನುಕೂಲಮಾಡಿಕೊಡಬೇಕು; ಗುರು

ವಚನವೇ ವೇದಾಜ್ಞೆಯೆಂದು ಭಾವಿಸಬೇಕು. ಗುರುಗೃಹದಲ್ಲಿ ಸಾರಿಸುವದು-ಉಡುಗುವದು ಇತ್ಯಾದಿ ಕೆಲಸಗಳನ್ನು ನಿರಭಿಮಾನದಿಂದ ಮಾಡಬೇಕು. ಒಟ್ಟಿಗೆ ಅವನು ಪ್ರತಿಯೊಂದು ಕ್ಷಣವನ್ನು ಗುರುಸೇವೆಯಲ್ಲಿಯೇ ಕಳೆಯಬೇಕು. ಬಹಳ ಹೇಳುವದೇನು? ಶ್ವಾಸೋಚ್ಛ್ವಾಸಾದಿಗಳು ಕೂಡಾ ಗುರುಸ್ಮರಣೆಯಿಲ್ಲದೆ ನಡೆಯಬಾರದು. ಗುರುವಿನ ರೂಪವನ್ನು ಸರ್ವದಾ ಧ್ಯಾನಿಸಬೇಕು. ವಿಷಯಗಳನ್ನು ಭೋಗಿಸುವ ಬುದ್ಧಿಯನ್ನು ನಾಶಗೊಳಿಸಬೇಕು. ಜಗತ್ತಿನಲ್ಲಿ ತನ್ನ ಗುರುವನ್ನೇ ಅವಾಹಿಸಿ ನಡೆಯಬೇಕು. ಗುರುವಿನ ವಿನಹ ಅನ್ಯಪದಾರ್ಥಗಳೇ ಇಲ್ಲವೆಂಬ ನಿಶ್ಚಯವನ್ನು ತಿಳಿಯಬೇಕು. ಗುರುವಿನ ಮುಂದೆ ಸದಾ ಲೀನತೆಯಿಂದ ವರ್ತಿಸಬೇಕು. ಗುರುವಿನ ಸಮ್ಮುಖದಲ್ಲಿ ಶ್ರೇಷ್ಠತೆಯನ್ನು ಬಯಸಬಾರದು. ಗುರುಸೇವಕರಿಗೆ ಶ್ರೇಷ್ಠತೆಯ ಹಂಬಲವೇ ಇರಬಾರದು. ಯಾಕಂದರೆ ಜಗತ್ತನ್ನೆಲ್ಲ ಗುರುರೂಪವೆಂದು ಭಾವಿಸಿದ ಬಳಿಕ ತನಗೆ ಶ್ರೇಷ್ಠತೆಗೆ ಸ್ಥಳವೇ ಉಳಿಯುವದಿಲ್ಲ. ಈ ರೀತಿಯಾಗಿ ನಡೆದುಕೊಂಡರೆ ಗುರುಸೇವೆಯೆನಿಸುವದು. ಆ ಸೇವಕನು ಗುರುಕೃಪೆಗೆ ಪಾತ್ರನಾಗಿ ತಾನು ಉದ್ಧೃತನಾಗುವನಲ್ಲದೆ ಲೋಕವನ್ನೂ ಉದ್ಧರಿಸುವನು. ಇಂಥ ಸೇವಕನಾಗುವ ಸುಯೋಗವು ನಿನಗೆ ಒದಗಲಿಲ್ಲ. ಮುಂದೆ ಗುರುಸೇವಕನಾದರೆ ಇಂಥ ಸೇವಕನೇ ಆಗಬೇಕೆಂದು ಇಚ್ಛಿಸುತ್ತಿರು.''

ಈ ಪ್ರಕಾರ ಮಹಾರಾಜರು ಮಾತನಾಡಿ ಮೌನವನ್ನು ತಾಳಲು, ಹೋಳಪ್ಪನು ಸಂತೋಷಭರಿತನಾದನು. ಆದರೆ ತಾನು ಈ ರೀತಿಯಾಗಿ ಗುರು ಸೇವೆಯನ್ನು ಮಾಡಲಿಲ್ಲೆಂಬ ಅಸಮಾಧಾನವು ತತ್ಕ್ಷಣದಲ್ಲಿ ಅವನಲ್ಲಿ ಪ್ರಕಟವಾಯಿತು. ಗುರುಗಳು ಈ ದಿವಸ ಹೀಗೆ ಬೋಧಿಸಬೇಕಾದರೆ ಮುಂದಿನ ಜನ್ಮದಲ್ಲಾದರೂ ನನ್ನಿಂದ ಸೇವೆ ತಕ್ಕೊಳ್ಳುವ ಯೋಗವಿರಬಹುದೆಂದು ಆತನು ಸಮಾಧಾನಪಟ್ಟು ಮಹಾರಾಜರನ್ನು ಅಭಿವಂದಿಸಿ ಸ್ವಗೃಹಾಭಿಮುಖನಾಗಿ ತೆರಳಿದನು.

## ೧೫ ನೆಯ ಪ್ರಕರಣ.

### ಬ್ರಹ್ಮೈಕ್ಯ

ಪ್ರಿಯವಾಚಕರೇ, ಇಲ್ಲಿಯ ವರೆಗೆ ಮಹಾರಾಜರ ದಿವ್ಯಚರಿತ್ರವನ್ನು ಶ್ರವಣ ಮಾಡಿದಿರಿ. ಆ ಮಹಾತ್ಮರು ಭೂತಲದಲ್ಲಿ ಅವತರಿಸಿ ಹಲವು ವಿಧ ಲೀಲೆಗಳಿಂದ ಜನರಲ್ಲಿ ಸತ್ಕರ್ಮಾಭಿಲಾಷೆ, ದೈವಶ್ರದ್ಧೆ, ಆಸ್ತಿಕಭಾವ ಮೊದಲಾದವುಗ

ಳನ್ನು ಹುಟ್ಟಿಸಿದರು. ಅವರು ಸಾಕ್ಷಾತ್ ಪರಮಾತ್ಮನ ಅಂಶ ಸಂಭೂತರಾಗಿದ್ದರೂ ಅವತಾರ ಕೃತ್ಯವು ಮುಗಿದ ಬಳಿಕ ಮೃತ್ಯುಲೋಕದ ನಿಯಮಾನುಸಾರವಾಗಿ ಅವರು ತಮ್ಮ ಜಡದೇಹವನ್ನು ವಿಸರ್ಜಿಸಬೇಕಾಯಿತು. ಇಲ್ಲಿಯ ವರೆಗೆ ಅವರ ಸಗುಣರೂಪದ ವರ್ಣನೆಯನ್ನೂ ಲೀಲೆಗಳನ್ನೂ ಅಂತಃಕರಣ ಪೂರ್ವಕವಾಗಿ ಕೇಳಿದ ನಮ್ಮ ಭಾವಿಕ ವಾಚಕರಿಗೆ ಈಗ ಅವರ ಸಗುಣರೂಪದ ಉಪಸಂಹಾರವನ್ನು ಓದಬೇಕಾದರೆ ವಿಷಾದವೆನಿಸಬಹುದು! ಬರೆಯ ಬೇಕಾದರೆ ನಮಗೂ ವಿಷಾದವೆನಿಸುವದು!! ಆದರೆ ಸ್ವಲ್ಪ ವಿವೇಕವನ್ನು ತಂದುಕೊಂಡು ವಿಚಾರಿಸಿದರೆ ವಿಷಾದಕ್ಕೆ ಅವಕಾಶವುಳಿಯುವದಿಲ್ಲ. ಯಾಕಂದರೆ ಸಜ್ಜನರು ಜಡದೇಹವನ್ನು ಬಿಟ್ಟರೂ ಭಕ್ತರ ಹೃದಯವನ್ನು ಬಿಟ್ಟು ಕದಲುವದಿಲ್ಲ. ಅವರು ಸರ್ವದಾ ಭಕ್ತರನ್ನು ಬೆಂಬಿಡದೆ ಸಂರಕ್ಷಿಸುವರು, ಆದ್ದರಿಂದ ಸತ್ಪುರುಷರಿಗೆ ನಿಧನವೇ ಇಲ್ಲವೆಂದು ಹೇಳಬೇಕಾಗುವದು. ಇರಲಿ. ಪ್ರಸ್ತುತ ವಿಷಯವನ್ನು ಕೈಕೊಳ್ಳುವಾ.

ಮಹಾರಾಜರು ತಮ್ಮ ಅವತಾರ ಸಮಾಪ್ತಿಯನ್ನು ಯಾರ ಮುಂದೆಯೂ ಬಾಯಿ ಬಿಚ್ಚಿ ತಿಳಿಸದಿದ್ದರೂ ಕೃತಿಯಿಂದ ತಿಳಿಸುತ್ತ ಬಂದರು. ಆದರೆ ಅದು ಜನರಿಗೆ ತಿಳಿಯುತ್ತಿರಲಿಲ್ಲ. ಚೋಳಪ್ಪನು ಮನಸ್ಸಿನಲ್ಲಿ ಮಹಾರಾಜರು ತನ್ನ ಮನೆಯಲ್ಲಿಯೇ ಸಮಾಧಿಸ್ಥರಾಗಬೇಕೆಂದು ಬಯಸುತ್ತಿದ್ದನು; ಆದ್ದರಿಂದ ಅವನು ತನ್ನ ಮನೆಯ ಪಕ್ಕದಲ್ಲಿ ಮಹಾರಾಜರಿಗಾಗಿ ಒಂದು ಸುಂದರವಾದ ಸಮಾಧಿಯನ್ನು ಕಟ್ಟಿಸತೊಡಗಿದನು. ಸಮಾಧಿಯ ಕೆಲಸವು ಅರ್ಧಮರ್ಧ ಪೂರೈಸುತ್ತ ಬಂದಾಗ ಒಂದು ದಿನ ಮಹಾರಾಜರು ಅದರ ಬಳಿಗೆ ಹೋಗಿ—"ಚೋಳ್ಯಾ ಇದನ್ನೇನು ಮಾಡಿಸುತ್ತಿರುವೆ" ಎಂದು ಕೇಳಿದರು. ಚೋಳಪ್ಪನು ಮಾತನಾಡದೆ ಸುಮ್ಮನೆ ನಿಂತುಕೊಂಡನು. ಆಗ ಮಹಾರಾಜರು—"ಚೋಳ್ಯಾ ನಿನ್ನ ಅಭಿಪ್ರಾಯವು ನನಗೆ ಗೊತ್ತಾಗಿದೆ. ಮೊದಲು ನೀನು, ಆ ಬಳಿಕ ನಾನು" ಎಂದು ನುಡಿದು ಬೇರೆ ಕಡೆಗೆ ಹೋದರು. ಚೋಳಪ್ಪನು ಯಥಾಪ್ರಕಾರವಾಗಿ ಸಮಾಧಿಯ ಕಟ್ಟಡವನ್ನು ಮುಗಿಸಿದನು. ಕಟ್ಟಡವು ಮುಗಿದ ಕೆಲವು ದಿನಗಳಲ್ಲಿ ಚೋಳಪ್ಪನು ನಿರ್ನಿಮಿತ್ತವಾಗಿ ದೇಹ ಬಿಟ್ಟನು.

ಬಳಿಕ ಕೆಲವು ದಿವಸಗಳಮೇಲೆ ಮಹಾರಾಜರು ತಮ್ಮ ನಿರ್ಯಾಣದ ವಿಷಯಕವಾಗಿ ಹಲವು ಬಗೆಯಿಂದ ಭಕ್ತಮಂಡಲಿಗೆ ಸೂಚಿಸತೊಡಗಿದರು. ಆದರೂ ಅದರ ಗುರ್ತವು ಯಾರಿಗೂ ಹತ್ತಲಿಲ್ಲ. ಹೀಗಾಗುತ್ತ ಶಕೆ ೧೮೦೦ ನೇ ಸಂವತ್ಸರವು ಪ್ರಾಪ್ತವಾಯಿತು. ಚೈತ್ರ ಶುದ್ಧ ೧೫ ಯಿಂದ ಮಹಾರಾಜರ

ಅವಸಾನಕಾಲದ ಲಕ್ಷಣಗಳು ಜನರಿಗೆ ಸ್ಪಷ್ಟವಾಗಿ ಕಾಣತೊಡಗಿದವು. ಪೌರ್ಣಮೆಯು ದಿವಸ ಮಹಾರಾಜರು ತಾತ್ಯಾಸಾಹೇಬನೆಂಬೊಬ್ಬ ಭಕ್ತನ ಮನೆಯಲ್ಲಿ ಮಲಗಿಕೊಂಡಿದ್ದರು. ಒಂಭತ್ತು ತಾಸುರಾತ್ರಿಯ ಸುಮಾರಕ್ಕೆ ಮಹಾರಾಜರು ಹಾಸಿಗೆಯಮೇಲೆ ಎದ್ದು ಕುಳಿತರು. ಅವರ ಹಾಸಿಗೆಯ ಸಮೀಪದಲ್ಲಿ ಕಲ್ಲಿನ ಒಂದು ಕುಂಡವಿತ್ತು. ಬಳಿಯಲ್ಲಿ ಮಲಗಿದವರನ್ನು ಎಬ್ಬಿಸಿ ಆ ಕುಂಡವನ್ನು ಹೊತ್ತುಕೊಂಡು ನಿಲ್ಲಲು ಆಜ್ಞೆಯನ್ನು ಮಾಡಿದರು. ಮಹಾರಾಜರ ಆಜ್ಞೆಯನ್ನು ಪಾಲಿಸಲಿಕ್ಕೆ ಜನರು ತತ್ಪರರಿರುತ್ತಿದ್ದರು. ಎಚ್ಚರಾದವರಲ್ಲಿ ಒಬ್ಬನು ಆ ಕುಂಡವನ್ನು ಹೊತ್ತುಕೊಂಡು ನಿಂತನು. ಆ ಕೂಡಲೆ ಮಹಾರಾಜರು ಎದ್ದುನಿಂತು ಊರಹೊರಗಿರುವ ಒಂದು ಕೆರೆಯ ಬಳಿಗೆ ಹೋದರು; ಮತ್ತು ಅದರ ಒಳಭಾಗದ ಮೆಟ್ಟುಗಳಮೇಲೆ ಕುಳಿತರು. ಮಹಾರಾಜರು ಯಾವ ಲೀಲೆಯನ್ನು ತೋರಿಸುವರೋ ಎಂದು ಜನರು ಅವರನ್ನು ಹಿಂಬಾಲಿಸಿದ್ದರು. ಅನಂತರ ಮಹಾರಾಜರು ಕುಂಡವನ್ನು ಹೊತ್ತ ಸೇವಕನಿಗೆ "ಅದನ್ನು ಮೆಲ್ಲಗೆ ನೀರಲ್ಲಿ ಮುಳುಗಿಸು" ಎಂದು ಆಜ್ಞೆ ಮಾಡಿದರು. ಅವನು ಅದರಂತೆ ಮಾಡಲು ನೆರೆದ ಎಲ್ಲ ಜನರಿಗೂ ಶಂಖಧ್ವನಿಗೈಯಲು ಹೇಳಿದರು. ಎಲ್ಲರೂ ಅದರಂತೆ ಮಾಡಿದರು. ಈ ವಿಧಿಯನ್ನು ಮುಗಿಸಿ ಮಹಾರಾಜರು ಮನೆಗೆ ಬಂದು ಮಲಗಿಕೊಂಡರು. ಶ್ರೀ ಗುರುಗಳು ಹೀಗೆ ಯಾಕೆಮಾಡಿರಬಹುದೆಂಬ ಕಾರಣವು ಒಬ್ಬರಿಗೂ ತಿಳಿಯದಾಯಿತು. ಕಾರಣವನ್ನು ಕೇಳಲಿಕ್ಕೆ ಯಾರಲ್ಲಿಯೂ ಧೈರ್ಯವಿರಲಿಲ್ಲ. ಶಂಖಧ್ವನಿಗೈಯುವಂಥ ಅಮಂಗಲ ಕೆಲಸ ಮಾಡಿಸಿದ್ದರಿಂದ ಲೋಕಕ್ಕೆ ಏನು ಅರಿಷ್ಟವೋ ಎಂದು ಕೆಲವರು ತರ್ಕಿಸಿದರು; ಕೆಲವರು ಮಹಾರಾಜರು ದೇಹಬಿಡುವ ಲಕ್ಷಣವನ್ನು ವ್ಯಕ್ತಗೊಳಿಸಿದರು, ಎಂದು ಅಂದರು. ಹೀಗೆ ಹಲವರು ಹಲವು ರೀತಿಯಿಂದ ಮಾತನಾಡಿಕೊಳ್ಳತೊಡಗಿದರು.

ಮರುದಿನ ಮಹಾರಾಜರು ಅಸ್ತಮಾನದವರೆಗೆ ಏಳಲಿಲ್ಲ. ಭಗವಾನ್ ಸೂರ್ಯನು ಕ್ಷಿತಿಜವನ್ನು ಸೇರುತ್ತಿರಲು, ಎದ್ದರು; ಮತ್ತು ಯಾರ ಸಂಗಡ ಭಾಷಣಮಾಡದೆ ಊರಲ್ಲಿರುವ ಮುರಲೀಧರನ ಗುಡಿಗೆ ಹೋದರು. ಅಂದಿನ ರಾತ್ರಿಯನ್ನು ಆ ಗುಡಿಯಲ್ಲಿಯೇ ಕಳೆದರು. ಸುಮಾರು ಮೂರು ತಾಸು ರಾತ್ರಿಯ ಸಮಯಕ್ಕೆ ಮಹಾರಾಜರ ಮೈಯಲ್ಲಿ ನಡಗು ಉಂಟಾಗಿ ಭಯಂಕರ ಜ್ವರ ಬಂದವು. ಆದರೂ ಅವರು ಈ ಸಂಗತಿಯನ್ನು ಯಾರ ಮುಂದೆಯೂ ಹೇಳಲಿಲ್ಲ. ಬೆಳಗಾದ ಮೇಲೆ ಸ್ಮಶಾನಭೂಮಿಗೆ ಹೋದರು. ಅಲ್ಲಿ ಮೂರು ನಾಲ್ಕು ಚಿತೆಗಳು

ಉರಿಯುತ್ತಿದ್ದವು, ಸಂಗಡ ಬಂದವರಿಗೆ ಅವನ್ನು ತೋರಿಸಿ ಇವೇನೆಂಬದನ್ನು ಲಕ್ಷ್ಯದಲ್ಲಿಡಿರಿ ಎಂದು ಹೇಳಿದರು. ಇದೆಲ್ಲ ವಿಚಿತ್ರ ಪ್ರಕಾರವನ್ನು ನೋಡಿ ಭಕ್ತಮಂಡಲಿಯು ಗಾಬರಿಯಾಯಿತು. ಮಹಾರಾಜರು ನಮ್ಮನ್ನಗಲುವರೆಂದು ಅವರು ಸ್ಪಷ್ಟವಾಗಿ ತಿಳಿದರು. ಅನಂತರ ಮಹಾರಾಜರು ಅಲ್ಲಿಂದ ಒಂದು ಮೈಲಿನ ಮೇಲಿರುವ ನಾಗಣಹಳ್ಳಿ ಎಂಬ ಗ್ರಾಮಕ್ಕೆ ಹೋದರು. ಅಷ್ಟೊತ್ತಿಗೆ ಎರಡು ಪ್ರಹರಗಳು ಕ್ರಮಿಸಿದವು, ಆದರೂ ಮಹಾರಾಜರ ಸ್ನಾನವಿಲ್ಲ, ಭಿಕ್ಷೆಯಿಲ್ಲ, ಭಕ್ತ ಪರಿವಾರವು ವಿಷಾದದಿಂದ ಅವರನ್ನು ಹಿಂಬಾಲಿಸುತ್ತಿತ್ತು. ಆ ಹಳ್ಳಿಗೆ ಹೋಗುವ ಮೊದಲು ಹಾದಿಯಲ್ಲಿ ಹತ್ತಿದ ಒಂದು ದನದ ಹಟ್ಟಿಯಲ್ಲಿ ಮಹಾರಾಜರು ಕೆಲವು ಹೊತ್ತು ವಿಶ್ರಮಿಸಿದ್ದರು; ಭಕ್ತ ಪರಿವಾರವು ಡೇರೆಯನ್ನು ಹೊಡೆದು ಮಹಾರಾಜರಿಗೆ ನರಿಳು ಮಾಡಬೇಕೆಂದು ಹವಣಿಸಲು "ಆ ಡೇರೆಯು ನಮಗೆ ಬೇಕಾಗಿರುವದಿಲ್ಲ ಅದಕ್ಕೆ ಬೆಂಕಿಯನ್ನು ಹಚ್ಚಿ ಬಿಡಿರಿ" ಎಂದು ಆಜ್ಞೆಮಾಡಿದರು.

ಬಳಿಕ ಚೈತ್ರ ಬಹುಳ ೩ ದಿವಸ ಮಹಾರಾಜರು ಅಕ್ಕಲಕೋಟಿಗೆ ಬಂದರು. ಮತ್ತು ಕರ್ಜಾಳಕರ ಎಂಬವರ ವಾಡೆಯ ಹತ್ತರ ಇರುವ ವಟವೃಕ್ಷದಬಳಿಗೆ ಹೋದರು. ಆಗ ಮಹಾರಾಜರ ಮೈಯಲ್ಲಿ ಜ್ವರದ ತಾಪವು ವಿಶೇಷವಾಗಿತ್ತು. ಆದರೂ ಅವರು ಆ ಮರದ ಕೆಳಕ್ಕೆ ಕುಳಿತು, ಭಕ್ತಮಂಡಲಿಯನ್ನೆಲ್ಲ ಕರೆದು ಸದ್ಧರ್ಮದಿಂದ ನಡೆಯುವದಕ್ಕೆ ಬೋಧಿಸಿದರು. ಮುಂದೆ ಪಂಚಮಿಯಿಂದ ಅವರಿಗೆ ಆಮಾಂಶವು ಹತ್ತಿತು. ಮತ್ತು ಆಹಾರವು ಕಡಿಮೆಯಾಯಿತು. ಪ್ರಕೃತಿಯು ಕ್ಷೀಣಿಸುತ್ತ ನಡೆಯಿತು. ಮಹಾರಾಜರ ಭಕ್ತರಲ್ಲಿ, ಹಣಮಂತರಾವ ಘೋರ್ಪಡೆ ಎಂಬೊಬ್ಬ ಗೃಹಸ್ಥನು ಡಾಕ್ಟರನಿದ್ದನು. ಆತನು ಆಮಾಂಶಕ್ಕೆ ಔಷಧ ಕೊಡಲು ಆಮಾಂಶದ ಉಪದ್ರವವು ಕಡಿಮೆಯಾಯಿತು. ಆದರೆ ಜ್ವರದ ಬಾಧೆಯು ಕಡಿಮೆಯಾಗಲಿಲ್ಲ. ಮೂರು ನಾಲ್ಕು ಜನ ವೈದ್ಯರು ಮಾಡಿದ ಪ್ರಯತ್ನವೆಲ್ಲ ವ್ಯರ್ಥವಾಯಿತು. ಏಕಾದಶಿಯ ದಿವಸ ಮಹಾರಾಜರಿಗೆ ತ್ರಿದೋಷವು ಕೂಡಿತು. ವೈದಿಕ ವಿದ್ವಾನರು ಸೇರಿ ಮಹಾರಾಜರಿಗೆ ವಿಧಿವತ್ ಪ್ರಾಯಶ್ಚಿತ್ತವನ್ನು ಕೊಡಿಸಿದರು. ಪ್ರತಿಯೊಂದು ಸಂಕಲ್ಪವನ್ನು ಮಹಾರಾಜರು ಅತ್ಯಂತ ಉತ್ಸಾಹದಿಂದ ಉಚ್ಚರಿಸಿ ದಾನ ಧರ್ಮಗಳನ್ನು ಮಾಡಿದರು. ಎತ್ತು, ಆಕಳು, ಕುದುರೆ, ಮೊದಲಾದವುಗಳನ್ನು ದಾನವಾಗಿ ಕೊಟ್ಟರು. ಒಬ್ಬ ಭಕ್ತನು ಮಹಾರಾಜರಿಗೆ ಜರದ ಶಾಲುಜೋಡಿಯನ್ನು ಹೊಚ್ಚಿದನು. ಕೂಡಲೆ ಅದನ್ನು ತೆಗೆದು ಆಕಳಮೇಲೆ ಹೊಚ್ಚಿಸಿದರು. ಮಹಾರಾಜರು ದೇಹ ಬಿಡುವರೆಂಬ ಸುದ್ದಿಯು

ಊರತುಂಬ ಹಬ್ಬಿತು. ಭಕ್ತ ಮಂಡಲಿಯು ಮುಂದರಿದು ಬಂದು ನಮಗೆ ಮುಂದೇನಗತಿ? ಎಂದು ಕೇಳತೊಡಗಿತು. ಆಗ ಮಹಾರಾಜರು—

ಅನನ್ಯಾಶ್ಚಿಂತಯಂತೋ ಮಾಂ ಏಜನಾಃ ಪರ್ಯುಪಾಸತೇ ||
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ ||

ಎಂಬ ಗೀತಾ ಶ್ಲೋಕವನ್ನು ಉಚ್ಚರಿಸಿದರು ಮಾತ್ರ. ಬೇರೆ ಏನನ್ನೂ ಹೇಳಲಿಲ್ಲ.

ಬಳಿಕ ಮಹಾರಾಜರು ತಮ್ಮನ್ನು ಎಬ್ಬಿಸಿ ಕೂಡ್ರಿಸಲಿಕ್ಕೆ ತಿಳಿಸಿದರು. ಎದ್ದು ಕುಳಿತ ಕೂಡಲೆ ಮಹಾರಾಜರು ನಿಜಾನಂದದಲ್ಲಿ ಮಗ್ನರಾದರು! ಮಹಾರಾಜರು ಏಕಾದಶಿಯ ದಿವಸ ಯಾವ ವಟವೃಕ್ಷದ ಬುಡದಲ್ಲಿ ವಾಸಮಾಡಿದ್ದರೋ ಅದೇ ವಟವೃಕ್ಷದ ಬುಡದಲ್ಲಿ ದೇಹವಿಟ್ಟರು. ಆ ದಿವಸ ಶಕೆ ೧೮೨೦ ಚೈತ್ರ ಕೃಷ್ಣ ೧೩ ಯ ತಿಥಿಯಿತ್ತು. ಆ ಸ್ಥಳದಲ್ಲಿ ಈಗ ಒಂದು ದೇವಾಲಯವನ್ನು ಕಟ್ಟಿಸಿ ಅಲ್ಲಿ ಪಾದುಕೆಗಳನ್ನು ಸ್ಥಾಪಿಸಿರುತ್ತಾರೆ. ಇರಲಿ,

ಬಳಿಕ ಒಂದು ಸುಂದರವಾದ ವಿಮಾನವನ್ನು ಕಟ್ಟಿ ಅದರಲ್ಲಿ ಮಹಾರಾಜರ ಕಳೇವರವನ್ನು ಕೂಡ್ರಿಸಿದರು. ವೇದವೇತ್ತರಾದ ಬ್ರಾಹ್ಮಣರು ಅಭಿಷೇಕಮಾಡಿದರು. ಅನಂತರ ಮಂಗಳ ವಾದ್ಯಗಳ ಘೋಷದೊಡನೆ ಜೋಳಪ್ಪನು ಕಟ್ಟಿಸಿದ ಗುಹೆಯ ಬಳಿಗೆ ಬಂದರು. ವಿಧಾನಪೂರ್ವಕವಾಗಿ ಮಹಾರಾಜರ ಸಮಾಧಿಯು ಮಾಡಲ್ಪಟ್ಟಿತು. ಭಕ್ತಮಂಡಲಿಯು ವಿಷಣ್ಣವದನದಿಂದ ತಮ್ಮ ತಮ್ಮ ಗೃಹಗಳಿಗೆ ತೆರಳಿತು.

---

## ೧೪ ನೆಯ ಪ್ರಕರಣ.

### ಉಪಸಂಹಾರ.

ಪ್ರಿಯವಾಚಕರೇ, ಇಲ್ಲಿಗೆ ಮಹಾರಾಜರ ದಿವ್ಯ ಚರಿತ್ರವು ಸಂಪೂರ್ತಿಗೊಂಡಿತು. ಆದರೆ ಚರಿತ್ರೆಯು ಸಂಪೂರ್ತಿಯಾಯಿತೆಂದು ಹೇಳುವದಕ್ಕಿಂತ ವಾಚಕರಿಗೆ ನಾವು ಹೇಳತಕ್ಕ ವಿಷಯವು ಮುಗಿಯಿತೆಂದು ಹೇಳುವದು ಹೆಚ್ಚು ಸಮಂಜಸವಾಗಿ ತೋರುತ್ತದೆ. ಯಾಕೆಂದರೆ, ಮಹಾರಾಜರಂಥ ಮಹನೀಯರ ಚರಿತ್ರಗಳ ಅಂತವನ್ನು ಕಂಡು ಹಿಡಿಯುವವರಾರು? ಇಂದಿನ ವರೆಗೆ ಉಪಲಬ್ಧವಿದ್ದ ಸಂಗತಿಗಳನ್ನು ಒಟ್ಟು ಗೂಡಿಸಿದರೇ ಅದೊಂದು ಮಹಾ ಭಾರತದಷ್ಟು

ಗ್ರಂಥವಾಗುವದು. ಉಪಲಬ್ಧವಿಲ್ಲದ ಚರಿತ್ರೆಯು ಎಷ್ಟಿದೆಯೋ ಅದರ ಲೆಖ್ಖವೇ ಹತ್ತಲಾರದು. ಇರಲಿ.

ಮಹಾರಾಜರ ಚರಿತ್ರೆಯಲ್ಲಿ ಬೋಧ ತಕ್ಕೊಳ್ಳತಕ್ಕಂಥ ಸಂಗತಿಗಳು ಅನಂತವಿರುತ್ತವೆ. ನಾವು ಉಪೋದ್ಘಾತದಲ್ಲಿ ಬರೆದಂತೆ ಚರಿತ್ರೆಯನ್ನು ಅವಲೋಕಿಸಿದರೆ ನಮ್ಮ ಹಿಂದೂ ಸಮಾಜದ ನೈತಿಕ ಸ್ಥಿತಿಯು ಅವರ ಕಾಲಕ್ಕೆ ಹ್ಯಾಗಿತ್ತೆಂಬದು ವ್ಯಕ್ತವಾಗುತ್ತದೆ. ಭೂತ ದಯೆ ಮೊದಲಾದ ಗುಣಗಳು ಹ್ಯಾಗೆ ಕಡಿಮೆಯಾದವು; ಜನರ ಸ್ವಭಾವ ಧರ್ಮಗಳು ಎಷ್ಟು ಅನುದಾತ್ತವಾಗಿರುವವು ಎಂಬ ಸಂಗತಿಗಳು ಈ ಚರಿತ್ರದಿಂದ ಸ್ಪಷ್ಟವಾಗಿ ತಿಳಿದು ಬರುತ್ತವೆ.

ಸಜ್ಜನರು ಅವತರಿಸುವಾಗ ಯಾವದಾದರೊಂದು ಧರ್ಮವು ಗ್ಲಾನಿಯನ್ನು ಹೊಂದಿರಬೇಕೆಂಬದು ನಿರ್ವಿವಾದವಾದ ಮಾತಾಗಿರುವದು. ಮಹಾರಾಜರು ವಿಶೇಷವಾಗಿ ಜನರಲ್ಲಿ ಆಸ್ತಿಕ ಬುದ್ಧಿಯನ್ನು ಹುಟ್ಟಿಸಲಿಕ್ಕೆ ಪ್ರಯತ್ನ ಮಾಡಿದ್ದರಿಂದ ಅವರ ಕಾಲಕ್ಕೆ ಜನರಲ್ಲಿ ದೇವ ಲಂಡತನವು ಹೆಚ್ಚಿತ್ತೆಂದು ಒಡೆದು ಹೇಳಬೇಕಾಗುತ್ತದೆ.

ಮಹಾರಾಜರು ದುರ್ಜನರಿಗೆ ರೌದ್ರತೆಯನ್ನು ತೋರಿಸುತ್ತಿದ್ದುದರಿಂದ ಜನರಲ್ಲಿಯ ದೌರ್ಜನ್ಯವು ಕಡಿಮೆಯಾಗುವದಕ್ಕೆ ಅವರು ಹೀಗೆ ಮಾಡುತ್ತಿದ್ದರೆಂದು ಹೇಳಬೇಕಾಗುತ್ತದೆ. ಸಜ್ಜನರ ಪ್ರೀತಿಗೆ ಪಾತ್ರರಾಗಬೇಕೆನ್ನುವವರು ಎಂದೂ ದೌರ್ಜನ್ಯವನ್ನು ತಂದುಕೊಳ್ಳಬಾರದು. ದುರ್ಜನರಿಗೆ ಇಹ ಪರಗಳೆರಡರಲ್ಲಿಯೂ ಸೌಖ್ಯವಿರುವದಿಲ್ಲ. ಪ್ರಸ್ತುತ ಚರಿತ್ರದಲ್ಲಿ ಪ್ರಸಂಗೋಚಿತ ಉದಾಹರಣೆಗಾಗಿ ಉದಹರಿಸಲ್ಪಟ್ಟಿರುವ ದುರ್ಜನರು ಹ್ಯಾಗೆ ದುಃಖ ಹೊಂದಿರುವರೆಂಬದನ್ನು ವಾಚಕರು ವಿಚಾರಿಸತಕ್ಕದ್ದು; ಮುಖ್ಯವಾಗಿ ಮನುಷ್ಯನು ತನ್ನ ಶೀಲವನ್ನು ಕಾಯ್ದುಕೊಳ್ಳತಕ್ಕದ್ದು; ಶೀಲದಿಂದ ಚ್ಯುತರಾಗುವವರು ಮನುಷ್ಯತ್ವಕ್ಕೇ ಅಯೋಗ್ಯರೆನಿಸುವರು. ಸಜ್ಜನರನ್ನು ನೋಡಿಯಾಗಲಿ, ಅವರ ಕೀರ್ತಿಯನ್ನು ಕೇಳಿಯಾಗಲಿ, ಇಲ್ಲವೆ ಅವರ ಚರಿತ್ರವನ್ನು ಓದಿಯಾಗಲಿ ಶೀಲವನ್ನು ತಂದುಕೊಳ್ಳುವದೇ ನಿಜವಾದ ಸದ್ಧರ್ಮದ ಮಾರ್ಗವು. ಈ ಸದ್ಧರ್ಮಕ್ಕೇ ನಿವೃತ್ತಿಯೆಂದು ಕರೆಯಬಹುದು. ಯಾಕಂದರೆ ಯಾವನು ಸದ್ಧರ್ಮ ಪ್ರಿಯನಾಗುವನೋ ಅವನು ನಿವೃತ್ತಿ ಮಾರ್ಗದಲ್ಲಿಯೇ ವ್ಯವಹರಿಸುವನು. ಈ ಮಾರ್ಗವನ್ನು ಕಲಿಸುವದಕ್ಕಾಗಿಯೇ ಸಜ್ಜನರು ಮೇಲಿಂದ ಮೇಲೆ ಅವತರಿಸುವರು. ಆದ್ದರಿಂದ ಸಜ್ಜನರೇ ಲೋಕ ಹಿತ ಸಾಧನೆಗೆ ಕಾರಣರೆಂದು ಹೇಳಲಾಗುವದು.

ಸಂಪೂರ್ಣ.